ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 27 ಮಂಗಳವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 72 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಮೈಸೂರು ಮಿತ್ರ ಮಂಗಳವಾರ 27 ಜೂನ್ 2023

ವೀರ ಸಾವರ್ಕರ್ ಭಾಷಣ ಸ್ಪರ್ಧೆ



ಮೈಸೂರು, ಜೂ. 26– ಮೈಸೂರು ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ನಗರದ ಗೋಪಾಲಸ್ವಾಮಿ ಪಿಯು ಕಾಲೇಜಿನಲ್ಲಿ ವೀರ ಸಾವರ್ಕರ್ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಉದ್ಘಾಟನೆಯಲ್ಲಿ ವೈದ್ಯ ಡಾ.ಚಂದ್ರಶೇಖರ್ ಭಾಗವಹಿಸಿದ್ದರು. ಪ್ರತಿಷ್ಠಾನದ ಅಧ್ಯಕ್ಷೆ ಡಾ.ಎಸ್.ಯಶಸ್ವಿನಿ ಅಧ್ಯಕ್ಷತೆ ವಹಿಸಿದ್ದರು. ಭಾಗವಹಿಸಿದ್ದ 100 ಸ್ಪರ್ಧಿಗಳನ್ನು ಸಣ್ಣ ಗುಂಪುಗಳಲ್ಲಿ ವಿಂಗಡಿಸಿ ಭಾಷಣ ಸ್ಪರ್ಧೆ ನಡೆಸಲಾಯಿತು. ಅಂತಿಮ ಹಂತಕ್ಕೆ 10 ಜನರನ್ನು ಆಯ್ಕೆ ಮಾಡಲಾಯಿತು.

ಅದರಲ್ಲಿ ದೀಕ್ಷಿತ್ ನಾಯರ್ (ಪ್ರಥಮ), ನವೀನ್ ಆರ್.ಭಟ್ (ದ್ವಿತೀಯ) ಹಾಗೂ ಡಾ.ಸೌಭಾಗ್ಯಲಕ್ಷ್ಮಿ (ತೃತೀಯ) ಬಹುಮಾನ ಪಡೆದರು. ಎಸ್ ಆರ್.ಆನಂದ್, ಪೃಥ್ವಿ ಭಟ್ ಹಾಗೂ ವಿಶಾಖ ಅವರಿಗೆ ಸಮಾಧಾನಕರ ಬಹುಮಾನ ಘೋಷಿಸಲಾಯಿತು. ನೆನೆಪಿನ ಕಾಣಿಕೆ, ಪುಸ್ತಕದ ಜೊತೆ ಮೊದಲ ಬಹುಮಾನ 10000, ದ್ವಿತೀಯ ಬಹುಮಾನ 5000, ತೃತಿಯಕ್ಕೆ 3000 ಹಾಗೂ ಸಮಾಧಾನಕರ ಬಹುಮಾನದ ಜೊತೆ 1000 ರೂ.ಗಳನ್ನೂ ನೀಡಲಾಯಿತು. ಪ್ರತಿಷ್ಠಾನದ ಕಾರ್ಯದರ್ಶಿ ರಜತ್, ಖಜಾಂಚಿ ಸಂದೇಶ, ಮುಖಂಡರಾದ ರಾಕೇಶ್ ಭಟ್, ಶಿವಕುಮಾರ್, ಬಿ.ಸಿ.ಶಶಿಕಾಂತ್, ಮಧು ಭರತ್, ರಾಮತೇಜಸ್ವಿ, ಸುಹಾಸ್, ಧನುಷ್, ಶ್ರೀಹರಿ ಸೇರಿದಂತೆ ಇತರರು ಆಯೋಜನೆಯಲ್ಲಿ ಭಾಗಿಯಾಗಿದ್ದರು.

ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದಿಂದ ಕೆಂಪೇಗೌಡರ ಜಯಂತಿ ಆಚರಣೆ



ಮೈಸೂರು,ಜೂ.26–ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಸೋಮವಾರ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವವನ್ನು ಕೆಂಪೇಗೌಡರ ಭಾವ ಚಿತ್ರಕ್ಕೆ ಖ್ಯಾತ ಸಾಹಿತಿ ಡಾ.ಸಿ.ಪಿ.ಕೃಷ್ಣ ಕುಮಾರ್ ಪುಷ್ಪಾರ್ಚನೆ ಮಾಡುವುದರ ಮೂಲಕ ಸರಳವಾಗಿ ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ 'ಕನ್ನಡ ದೇಶದೊಳ್ ಒಕ್ಕಲಿಗರ ಪರಂಪರೆ' ಎಂಬ ಮಾಸಿಕ ಪತ್ರಿಕೆಯನ್ನು ಬಿಡುಗಡೆಯಾಗುತ್ತಿರುವುದು ಸಂತೋಷದ ವಿಚಾರ ಎಂದು ತಿಳಿಸಿದರು. ಕೆಂಪೇಗೌಡರು ಅಂದಿನ ಕಾಲದಲ್ಲಿಯೇ 1000 ಕೆರೆಗಳ ಸರದಾರ ಎಂದು ಹೆಸರುವಾಸಿಯಾಗಿದ್ದರು. ಅವರು ನಿರ್ಮಿಸಿದ ಕೆರೆ ಕಟ್ಟೆಗಳನ್ನು ಇಂದು ಅಭಿವೃದ್ಧಿಪಡಿಸುವಂತಹ ಕಾರ್ಯವನ್ನು ರಾಜಕಾರಣಿಗಳು ಮಾಡದೇ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕೆಂಪೇಗೌಡರು ಎಲ್ಲಾ ಜನಾಂಗವನ್ನು ಪ್ರೀತಿಸುತ್ತಿದ್ದರು. ಅವರ ದೂರದೃಷ್ಟಿಯಂತೆ ಇಂದು ಬೆಂಗಳೂರು ಅಭಿವೃದ್ಧಿಯತ್ತ ಸಾಗುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಚಾರ. ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರಿಟ್ಟಿರುವುದು ನಿಜಕ್ಕೂ ಕರ್ನಾಟಕಕ್ಕೆ ಗರಿ ಬಂದಂತಾಗಿದೆ. ಇದರಿಂದಾಗಿ ನಾಡಪ್ರಭು ಕೆಂಪೇಗೌಡರು 'ವಿಶ್ವ ಮಾನ್ಯರು' ಎಂದರು. ಇಂದು ನಾಲ್ವಡಿ ಕೃಷ್ಣರಾಜ ಒಡೆಯರನ್ನ ಗುಣಗಾನ ಮಾಡುತ್ತಿದ್ದೇವೆ. ಮೈಸೂರಿನಲ್ಲಿ ನಾಲ್ವಡಿಯವರು ಹೇಗೆ ಅಭಿವೃದ್ಧಿ ಮಾಡಿದ್ದರೋ ಹಾಗೆಯೇ ಬೆಂಗಳೂರನ್ನು ಅಭಿವೃದ್ಧಿ ಮಾಡುವಲ್ಲಿ ಕೆಂಪೇಗೌಡ ಅವರ ಪಾತ್ರ ಬಹಳ ದೊಡ್ಡದು. ಕೆಂಪೇಗೌಡರು ದಕ್ಷತೆಯಿಂದ ರಾಜ್ಯಭಾರ ಮಾಡಿದರು. ಕೆಲವು ವರ್ಷಗಳ ಕಾಲ ಸೆರೆವಾಸ ಅನುಭವಿಸಿದ್ದರು. ಇಂತಹ ಮಹಾನ್ ನಾಯಕನ ಜಯಂತಿಯನ್ನು ಆಚರಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಚಾರ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಇಡೀ ವಿಶ್ವದಲ್ಲೇ ನಾಡಪ್ರಭು ಹೆಗ್ಗಳಿಕೆಗೆ ಪಾತ್ರರಾಗಿರುವ ಒಬ್ಬರೇ ವ್ಯಕ್ತಿ ಎಂದರೆ ನಮ್ಮ ಕೆಂಪೇಗೌಡರು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಒಂಟಿಕೊಪ್ಪಲಿನ ವಿಸಿ ಕ್ಲಬ್ಬಿಗೆ ಕೋಶಾಧ್ಯಕ್ಷರಾಗಿ ಚುನಾಯಿತರಾದ ಬಿ.ಸಿ.ನಿಂಗರಾಜು ಅವರನ್ನು ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಸನ್ಮಾನಿಸಲಾಯಿತು.

ಡಾ.ಅಂಬೇಡ್ಕರ್ ಜಯಂತಿ



ಮೈಸೂರು,ಜೂ.26(ಎಂಕೆ)– ಮೈಸೂರಿನ ಲಲಿತಮಹಲ್ ನಗರ(ಆಲನಹಳ್ಳಿ ಬಡಾವಣೆ)ದಲ್ಲಿ ಡಾ.ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ಸ್ನೇಹ ಸೌಹಾರ್ದ ಸಂಘದ ವತಿಯಿಂದ ಡಾ.ಅಂಬೇಡ್ಕರ್ ಅವರ 132ನೇ ಜಯಂತಿ ಆಚರಿಸಲಾಯಿತು.

ಚಾಮರಾಜನಗರ ನಳಂದ ಬೌದ್ಧ ವಿಶ್ವವಿದ್ಯಾನಿಲಯ ಬಂತೇ ಬೋಧಿದತ್ತ ಥೇರಾ ಬಂತೇಜಿ, ಅಂಬೇಡ್ಕರ್ ಭಾವಚಿತ್ರ ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಜಯಂತಿ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು. ಚೆಲುವಾಂಬ ಆಸ್ಪತ್ರೆ ಆರ್‌ಎಂಒ ಡಾ.ಶಿವರಾಮಕೃಷ್ಣ, ಕೆ.ಆರ್.ಆಸ್ಪತ್ರೆಯ ಔಷಧೋಪಚಾರ ವಿಭಾಗದ ಡಾ.ಮಂಜುನಾಥ, ಕಣ್ಣಿನ ವಿಭಾಗದ ಡಾ.ಚೇತನ್‌ಕುಮಾರ್, ಚರ್ಮ ರೋಗ ವಿಭಾಗದ ಡಾ.ಬಂಗಾರು, ಡಾ.ದೀಕ್ಷಿತ್, ಮಕ್ಕಳ ತಜ್ಞ ಡಾ.ಸಂಪತ್, ಬೆಳ್ಳೂರಿನ ಬಿಜಿಎಸ್ ಮೆಡಿಕಲ್ ಕಾಲೇಜು ಮುಖ್ಯಸ್ಥ ಡಾ.ಎಂ.ಶಿವಕುಮಾರ್, ಡಾ.ಜಗನ್ನಾಥ್ ಮತ್ತಿತರರು ಉಪಸ್ಥಿತರಿದ್ದರು.

ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಯುವ ಪೀಳಿಗೆಯ ಪಾತ್ರ ಮಹತ್ವ

ಅಂತಾರಾಷ್ಟ್ರೀಯ ಮಾದಕ ದ್ರವ್ಯ–ಕಳ್ಳಸಾಗಣೆ ವಿರೋಧಿ ದಿನದಲ್ಲಿ ಸಿಟಿ ಕ್ರೈಂ ಬ್ರಾಂಚಿನ ಸುಭಾಷ್ ಚಂದ್ರ



ಮೈಸೂರು,ಜೂ.26–ಒಂದು ಸಮಾಜ ಆರೋಗ್ಯಕರವಾಗಿರಬೇಕೆಂದರೆ ಯುವ ಸಮುದಾಯ ದುಶ್ಚಟಗಳ ದಾಸ್ಯದಿಂದ ಹೊರಗುಳಿಯಬೇಕು. ಮಾದಕ ದ್ರವ್ಯ ಸೇವನೆ, ಮಾರಾಟ, ಕಳ್ಳಸಾಗಾಣೆಯಂತಹ ಸಮಾಜ ಘಾತುಕ ಕೆಲಸದಿಂದ ದೂರ ಉಳಿಯಬೇಕು ಎಂದು ಮೈಸೂರು ಸಿಟಿ ಕ್ರೈಂ ಬ್ರಾಂಚ್‌ನ ಸುಭಾಷ್ ಚಂದ್ರ ತಿಳಿಸಿದರು.

ರಾಮಕೃಷ್ಣನಗರದ ಜಯಲಕ್ಷ್ಮೀದೇವಿ ಪದವಿಪೂರ್ವ ಕಾಲೇಜಿನಲ್ಲಿ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ 'ಅಂತಾರಾಷ್ಟ್ರೀಯ ಮಾದಕ ದ್ರವ್ಯ ಮತ್ತು ಕಳ್ಳ ಸಾಗಣೆ ವಿರೋಧಿ ದಿನ'ದಲ್ಲಿ ಅವರು ಮಾತನಾಡುತ್ತಾ ಇಂದಿನ ಯುವ ಪೀಳಿಗೆ ಅತಿ ಬೇಗ ಸೈಬರ್ ಅಪರಾಧಗಳಿಗೆ ಗುರಿಯಾಗುತ್ತಿದ್ದಾರೆ. ಆ ಕುರಿತು ಹೆಚ್ಚಿನ ಅರಿವು ಮೂಡಿಸಿಕೊಳ್ಳುವುದು ಸೂಕ್ತ. ಸ್ವಚ್ಛಂದತೆಯ ಹೆಸರಿನಲ್ಲಿ ಸಮಾಜಕ್ಕೆ ಮಾರಕವಾಗುವ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿರುವುದು ವಿಷಾದನೀಯ ಎಂದರು.

ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ವಿದ್ಯಾರ್ಥಿಗಳಿಗೆ ಪ್ರಮಾಣವಚನ ಬೋಧಿಸಿ ದಿನಾಚರಣೆಗೆ ಸಂಬಂಧಿಸಿದ ಪೋಸ್ಟರ್ ಬಿಡುಗಡೆ ಮಾಡಿದರು. ಸಮಾರಂಭದಲ್ಲಿ ಸಿಟಿ ಕ್ರೈಂ ಬ್ರಾಂಚಿನ ಎಸ್ಐ ಸಿದ್ದೇಶ್, ಕಾಲೇಜಿನ ಪ್ರಾಂಶುಪಾಲರಾದ ಕುಮಾರಿ, ವೀರಪ್ರತಾಪ ಆಂಜನೇಯ ಸ್ನೇಹಿತರ ಬಳಗದ ಸ್ಕಂದ ಉಪಸ್ಥಿತರಿದ್ದರು.

ಇಂದು ಬೆಂಗಳೂರು–ಧಾರವಾಡ ವಂದೇ ಭಾರತ್ ರೈಲಿಗೆ ಚಾಲನೆ



ಬೆಂಗಳೂರು, ಜೂ.26– ಬೆಂಗಳೂರು–ಧಾರವಾಡ ನಡುವಿನ ರಾಜ್ಯದ ಎರಡನೇ ವಂದೇ ಭಾರತ್ ರೈಲು ಸಂಚಾರಕ್ಕೆ ಪ್ರಧಾನಿ ಮೋದಿ ಮಂಗಳವಾರ ವರ್ಚುವಲ್ ಮೂಲಕ ಚಾಲನೆ ನೀಡಲಿದ್ದಾರೆ.

ಇದರೊಂದಿಗೆ ಒಂದೇ ದಿನದಲ್ಲಿ ಐದು ವಂದೇ ಭಾರತ್ ಎಕ್ಸ್‌ಪ್ರೆಸ್ ಸೆಮಿ–ಹೈಸ್ಪೀಡ್ ರೈಲು ಸಂಚಾರಕ್ಕೂ ಹಸಿರು ನಿಶಾನೆ ತೋರಲಿದ್ದಾರೆ. ಉದ್ಘಾಟನೆ ಬಳಿಕ ಮಂಗಳವಾರ ಬೆಳಗ್ಗೆ ಸುಮಾರು 10.35ಕ್ಕೆ ಧಾರವಾಡ ರೈಲು ನಿಲ್ದಾಣದಿಂದ ಪ್ರಯಾಣ ಆರಂಭಿಸುವ ವಂದೇ ಭಾರತ್ ರೈಲು, ಹುಬ್ಬಳ್ಳಿ, ಹಾವೇರಿ, ರಾಣಿಬೆನ್ನೂರು, ಹರಿಹರ, ದಾವಣಗೆರೆ, ಚಿಕ್ಕಜಾಜೂರು, ಬೀರೂರು, ಅರಸೀಕೆರೆ, ತಿಪಟೂರು, ಅಮ್ಮಸಂದ್ರ, ತುಮಕೂರು, ದೊಡ್ಡಬೆಲೆ, ಚಿಕ್ಕಬಾಣಾವರ ಮತ್ತು ಯಶವಂತಪುರ ಜಂಕ್ಷನ್ ಮಾರ್ಗವಾಗಿ ಬೆಂಗಳೂರು ತಲುಪಲಿದೆ. ಬೆಂಗಳೂರಿನಿಂದ ನಿತ್ಯ ಬೆಳಗ್ಗೆ 5.45ಕ್ಕೆ ಹೊರಟು ಧಾರವಾಡ ನಿಲ್ದಾಣವನ್ನು ಮಧ್ಯಾಹ್ನ 12.45ಕ್ಕೆ ತಲುಪಲಿದೆ. ಮತ್ತೆ ಧಾರವಾಡ ನಿಲ್ದಾಣದಿಂದ ಮಧ್ಯಾಹ್ನ 1.15ಕ್ಕೆ ಹೊರಟು ರಾತ್ರಿ 8.10ಕ್ಕೆ ಬೆಂಗಳೂರಿಗೆ ಆಗಮಿಸಲಿದೆ.

ಮೈಸೂರು–ಚೆನ್ನೈ ಮಾರ್ಗದಲ್ಲಿ ಸಂಚರಿಸುತ್ತಿರುವ ದಕ್ಷಿಣ ಭಾರತದ ಮೊತ್ತ ಮೊದಲ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲನ್ನು ಕಳೆದ ವರ್ಷ ನವೆಂಬರ್‌ನಲ್ಲಿ ಮೋದಿ ಉದ್ಘಾಟಿಸಿದ್ದರು. ಧಾರವಾಡ–ಬೆಂಗಳೂರು ನಡುವಿನ ವಂದೇ ಭಾರತ್ ರೈಲು ಸಂಪೂರ್ಣವಾಗಿ ಕರ್ನಾಟಕದಲ್ಲಿಯೇ ಓಡಾಡುವ ಮೊದಲ ವಂದೇ ಭಾರತ್ ಎಕ್ಸ್‌ಪ್ರೆಸ್ ಆಗಿರುವುದು ವಿಶೇಷ.

ಮೈಸೂರು ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘ ಉದ್ಘಾಟನೆ

ಕುಲಕಸುಬು ಉಳಿಸಿ ಬೆಳೆಸುವ ಕಡೆ ಜನಾಂಗ ಕಾರ್ಯೋನ್ಮುಖರಾಗಬೇಕು: ಶಾಸಕ ಕೆ.ಹರೀಶ್‌ಗೌಡ



ಮೈಸೂರು, ಜೂ. 26– ಮೈಸೂರು ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಉದ್ಘಾಟನೆ ಸಮಾರಂಭ ಹಾಗೂ ಭಗವಾನ್ ವಿಶ್ವಕರ್ಮರ ಪೂಜಾ ಕಾರ್ಯಕ್ರಮ ಅಶೋಕ ರಸ್ತೆಯಲ್ಲಿರುವ ಕನ್ನಿಕಾ ಮಹಲ್‌ನಲ್ಲಿ ನಡೆಯಿತು.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಸಂಘವನ್ನು ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಎಷ್ಟೇ ತಂತ್ರಜ್ಞಾನ ಆವಿಷ್ಕಾರಗಳು ಮುಂದುವರೆದರೂ ಪುರಾತನ ಶೈಲಿಯ ವಿಶ್ವಕರ್ಮ ಜನಾಂಗದ ಕೆತ್ತನೆ ಕೆಲಸಕ್ಕೆ ಮಹತ್ವವಿದೆ, ಬೇಡಿಕೆಯಿದೆ. ಅದರಲ್ಲೂ ನಮ್ಮ ಹಳೇ ಮೈಸೂರು ಭಾಗದ ಶಿಲ್ಪಕಲೆ ಕೆತ್ತನೆ, ಚಿನ್ನಾಭರಣಗಳ ಶೈಲಿ, ಮತ್ತು ಮರಗೆಲಸಗಳ ಕೆಲಸ ನಿರ್ವಹಿಸುವ ವಿಶ್ವಕರ್ಮ ಜನಾಂಗದವರಿಗೆ ದೇಶ ವಿದೇಶದಲ್ಲಿ ಬೇಡಿಕೆಯಿದೆ. ಕುಲಕಸುಬು ಉಳಿಸಿ ಬೆಳೆಸುವ ಕಡೆ ಜನಾಂಗ ಕಾರ್ಯೋನ್ಮುಖರಾಗಬೇಕು. ಮೈಸೂರು ಸುತ್ತಮುತ್ತ ವಿಶ್ವಕರ್ಮ ಜನಾಂಗದ ಜನಸಂಖ್ಯೆ ಉತ್ತಮವಾಗಿದೆ. ಸಂಘಟನಾತ್ಮಕವಾಗಿ ಎಲ್ಲರೂ ಒಗ್ಗೂಡಬೇಕಿದೆ ಮತ್ತು ಉಳ್ಳವರು ಇಲ್ಲದವರಿಗೆ ಸಹಕಾರ ನೀಡಲು ಸಹಕಾರಿ ಸಂಘ ಸಂಸ್ಥೆಗಳ ಸ್ಥಾಪನೆಯ ಕಡೆ ಚಿಂತಿಸಿ ಎಂದು ಕರೆ ನೀಡಿದರು.

ಬುದ್ಧಿವಂತಿಕೆ, ದೂರದೃಷ್ಟಿ, ಕೌಶಲಗಳನ್ನು ಹೊಂದಿರುವ ವಿಶ್ವಕರ್ಮ ಸಮಾಜದವರು ಹುಟ್ಟು ತಂತ್ರಜ್ಞರಾಗಿದ್ದಾರೆ. ನಿರಂತರ ಸಾಮಾಜಿಕ ಸೇವೆಯಲ್ಲಿ ನಿರತರಾದ ಈ ಸಮುದಾಯ ಶೈಕ್ಷಣಿಕ, ಆರ್ಥಿಕ, ರಾಜಕೀಯ ಸೇರಿದಂತೆ ಎಲ್ಲ ರಂಗದಲ್ಲಿಯೂ ಸಬಲರಾಗಬೇಕು ಎಂದು ಆಶಿಸಿದರು.

ಇಡೀ ಮನುಕುಲಕ್ಕೆ ಅನ್ನ ನೀಡುವ ರೈತಾಪಿ ವರ್ಗದವರಿಗೆ ಅತ್ಯವಶ್ಯಕ ಈ ವಿಶ್ವಕರ್ಮದವರು. ಶ್ರಮಿಕ ವರ್ಗದ ಸ್ವಾಭಿಮಾನಿ ಜೀವಿಗಳು ಇವರು. ಪ್ರತಿಯೊಂದು ದೇವರ ಪರಿಕಲ್ಪನೆ ಕಟ್ಟಿಕೊಟ್ಟದ್ದು ಈ ಸಮಾಜ. ಹೀಗಾಗಿ ವಿಶ್ವಕರ್ಮರು ಇಲ್ಲದೆ ಈ ಜಗತ್ತು ಇಲ್ಲ ಎಂದು ಹರೀಶ್‌ಗೌಡರು ನುಡಿದರು.

ಇದೇ ಸಂದರ್ಭದಲ್ಲಿ ನೂತನವಾಗಿ ಅಧ್ಯಕ್ಷರಾಗಿ ನೇಮಕಗೊಂಡ ಮೈಸೂರು ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಸುರೇಶ್ ಗೋಲ್ಡ್ ಅವರನ್ನು ಸನ್ಮಾನಿಸಲಾಯಿತು. ನಗರಪಾಲಿಕ ಸದಸ್ಯರಾದ ರಮಣಿ, ಲೋಕೇಶ್ ಪಿಯಾ, ಸಂಘದ ಗೌರವಾಧ್ಯಕ್ಷ ರವಿಪ್ರಕಾಶ್, ರಾಘವೇಂದ್ರ ಇನ್ನಿತರರು ಭಾಗವಹಿಸಿದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.26– ವಿದ್ಯಾರ್ಥಿ ವೇತನಕ್ಕೆ ಹೆಬ್ಬಾರ್ ಶ್ರೀವೈಷ್ಣವ ಐಯ್ಯಂಗಾರ್ ಪಂಗಡಕ್ಕೆ ಸೇರಿದ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಂದ ಹೆಬ್ಬಾರ್ ಶ್ರೀವೈಷ್ಣವ ವೆಲ್‌ಫೇರ್ ಟ್ರಸ್ಟ್‌ನಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.


ವಿದ್ಯಾರ್ಥಿಯು ಪಿಯುಸಿ ಪರೀಕ್ಷೆ ತೇರ್ಗಡೆಯಾಗಿರಬೇಕು ಹಾಗೂ ಕಡ್ಡಾಯವಾಗಿ ಮುಂದೆ ತಾಂತ್ರಿಕ ವಿಭಾಗದಲ್ಲಿ ವ್ಯಾಸಂಗ ಮುಂದುವರೆಸಬೇಕು. ಹೆಚ್ಚಿನ ವಿದ್ಯಾರ್ಹತೆ ಹೊಂದಿರುವಂತಹ ವಿದ್ಯಾರ್ಥಿಗಳನ್ನು ಪರಿಗಣಿಸಲಾಗುತ್ತದೆ. ಆಸಕ್ತರು ಜುಲೈ 5ರೊಳಗೆ ಭರ್ತಿ ಮಾಡಿದ ಅರ್ಜಿಗಳನ್ನು ತಲುಪಿಸಬೇಕು. ಮಾಹಿತಿಗೆ ಹೆಚ್.ಜಿ.ಸತ್ಯನಾರಾಯಣ, ಮೊ.9480194204 ಸಂಪರ್ಕಿಸಿ.

ರಾಮು ಅವರನ್ನು ನಿಗಮ ಮಂಡಳಿ ಅಧ್ಯಕ್ಷರನ್ನಾಗಿ ನೇಮಿಸಲು ಆಗ್ರಹ

ಮೈಸೂರು,ಜೂ.26(ಎಂಟಿವೈ)– ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಅವರನ್ನು ಯಾವುದಾದರು ನಿಗಮ ಮಂಡಳಿ ಅಧ್ಯಕ್ಷರನ್ನಾಗಿ ನೇಮಿಸಬೇಕು ಎಂದು ವಿಶ್ವ ಋಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಾಲ್ಮೀಕಿ ನಿಂಗರಾಜು ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗಕ್ಕೆ ಸೇರಿದ ಬಿ.ಎಂ.ರಾಮು ಅವರು ಮೈಸೂರು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾಗಿ, ಕೆಪಿಸಿಸಿ ಸದಸ್ಯ, ಗ್ರಾಪಂ ಅಧ್ಯಕ್ಷ, ಟಿಎಪಿಸಿಎಂಸಿ ಅಧ್ಯಕ್ಷ, ಅವಿಭಜಿತ ಮೈಸೂರು–ಚಾಮರಾಜನಗರ ಜಿಪಂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಈ ಚುನಾವಣೆಯಲ್ಲಿ ವರುಣ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೆಲುವಿಗೆ ಕ್ಷೇತ್ರದ ಎಲ್ಲೆಡೆ ಪ್ರಚಾರ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಬಿ.ಎಂ.ರಾಮು ಅವರನ್ನು ನಿಗಮ ಮಂಡಳಿಗೆ ಅಧ್ಯಕ್ಷರಾಗಿ ನಿಯೋಜಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕೃಷ್ಣನಾಯಕ, ಸೋಮೇಶ್ವರ ನಾಯಕ, ನಾಗರಾಜ್ ರಮ್ಮನಹಳ್ಳಿ, ಮರಿಸ್ವಾಮಿ ನಾಯಕ, ಮಹದೇವನಾಯಕ ಇದ್ದರು.

ಇಂದು ಗುರುನಮನ ಕಾರ್ಯಕ್ರಮ



ಮೈಸೂರು,ಜೂ.26– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ವ್ಯಾಸರಾಜ ಮಠ(ಸೋಸಲೆ)ದ ಪೀಠಾಧಿಪತಿಗಳಾದ ಶ್ರೀ 1008 ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರ ಸಪ್ತಮ ಪೀಠಾರೋಹಣ ಮಹೋತ್ಸವ ಅಂಗವಾಗಿ ಜೂ.27ರಂದು ಸಂಜೆ 6 ಗಂಟೆಗೆ ಶ್ರೀ ವ್ಯಾಸತೀರ್ಥ ವಿದ್ಯಾಪೀಠದಲ್ಲಿ ಗುರುನಮನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆಸಕ್ತ ಭಗವದ್ಭಕ್ತರು ಗುರುನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀಪಾದರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ವ್ಯಾಸತೀರ್ಥ ವಿದ್ಯಾಪೀಠದ ಪ್ರಕಟಣೆ ತಿಳಿಸಿದೆ.



ಮಂಡ್ಯ ಜಿಲ್ಲೆಯ ರೇಷ್ಮೆ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಶಿವಲಿಂಗಯ್ಯ ನೇತೃತ್ವದಲ್ಲಿ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರನ್ನು ಭೇಟಿ ಮಾಡಿ ರೇಷ್ಮೆ ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಚಾಮರಾಜನಗರ ಶಾಸಕ ಪುಟ್ಟರಂಗಶೆಟ್ಟಿ, ಕೆ.ಆರ್.ನಗರ ಶಾಸಕ ಡಿ.ರವಿಶಂಕರ್, ರೈತ ಮುಖಂಡರು ಉಪಸ್ಥಿತರಿದ್ದರು.

ನಿಧನ

ಜಮ್ಮಡ ಗಂಗಮ್ಮ




ಮೈಸೂರು,ಜೂ.26–ಮೈಸೂರಿನ ವಿ.ವಿ.ಮೊಹಲ್ಲಾದ 12ನೇ ಕ್ರಾಸ್ ನಿವಾಸಿ ದಿವಂಗತ ಜಮ್ಮಡ ಎಂ.ಪೂಣಚ್ಚ ಅವರ ಪತ್ನಿ ಜಮ್ಮಡ ಗಂಗಮ್ಮ (ಪಾಲೇಕಂಡ) ಅವರು ಸೋಮವಾರ ಬೆಳಗ್ಗೆ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು. ಮೃತರು ಪುತ್ರ ಜೆ.ಪಿ.ಅಯ್ಯಣ್ಣ (ಗಣೇಶ್), ಸೊಸೆ ಸಂಧ್ಯಾ, ಮೊಮ್ಮಕ್ಕಳಾದ ಸುರಿನಾ ಮತ್ತು ಸಿಮ್ರಾನ್, ಅಳಿಯ ಶ್ರೇಯಸ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ಸೋಮವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೇಮಮ್ಮ



ಹುಲ್ಲಹಳ್ಳಿ ಗ್ರಾಮದ ದಿವಂಗತ ಶ್ರೀನಿವಾಸ ಮೂರ್ತಿ (ಅಪ್ಪಣ್ಣ) ಅವರ ಪತ್ನಿ ಶ್ರೀಮತಿ ಪ್ರೇಮಮ್ಮ (84) ಇತ್ತೀಚೆಗೆ ಮೈಸೂರಿನಲ್ಲಿ ನಿಧನರಾದರು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.6.2023 ಮಂಗಳವಾರ, ಮಳೆ ನಕ್ಷತ್ರ: ಆರಿದ್ರಾ 22.06.2023ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9ರಿಂದ ಗಿರಿಜಾ ಕಲ್ಯಾಣ, ಸಂಜೆ 6 ಗಂಟೆಯಿಂದ ನಾದವಿಜಯಶ್ರೀ, ಯಾದವಗಿರಿ, ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀಶಂಕರ ಪ್ರಾರ್ಥನಾ ಮಂದಿರ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** 'ಕಣ್ಣಿನ ಅಲರ್ಜಿ' ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಹೆಲಿಪ್ಯಾಡ್ ಹತ್ತಿರ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಮಹಾವಾರಾಹಿ ಗುಪ್ತ (ಆಷಾಢ) ನವರಾತ್ರಿ ಮಹೋತ್ಸವ, ಬೆಳಗ್ಗೆ 10ಕ್ಕೆ ಶ್ರೀಚಕ್ರಾರ್ಚನೆ, ನವಾವರಣ ಪೂಜಾ, ಮಧ್ಯಾಹ್ನ 1ಕ್ಕೆ ಸಗ್ರಹಮಖ ಚಂಡಿಯಾಗ, ಸ್ಥಳ: ತ್ರಯೀನ್ಯಾಸ್ ಫೌಂಡೇಷನ್ ಆವರಣ, ಜಯಲಕ್ಷ್ಮಿಪುರಂ.

■ **ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಪಠ್ಯೇತರ ಚಟುವಟಿಕೆಗಳ ಸಮಿತಿ:** ಡಾ.ರಾಜ್‌ಕುಮಾರ್ ಸ್ಮಾರಕ ಅಂತರ ಕಾಲೇಜು ಗೀತ ಗಾಯನ ಸ್ಪರ್ಧೆ, ಉದ್ಘಾಟನೆ: ಶ್ರೀಮತಿ ಅಶ್ವಿನಿ ಪುನೀತ್‌ರಾಜ್‌ಕುಮಾರ್, ಮುಖ್ಯ ಅತಿಥಿಗಳು: ಪ್ರಾಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಪ್ರೊ.ಸಿ.ಎ.ಶ್ರೀಧರ್, ಉಪಸ್ಥಿತರು: ಪ್ರೊ.ವಿ.ಷಣ್ಮುಗಂ, ಪ್ರೊ.ಸಿ.ಈ.ಲೋಕೇಶ್, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ, ಅನುಭೂತಿ ಆರ್ಟ್ & ಕಲ್ಚರಲ್ ಟ್ರಸ್ಟ್:** ಕಲಾವಿದ ಎಂ.ಎಲ್. ಸೋಮವರದ ಮಂಡ್ಯ ಇವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ರಿಂದ.

■ **ಬಾಸುದೇವ ಸೋಮಾನಿ ಕಾಲೇಜು :** ಕ್ರೀಡೆ, ಎನ್‌ಎಸ್‌ಎಸ್, ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ, ಡಾ.ಟಿ.ರಮೇಶ್ ಸಂಪಾದಕತ್ವದ ಕೃತಿ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ: ರಾಮಕೃಷ್ಣ ವಿದ್ಯಾಶಾಲೆಯ ಕರೆಸ್ಪಾಂಡೆಂಟ್ ಶ್ರೀ ಸ್ವಾಮಿ ಮಹಾಮೇಧಾನಂದ, ಬಹುಮಾನ ವಿತರಣೆ: ಐಟಿ ಮಾಜಿ ಜಂಟಿ ನಿರ್ದೇಶಕ ಡಾ.ಕಾ.ರಾಮೇಶ್ವರಪ್ಪ, ಪ್ರಶಂಸನಾ ಪತ್ರ ವಿತರಣೆ: ಡಾ.ಎಂ.ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು: ಕುಬೇರ್ ಪಿ.ಗೌಡ, ಶ್ರೀಮತಿ ಎಸ್.ಪ್ರಭಾ, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಡಾ.ಎಂ.ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ, ಸಾನ್ನಿಧ್ಯ: ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾರ್ಯಕ್ರಮ ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಭಾವಚಿತ್ರಕ್ಕೆ ಪುಷ್ಪಾರ್ಚನೆ: ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ:ಕರ್ನಾಟಕ ಕಲಾಮಂದಿರ, ಬೆಳಗ್ಗೆ 11.30ಕ್ಕೆ

■ **ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ ಆಪರೇಟಿವ್ ಸೊಸೈಟಿ:** ಮೈಸೂರು ಶಾಖೆಯ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಾಸಕರಾದ ಟಿ.ಎಸ್.ಶ್ರೀವತ್ಸ, ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಅಧ್ಯಕ್ಷ ಜಿ.ನಂಜನಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಉಪಾಧ್ಯಕ್ಷ ಎ.ಆರ್.ಪ್ರಸನ್ನಕುಮಾರ್, ವ್ಯವಸ್ಥಾಪಕ ನಿರ್ದೇಶಕ ಶರಣಗೌಡ ಜಿ. ಪಾಟೀಲ್, ಅಧ್ಯಕ್ಷತೆ: ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಸೊಸೈಟಿ ಸಂಸ್ಥಾಪಕ ಅಧ್ಯಕ್ಷ ಬಿ.ಹೆಚ್.ಕೃಷ್ಣಾರೆಡ್ಡಿ, ಸ್ಥಳ: ನಿತ್ಯೋತ್ಸವ ಕನ್ವೆನ್ಷನ್ ಸೆಂಟರ್, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ

■ **ದೇಸಿರಂಗ ಸಾಂಸ್ಕೃತಿಕ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು:** ರಂಗ ಮತ್ತು ನೃತ್ಯ ತರಬೇತಿ ಕೇಂದ್ರ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಅಧ್ಯಕ್ಷತೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ, ಮುಖ್ಯ ಅತಿಥಿಗಳು: ಡಾ.ಕೆ.ಇ.ಗೋವಿಂದೇಗೌಡ, ಡಾ.ಜಯರಾಜು, ಕೃಷ್ಣಜನಮನ, ಸ್ಥಳ: ಶ್ರೀರಂಗ ವೇದಿಕೆ, ರಂಗಾಯಣ, ಸಂಜೆ 4.30ಕ್ಕೆ.

■ **ಶ್ರೀಗುರು ರಾಘವೇಂದ್ರ ಸೇವಾ ಸಮಿತಿ:** ಪಂಡಿತ್ ಶ್ರೀಕಾಂತಾಚಾರ್ಯ ಮುಕ್ಕುಂದಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ 10 ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ ಸಂಜೆ 5ರಿಂದ.

■ **ಶ್ರೀಮತಿ ಡಾ. ಸಿಲಾ ಭಟ್ಟಾಚಾರ್ಯ ಕುಟುಂಬ ಮತ್ತು ಸ್ನೇಹಿತರು :** ಲೇಖಕ ಡಾ. ಸುವೇಂದು ಭಟ್ಟಾಚಾರ್ಯ ಅವರ ಇನ್‌ಸಿಗ್ನಿಫಿಕೆಂಟ್ ಪೀಪಲ್ ಕೃತಿ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ಡಾ. ಜಿ.ಸಿ. ಪ್ರಕಾಶ್, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಸಂಜೆ 5.15ಕ್ಕೆ.

■ **ಉತ್ತರಾದಿಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಪಂಡಿತ್ ಶ್ರೀಕಾಂತಾಚಾರ್ಯ ಮುಕ್ಕಂದಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ 10 ಕುರಿತು ಉಪನ್ಯಾಸ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ ಮಠ, ಅಗ್ರಹಾರ, ಸಂಜೆ 6.30ರಿಂದ.

■ **ಕೋಟೆ ತ್ರಿನೇಶ್ವರ ದೇವಸ್ಥಾನ:** ಗಿರಿಜಾ ಕಲ್ಯಾಣ ಮಹೋತ್ಸವ, ಹಗಲು ರಾತ್ರಿ ಔಪಾಸನೆ, ಉಯ್ಯಾಲೋತ್ಸವ, ರಾತ್ರಿ 8 ಗಂಟೆಗೆ ಹೊರೆಯಲ್ಲಿ ಪಾಕಿನಿ ಉತ್ಸವ, ಸ್ಥಳ: ದೇವಸ್ಥಾನ, ಕೋಟೆ ಆವರಣ.

■ **ದಿಗಂಬರ ಜೈನ ಸಮಾಜ, ಪದ್ಮಶ್ರೀ ಜೈನ ಮಹಿಳಾ ಸಮಾಜ:** ಆಷಾಢ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದ ವಿಶ್ರಾಂತ ಉಪನ್ಯಾಸಕ ಡಾ. ಜ್ವಾಲಾ ಸುರೇಶ್ ಅವರಿಂದ ವಿಷಯ : ಗಾಥ : 601ರಿಂದ 625 ಕುರಿತು ಉಪನ್ಯಾಸ, ಸ್ಥಳ: ಶ್ರೀ ಶಾಂತೀಶ್ವರಸ್ವಾಮಿ ಬಸದಿ (ಕೋಟೆ ಬಸದಿ), ಸಂಜೆ 6.45ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಕೆ.ಎಲ್. ಪದ್ಮಿನಿ ಹೆಗಡೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿಯವರ ರಂಗನಾಯಕಿ ಕಾಂದಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್.ಎಸ್.ಎಸ್., 8.30 ಕರೆಗೊಂದು ಗೀತೆ–ನೇರ ಫೋನ್ ಇನ್ ಕಾರ್ಯಕ್ರಮ, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಆರ್.ಎನ್.ತ್ಯಾಗರಾಜನ್ ಮತ್ತು ಡಾ. ಆರ್.ಎನ್.ತಾರಾನಾಥನ್– ಯುಗಳ ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.00ವನಿತಾ ವಿಹಾರ–ಮಾತನಾಡುವ ಗೊಂಬೆ ಒಡತಿ ಹಾಗೂ ಜಾದೂಗಾತಿ ಸುಮಾ ರಾಜ್‌ಕುಮಾರ್ ಅವರೊಂದಿಗೆ ಮಾತುಕತೆ, ಪ್ರಸ್ತುತಿ– ಕೆ.ಬಿ. ಮೀನಾ, 12.30 ದೇವರನಾಮ–ವಿ. ವಂದನ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20ಭಾವಗೀತೆಗಳು–ಡಾ: ಸ್ನೇಹಶ್ರೀ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಶರತ್ ಆರ್. ರಾವ್–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ "ಗಿರಿಜಾ ಕಲ್ಯಾಣ" ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ– ತೋಟಗಾರಿಕಾ ಶಿಕ್ಷಣದ ಪ್ರಾಮುಖ್ಯತೆ ಕುರಿತು ಡೀನ್ ಡಾ.ವಿಷ್ಣುವರ್ಧನ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 9.30 ಉಷಾ ರಾಮಮೂರ್ತಿ–ಗೋಟುವಾದ್ಯ, 10.30 ಗಮಕ ವ್ಯಾಖ್ಯಾನ, ವಾಚನ–ಎನ್.ಇಂದಿರಾ, ವ್ಯಾಖ್ಯಾನ–ಶಿವಾಜಿ ಜೋಯಿಸ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 27 ಮಂಗಳವಾರ 2023

ಸಂಪುಟ: 44 | ಸಂಚಿಕೆ: 72 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಧಿಮಾಕು ತೋರಬೇಡಿ...

- ನೂತನ ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ಪಾಠ
- ಬೆಂಗಳೂರು ಹೊರವಲಯದ ಕ್ಷೇಮವನದಲ್ಲಿ ಹೊಸದಾಗಿ ಆಯ್ಕೆಯಾದ ಶಾಸಕರಿಗೆ ತರಬೇತಿ
- ಸಿದ್ಧಾಂತಗಳಿಲ್ಲದೆ ಇದ್ದರೆ ಒಮ್ಮೆ ಮಾತ್ರ ನೀವು ಶಾಸಕರಾಗಬಹುದಷ್ಟೇ
- ನಾನು, ಸಿ.ಟಿ.ರವಿ, ಈಶ್ವರಪ್ಪ ಶಾಸಕರಾಗಲು ಸಂವಿಧಾನವೇ ಕಾರಣ



ಬೆಂಗಳೂರು, ಜೂ.26(ಕೆಎಂಶಿ)–ಸಾರ್ವಜನಿಕರ ಮುಂದೆ ಹಣ, ಧಿಮಾಕು ತೋರಬೇಡಿ, ಅಧಿಕಾರದ ಮದದಿಂದ ಮೆರೆಯುವ ರಾಜಕಾರಣ ಮಾಡಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕರಿಗೆ ಇಂದಿಲ್ಲಿ ಕಿವಿಮಾತು ಹೇಳಿದ್ದಾರೆ.

ಬೆವರು–ಶ್ರಮ ಸಂಸ್ಕೃತಿಗೆ ಅಸಹ್ಯ ಪಡದೆ ಜನರನ್ನು ಗೌರವಿಸಿದರಷ್ಟೇ ನೀವು ಜನಪ್ರತಿನಿಧಿಯಾಗಿ ಉಳಿಯುತ್ತೀರಿ ಎಂದು ಎಚ್ಚರಿಕೆ ನೀಡಿದ್ದಾರೆ. ಬೆಂಗಳೂರು ಹೊರ ವಲಯದ ಕ್ಷೇಮ ವನದಲ್ಲಿ ವಿಧಾನಸಭೆಗೆ ನೂತನ ವಾಗಿ ಆಯ್ಕೆಯಾದ ಸದಸ್ಯರಿಗೆ ಏರ್ಪಡಿಸಿರುವ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ನೀವು ಈ ಸಿದ್ಧಾಂತಗಳನ್ನು ಇಟ್ಟುಕೊಳ್ಳದಿದ್ದರೆ, ಒಮ್ಮೆಯಷ್ಟೇ ಶಾಸಕರಾಗಬಹುದು ಎಂದು ಹಿತವಚನ ನೀಡಿದ್ದಾರೆ. ಶ್ರಮ, ಸಂಸ್ಕೃತಿಗೆ ಅಸಹ್ಯ ಪಡದವರನ್ನು ಜನರು ಗೌರವಿಸಿ ಅವರನ್ನು ವಿಧಾನಸಭೆಗೆ ಮರು ಆಯ್ಕೆ ಮಾಡುತ್ತಾರೆ. ಅಂತಹ ನಿದರ್ಶನಗಳು ನಮ್ಮ ಕಣ್ಮುಂದಿವೆ. ಒಮ್ಮೆಯಾದರು ವಿಧಾನಸೌಧದ ಮೆಟ್ಟಿಲು ಹತ್ತಬೇಕು ಎಂಬ ತವಕ ಬಹಳಷ್ಟು ಮಂದಿಗೆ ಇರುತ್ತದೆ. ಶಾಸಕರಾದವರು ನಡವಳಿಕೆ ಮತ್ತು ನೀತಿಯನ್ನು ಅಳವಡಿಸಿಕೊಂಡರೆ, ನಿಮಗೆ ಇದು ಸಾಧ್ಯ. ಜನಪರ ನಿಲುವು, ಭಾಷೆ, ವಿಷಯ ತಜ್ಞತೆ, ಅಧ್ಯಯನಶೀಲತೆ, ಸಿದ್ಧತೆ ಮತ್ತು ತರಬೇತಿ ಪ್ರತಿ ಸದಸ್ಯರಿಗೂ ಅತ್ಯಗತ್ಯ. ಸಂಸದೀಯ ಭಾಷೆ ಕಲಿತು ವಿಷಯ ಪರಿಣತರಾದರೆ, ಸರ್ಕಾರದ ಹುಳುಕುಗಳನ್ನು ತೆಗೆದು, ಸರ್ಕಾರದ ಕಿವಿ ಹಿಂಡಬಹುದು. ಸಂಸದೀಯ ಪ್ರಜಾಪ್ರಭುತ್ವದ ದೇಗುಲ ವಿಧಾನಸಭೆ. ಇಲ್ಲಿ ಜನರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರಸ್ತಾಪಿಸಿ ಪರಿಹಾರ ಪಡೆದುಕೊಳ್ಳುವ ●8ನೇ ಪುಟಕ್ಕೆ

ಇನ್ನು ಮುಂದೆ ನಾನು ಯಾವ ಚುನಾವಣೆಗೂ ಸ್ಪರ್ಧಿಸಲ್ಲ

ಸಿದ್ದರಾಮಯ್ಯ ಪುನರ್ ಸ್ಪಷ್ಟನೆ

ಬೆಂಗಳೂರು, ಜೂ.26– ಇನ್ನು ಮುಂದೆ ನಾನು ಚುನಾವಣೆಗೆ ಸ್ಪರ್ಧೆ ಮಾಡಲ್ಲ ಎಂದು ಮತ್ತೊಮ್ಮೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಕ್ಷೇಮವನದಲ್ಲಿ ನೂತನ ಶಾಸಕರಿಗೆ ನಡೆದ ಶಿಬಿರದಲ್ಲಿ ಮಾತನಾಡಿದ ಅವರು, ರಾಜಕೀಯ ಚುನಾವಣೆಯಿಂದ ●8ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಸರಣಿ ಅಪಘಾತ ಹಿನ್ನೆಲೆ

ತಾಂತ್ರಿಕ ತಂಡ ರಚನೆ

ಜನಪ್ರತಿನಿಧಿಗಳು, ಹೆದ್ದಾರಿ ಪ್ರಾಧಿಕಾರ ಅಧಿಕಾರಿಗಳ ಸಭೆಯಲ್ಲಿ ಸಚಿವ ಚಲುವರಾಯಸ್ವಾಮಿ ಘೋಷಣೆ



ಬೆಂಗಳೂರು, ಜೂ.26(ಮೋಹನ್‌ರಾಜ್)– ಮೈಸೂರು– ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ನಿತ್ಯ ಸಂಭವಿಸುತ್ತಿರುವ ಅಪಘಾತಗಳು, ಅವುಗಳಿಗೆ ಕಾರಣ, ಇವುಗಳ ತಡೆಗೆ ಆಗಬೇಕಾದ ಕೆಲಸಗಳು, ಮೂಲ ಸೌಕರ್ಯವೂ ಸೇರಿದಂತೆ ಇನ್ನಿತರ ಸಮಸ್ಯೆಗಳ ಸಂಬಂಧ ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ನೇತೃತ್ವದಲ್ಲಿ ಬೆಂಗಳೂರಿನ ವಿಧಾನಸೌಧದಲ್ಲಿ ಇಂದು ಸಭೆ ನಡೆಯಿತು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ಮಂಡ್ಯ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಅಧಿ



ಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಹಲವು ವಿಷಯಗಳನ್ನು ಪ್ರಸ್ತಾಪಿಸಿ, ಸಮಸ್ಯೆಗಳ ಶೀಘ್ರ ಇತ್ಯರ್ಥಕ್ಕೆ ಸೂಚನೆ ನೀಡಲಾಯಿತು. ರಾಷ್ಟ್ರೀಯ ಹೆದ್ದಾರಿಯಲ್ಲಿ ಹತ್ತು ಹಲವು ಸಮಸ್ಯೆಗಳು ಕಂಡು ಬರುತ್ತಿದ್ದು, ಅವುಗಳನ್ನು ಮಾಧ್ಯಮಗಳು ವರದಿ ಮಾಡುತ್ತಿವೆ. ಸಾರ್ವಜನಿಕರು, ಜನಪ್ರತಿನಿಧಿಗಳು ಈ ಬಗ್ಗೆ ಧ್ವನಿ ಎತ್ತುತ್ತಲೇ ಇದ್ದಾರೆ. ಆದರೆ, ಇದರ ಬಗ್ಗೆ ಸಂಬಂಧಿಸಿದ ಅಧಿಕಾರಿ ವರ್ಗ ನಿರಾಸಕ್ತಿ ವಹಿಸುತ್ತಿದೆ. ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸಬೇಕು ಎಂದು ಸಭೆಯಲ್ಲಿ ●8ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ಎಲ್ಲೀದ್ದೀರಿ?
ಗಂಡ : ಆಫೀಸ್ನಲ್ಲಿ, ಯಾಕೆ?
ಹೆಂಡ್ತಿ : ಏನಿಲ್ಲ ಕೆಲಸ ಮಾಡೋಳು ಓಡಿಹೋಗಿದ್ದಾಳೆ. ಅದಕ್ಕೆ ನೀವು ಆಫೀಸ್‌ನಲ್ಲೇ ಇದ್ದೀರ ಅಂಥ ಕೇಳ್ದೆ!!

ಮೈಸೂರು ಮಿತ್ರ

ಮಂಗಳವಾರ, 27 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸತತ ಪ್ರಯತ್ನಶೀಲ ಮತ್ತು ಯಶ ಕಾಣುವ ಛಲವಿರುವವನ ಹೃದಯದಲ್ಲಿ ದೇವರು ಸದಾ ನೆಲೆಸಿರುತ್ತಾನೆ –ವೇಮನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಘಟ್ಟ ಹತ್ತಿದವನು ಅಟ್ಟ ಏರನೆ?

ನಿಮ್ಮ ಪತ್ರಗಳು

ಚಾಮರಾಜಪುರಂ ರೈಲ್ವೆ ಸ್ಟೇಷನ್‌ನಲ್ಲಿ ಸಮಸ್ಯೆಗಳದ್ದೇ ಕಾರುಬಾರು





ಮಾನ್ಯರೆ,

ಮೈಸೂರಿನ ಚಾಮರಾಜಪುರಂ ರೈಲ್ವೇ ಸ್ಟೇಷನ್‌ನಲ್ಲಿ ಸಮಸ್ಯೆಗಳದ್ದೇ ಕಾರುಬಾರು! ಸ್ಟೇಷನ್‌ನ ಎರಡೂ ಕಡೆಯ ಪ್ಲಾಟ್‌ಫಾರ್ಮ್‌ನಲ್ಲಿ ಹತ್ತಾರು ನೀರಿನ ತೊಟ್ಟಿಗಳಿದ್ದು, ಅಲ್ಲಿನ ನೀರಿನ ಪೈಪ್‌ಗಳಿಗೆ ಒಂದಕ್ಕೂ ನಲ್ಲಿಯಿಲ್ಲ; ನೀರೂ ಬರುತ್ತಿಲ್ಲ. ಒಮ್ಮೊಮ್ಮೆ ಬಂದರೂ ನಲ್ಲಿಯಿಲ್ಲದ ಕಾರಣ ನೀರೆಲ್ಲಾ ಸುರಿದು ಪೋಲಾಗುತ್ತಿದೆ. ಪಕ್ಕದಲ್ಲೇ ಶೌಚಾಲಯವೂ ಇದೆ. ಆದರೆ, ಸರಿಯಾದ ನಿರ್ವಹಣೆ ಮಾಡದೆ ಅಶುಚಿತ್ವ ತಾಂಡವವಾಡುತ್ತಿದೆ. ಜೊತೆಗೆ, ಅಲ್ಲಿ ಪ್ರಯಾಣಿಕರ ಅನುಕೂಲಕ್ಕೆ ಹಾಕಿರುವ ತಗಡಿನ ಚಾವಣಿ ಮಳೆ ಬಂದಾಗ ಸೋರುತ್ತಿದ್ದು, ಪ್ಲಾಟ್‌ಫಾರ್ಮ್‌ನ ಅಲ್ಲಲ್ಲಿ ನೀರು ನಿಂತು ಪಾಚಿ ಕಟ್ಟಿದಂತಾಗಿದೆ. ಇದರಿಂದ ರೈಲಿಗಾಗಿ ಕಾಯುವ ಪ್ರಯಾಣಿಕರು ಸ್ವಲ್ಪ ಎಚ್ಚರ ತಪ್ಪಿದರೂ, ಜಾರಿಬಿದ್ದು ರೈಲಿನ ಬಾಯಿಗೆ ಆಹಾರವಾಗುವ ಸಂಭವವಿದೆ. ಅಷ್ಟೇ ಅಲ್ಲದೆ, ಪ್ರಯಾಣಿಕರು ಕೂರಲು ಅಳವಡಿಸಿರುವ ಗ್ರಾನೈಟ್ ಸುಖಾಸನಗಳ ಸುತ್ತ ಗಿಡಗಂಟಿಗಳು ಬೆಳೆದು ಉಪಯೋಗಕ್ಕೆ ಬಾರದಂತಾಗಿವೆ. ಹೀಗೆ ಹೇಳುತ್ತಾ ಹೋದರೆ ಸಮಸ್ಯೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಹೀಗಾಗಿ, ಸಂಬಂಧಪಟ್ಟವರು ಇನ್ನಾದರೂ ಎಚ್ಚೆತ್ತು ಇಲ್ಲಿನ ಸಮಸ್ಯೆಗಳಿಗೆ ತುರ್ತಾಗಿ ಪರಿಹಾರ ದೊರಕಿಸಿಕೊಡಬೇಕಿದೆ. –ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಸರ್ಕಾರಿ ನೇಮಕಾತಿಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಕೊಟ್ಟ ಮಾತು ಉಳಿಸಿಕೊಳ್ಳಲಿ

ಮಾನ್ಯರೆ,

ಚುನಾವಣೆ ಪೂರ್ವ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದರೆ ಖಾಲಿಯಿರುವ ಎರಡೂವರೆ ಲಕ್ಷ ಸರ್ಕಾರಿ ಹುದ್ದೆಗಳನ್ನು ಒಂದು ವರ್ಷದೊಳಗೆ ಹಾಗೂ ಎಸ್ಸಿ ಅಭ್ಯರ್ಥಿಗಳಿಗೆ ಮೀಸಲಾದ ಬ್ಯಾಕ್‌ಲಾಗ್ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದು ಸದ್ಯ, ಅಭೂತಪೂರ್ವ ಜಯಗಳಿಸಿ ಅಧಿಕಾರಕ್ಕೆ ಬಂದಿದೆ. ಸಮಸ್ತ ಉದ್ಯೋಗಾಕಾಂಕ್ಷಿಗಳ ಹಿತ ಕಾಯಲು ನ್ಯಾಯಯುತವಾಗಿ ಈ ವಿಚಾರ ಸಂಬಂಧ ಶೀಘ್ರ ಮುಂದಾಗಬೇಕು. ಸಾಂಕ್ರಾಮಿಕ ಕೋವಿಡ್ ಛಾಯೆ ಕಷ್ಟದ ಅವಧಿ ಹಾಗೂ ಈ ಹಿಂದಿನ ಸರ್ಕಾರವು ಯಾವುದೇ ಹುದ್ದೆಗಳಿಗೆ ಅಗತ್ಯವಿದ್ದರೂ ಹಂತ ಹಂತವಾಗಿಯು ನೇಮಕಾತಿ ಅರ್ಜಿ ಆಹ್ವಾನಿಸದ ಕಾರಣ ವಿಪರೀತ ನಿರುದ್ಯೋಗ ಸೃಷ್ಟಿಯಾಗಿ ನಿರುದ್ಯೋಗ ಸಮಸ್ಯೆ ದುಪ್ಪಟ್ಟಾಗುವುದರ ಜೊತೆಗೆ ಸಾಕಷ್ಟು ಅಭ್ಯರ್ಥಿಗಳ ವಯಸ್ಸಿನ ಮಿತಿ ಮೀರಿದ ಪರಿಣಾಮ ಅರ್ಹತೆಯ ಮಾನದಂಡ ಮುಗಿದು ದಿಕ್ಕೇ ತೋಚದಂತಾಗಿ ಕೆಲವರ ಜೀವನ ಬೀದಿಗೆ ಬಿದ್ದಾಗಿದೆ.

ಇನ್ನುಳಿದಂತೆ, ಕಳೆದ ಕೆಲವು ವರ್ಷಗಳಿಂದ ಸರ್ಕಾರಿ ಹುದ್ದೆ ಪಡೆಯಬೇಕೆಂಬ ಛಲದಿಂದ ಹಗಲಿರುಳು ಎನ್ನದೆ ಶ್ರಮಿಸುತ್ತಿರುವ ಲಕ್ಷಾಂತರ ಯುವ ಸಮೂಹಕ್ಕೆ ಇನ್ನಾದರು ಅವರ ಮನೋಭಾವನೆಗೆ ಧಕ್ಕೆ ಉಂಟಾಗದಂತೆ ಈ ಹಿಂದೆ ಉಂಟಾಗಿದ್ದ ಅಕ್ರಮ, ಹಗರಣಗಳು ಮರುಕಳಿಸದೆ ಪಾರದರ್ಶಕತೆಯಿಂದ ಪರೀಕ್ಷೆ ನಡೆದು ಪ್ರತಿಭಾನ್ವಿತರಿಗೆ ಸರ್ಕಾರಿ ಕೆಲಸ ಸಿಗಬೇಕಿದೆ. ವಿವಿಧ ಇಲಾಖಾವಾರುಗಳಲ್ಲಿ ನೇಮಕಾತಿ ನಡೆದು ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲು ಇದು ಅತ್ಯಂತ ಹೆಚ್ಚು ಸೂಕ್ತ ಸಮಯ. ಯುವ ಸಮೂಹ ಸಾಕಷ್ಟು ಭರವಸೆ ಇಟ್ಟು ಅಪಾರವಾಗಿ ಬೆಂಬಲಿಸಿರುವುದರಿಂದ ಕೊಟ್ಟ ಮಾತಿಗೆ ತಪ್ಪಿ ನಡೆಯದೆ ಕಾಂಗ್ರೆಸ್ ಸರ್ಕಾರ ಎರಡೂವರೆ ಲಕ್ಷ ಹುದ್ದೆಗಳನ್ನು ಭರ್ತಿ ಮಾಡಿದ್ದೇ ಆದರೆ, ಕರ್ನಾಟಕ ಇತಿಹಾಸದಲ್ಲೇ ಇದು ದಾಖಲೆ ಆಗಲಿದೆ. ನುಡಿದಂತೆ ನಡೆದು ಬದ್ಧತೆಯಿಂದ ಪ್ರಗತಿ ತಂದು ಸುಭದ್ರ ಆಡಳಿತ ನೀಡಲಿ. ಈಗಾಗಲೇ, ಅಧಿಕಾರಕ್ಕೆ ಬರುತ್ತಿದ್ದಂತೆ ಕ್ಯಾಬಿನೆಟ್ ದರ್ಜೆ ಸಚಿವರಾದ ಡಾ.ಪರಮೇಶ್ವರ್, ಪ್ರಿಯಾಂಕ್ ಖರ್ಗೆ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಬಗ್ಗೆ ಸ್ಪಷ್ಟನೆ ಕೊಟ್ಟಿದ್ದು ಸರಿಯಷ್ಟೇ. ನೇಮಕಾತಿ ಕುರಿತಂತೆ ಆದೇಶ ಹೊರಡಿಸುವುದು ಯಾವಾಗ? ರಾಜ್ಯದಲ್ಲಿ ಉದ್ಭವಿಸಿರುವ ಈ ಬೃಹತ್ ನಿರುದ್ಯೋಗ ನಿವಾರಣೆ ಮಾಡುವುದು ಸರ್ಕಾರದ ಆದ್ಯ ಕರ್ತವ್ಯ ಎನ್ನುವುದನ್ನು ಸಿದ್ದರಾಮಯ್ಯ ಸಂಪುಟ, ಕೆಪಿಎಸ್ಸಿ ಆಯೋಗ ಹಾಗೂ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು ಮರೆಯಬಾರದು.

– ಅನಿಲ್ ಕುಮಾರ್, ನಂಜನಗೂಡು.

ಮೈಸೂರಲ್ಲಿ ಪುಂಡರ ಹಾವಳಿ: ಅಮಾಯಕರಿಗೆ ಆಪತ್ತು!

ಮಾನ್ಯರೆ,

ಸೋಮವಾರ ಬೆಳಗ್ಗೆ ವಿಜಯನಗರ ಟ್ಯಾಂಕ್‌ನಿಂದ ರಿಂಗ್‌ರಸ್ತೆಗೆ ಸಂಪರ್ಕ ಕಲ್ಪಿಸುವ ಡಾ. ಅಂಬರೀಶ್ ರಸ್ತೆಯಲ್ಲಿ ವಾಣಿವಿಲಾಸ ಬಡಾವಣೆಯ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನಿಂದ ಸ್ವಲ್ಪ ಮೇಲೆ ಪ್ರೆಸ್ಟೀಜ್ ಶೋರೂಂ ಮುಂದೆ ಇಬ್ಬರು ಪುಂಡರು ಮೋಟಾರ್ ಬೈಕ್‌ನಲ್ಲಿ ಮಹಿಳೆಯೊಬ್ಬರ ಸ್ಕೂಟರ್‌ಗೆ ಡಿಕ್ಕಿ ಹೊಡೆದು, ನಿಲ್ಲಿಸದೇ ಪರಾರಿಯಾದರು. ಅವರು ಡಿಕ್ಕಿ ಹೊಡೆದ ರಭಸಕ್ಕೆ ಮಹಿಳೆ ಕೆಳಗೆ ಬಿದ್ದು ಕೆಲ ಹೊತ್ತು ಪ್ರಜ್ಞಾಹೀನರಾದರು. ಅವರು ಸುಧಾರಿಸಿಕೊಳ್ಳಲು ಸಾಕಷ್ಟು ಸಮಯಬೇಕಾಯಿತು. ಅದೃಷ್ಟವಶಾತ್ ಅವರು ಹೆಲ್ಮೆಟ್ ಹಾಕಿದ್ದರಿಂದ ಸರಿಹೋಯ್ತು. ಇಲ್ಲದಿದ್ದಲ್ಲಿ ಅವರ ತಲೆಗೆ ತೀವ್ರ ಪೆಟ್ಟು ಬಿದ್ದು, ಬಾರೀ ಅನಾಹುತವೇ ಸಂಭವಿಸುವ ಸಾಧ್ಯತೆ ಇತ್ತು.

ಮೈಸೂರಲ್ಲಿ ಇತ್ತೀಚೆಗೆ ಪುಂಡರ ಹಾವಳಿ ಹೆಚ್ಚಾಗಿದೆ. ರಸ್ತೆಗೆ ಇಳಿದಿರುವ ನಾನಾ ರೀತಿಯ ಐಷಾರಾಮಿ ಬೈಕ್‌ಗಳಲ್ಲಿ ತೂರಾಡುತ್ತಾ ಇನ್ನಿತರ ವಾಹನ ಸವಾರರಿಗೆ ಸಂಚಕಾರ ತರುತ್ತಿದ್ದಾರೆ. ಇವರಿಗೆ ಪೊಲೀಸರ ಭಯವಿಲ್ಲ, ಕಾನೂನಿನ ಬಗ್ಗೆ ಗೌರವವಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಲೇ 'ಕಾನೂನು' ಆಳ್ವಿಕೆಯ ಭರವಸೆಯನ್ನ ಬಹಳ ಜೋರಾಗಿಯೇ ನೀಡಿತ್ತು. ಇದೇನಾ ಇವರ ಕಾನೂನು ಆಳ್ವಿಕೆ ಎಂದು ಪ್ರಶ್ನಿಸಬೇಕಿದೆ. –ರಾಘವೇಂದ್ರ, ಹೆಬ್ಬಾಳು, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ



ಇಂದು (ಮಂಗಳವಾರ) ನಾಡಪ್ರಭು ಕೆಂಪೇಗೌಡ ಜಯಂತಿ. ತನ್ನಿಮಿತ್ತ ಈ ಲೇಖನ

ಪ್ರಗತಿಯ ಸಂಕೇತ ನಾಡಪ್ರಭು ಕೆಂಪೇಗೌಡರು

ಇಡೀ ಪ್ರಪಂಚವೇ ಬೆಂಗಳೂರಿನತ್ತ ತಿರುಗಿ ನೋಡುವಂತೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಗತಿಯ ಸಂಕೇತವಾಗಿ 2022ರ ನವೆಂಬರ್ 11ರಂದು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಲೋಕಾರ್ಪಣೆ ಮಾಡಿರುವ **ನಾಡಪ್ರಭು ಕೆಂಪೇಗೌಡ**ರ ಕಂಚಿನ ಪ್ರತಿಮೆ ಜಗತ್ತಿನ ಅತಿ ಎತ್ತರದ ಕಂಚಿನ ಪ್ರತಿಮೆಯೆಂದು ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿ ಚರಿತ್ರೆ ನಿರ್ಮಿಸಿದೆ. 'ಪ್ರಗತಿಯ ಪ್ರತಿಮೆ' ಎಂದು ಕರೆಯಲ್ಪಡುವ ಇದು **108 ಅಡಿ** ಎತ್ತರವಿದ್ದು ಬರೋಬ್ಬರಿ 4000 ಕೆ.ಜಿ.ತೂಕದ ಕೆಂಪೇಗೌಡರ ವೀರ ಖಡ್ಗವನ್ನು ಒಳಗೊಂಡಿದೆ. 23 ಎಕರೆ ಪ್ರದೇಶದ ಥೀಮ್ ಪಾರ್ಕ್‌ನಲ್ಲಿ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಂತೆ ನಿರ್ಮಾಣಗೊಂಡಿರುವ ಕೆಂಪೇಗೌಡರ ಈ ಕಂಚಿನ ಪ್ರತಿಮೆಯ ಒಟ್ಟಾರೆ ವೆಚ್ಚ 84 ಕೋಟಿಯಾಗಿದೆ.120 ಟನ್ ಉಕ್ಕು ಮತ್ತು 98 ಟನ್ ಕಂಚಿನಿಂದ ಪ್ರತಿಮೆ ಕೂಡಿದ್ದು, ಏಕತೆಯ ಪ್ರತಿಮೆ ನಿರ್ಮಾಣ ಮಾಡಿದ್ದ ರಾಮ್ ಸುತಾರ್ ಕ್ರಿಯೇಷನ್ಸ್ ಅವರಿಂದ ನಿರ್ವಾಣಗೊಂಡಿದೆ. ಇದು ಪ್ರಗತಿಯ ಹರಿಕಾರ ನಾಡಪ್ರಭು ಕೆಂಪೇಗೌಡರಿಗೆ ನಾಡಿನ ಜನತೆ ಸಲ್ಲಿಸಿರುವ ಚರಿತ್ರಾರ್ಹವಾದ ಬಹು ದೊಡ್ಡ ಗೌರವವಾಗಿದೆ. ಇಂಥ ಘನ ಗೌರವ ನಾಡಪ್ರಭು ಕೆಂಪೇಗೌಡರಿಗಲ್ಲದೆ ನಾಡಿನಲ್ಲಿ ಬೇರ್‍ಯಾರಿಗೂ ಸಂದಿಲ್ಲವೆಂಬುದೇ ಇದರ ಮಹತ್ತು ಮತ್ತು ಮಹತ್ವವನ್ನು ಇನ್ನಷ್ಟು ಎತ್ತರಕ್ಕೇರಿಸುತ್ತದೆ. ಇದಕ್ಕೆ ನಾಡಪ್ರಭು ಕೆಂಪೇಗೌಡರು ನಿಜಕ್ಕೂ ಅರ್ಹರು !

ಕನ್ನಡ ನಾಡಿನ ಚರಿತ್ರೆಯಲ್ಲಿ ಯಲಹಂಕ ಬಹಳ ವಿಶಾಲವಾದದ್ದು. ಅಷ್ಟೇ ವೈಶಿಷ್ಟ್ಯಪೂರ್ಣವಾದುದು. ಪ್ರಬಲವಾದುದು. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಅಭಿವೃದ್ಧಿಯಲ್ಲಿ ಯಲಹಂಕ ಪ್ರಭುಗಳ ಪಾತ್ರ ಅತ್ಯಂತ ಮಹತ್ತರವಾದದ್ದು. ವಾಸ್ತವವಾಗಿ ಯಲಹಂಕ ಒಂದು ಸಾಮಾನ್ಯ ಸಾಮಂತರಾಜ್ಯ. ಆದರೆ ಇದು ಕನ್ನಡನಾಡಿಗೆ ನೀಡಿದ ಕೊಡುಗೆ ಅಸಾಮಾನ್ಯವಾದದ್ದು. ಯಾವ ಸಾಮ್ರಾಜ್ಯದ ಸಾಮ್ರಾಟರಿಗೂ ಕಮ್ಮಿಯಿಲ್ಲದ್ದು. ಇತಿಹಾಸಕಾರರ ಪ್ರಕಾರ ಯಲಹಂಕ ಪ್ರಭುಗಳು ಅರ್ಥಾತ್ ರಾಜರು ಹತ್ತು ಮಂದಿ. ಇವರಲ್ಲಿ ಪ್ರಥಮ ರಾಜನಾದ ದೇವರಸಗೌಡನೇ ನಾಡ ಪ್ರಭು ಕೆಂಪೇಗೌಡರ ವಂಶಸ್ಥರ ಮೂಲ ಪುರುಷ. ಈತ ಹೊಯ್ಸಳರ ಸಾಮಂತನಾಗಿ 'ಕುರುವಗೆರೆ' ಎಂಬ ಪ್ರದೇಶದಿಂದ ರಾಜ್ಯಾಡಳಿತ ಮಾಡುತ್ತಿದ್ದ. ಕ್ರಿ.ಶ. 1200ರ ಶಾಸನವೊಂದು ಈತನ ಬಗ್ಗೆ ಮಾಹಿತಿ ನೀಡುತ್ತದೆ.

ಹೊಯ್ಸಳರ ಸಾಮಂತನಾಗಿದ್ದ ದೇವರಸಗೌಡ ನಂತರದ ದಿನಗಳಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿ 'ಆವತಿ' ಎನ್ನುವ ಊರಿಗೆ ಬಂದು ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡ. ಆವತಿ ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ದೇವರಸಗೌಡ ಆವತಿಯನ್ನು ಕೇಂದ್ರಸ್ಥಾನ ಮಾಡಿಕೊಂಡು ಇಲ್ಲಿ ನೆಲೆನಿಂತ ಕಾರಣ ಈ ವಂಶಸ್ಥರನ್ನು 'ಆವತಿ ನಾಡಗೌಡ ಪ್ರಭುಗಳು' ಎಂದೂ ಕರೆಯಲಾಗಿದೆ. ಎರಡನೇ ರಾಜ ಜಯಗೌಡ ಈತ ದೇವರಸಗೌಡನ ಪುತ್ರ. ಇವನು ತನ್ನ ತಂದೆ ದೇವರಸಗೌಡನ ಹೆಸರಿನಲ್ಲಿ ನಿರ್ಮಿಸಿದ ಹಳ್ಳಿಯೇ 'ದೇವನಹಳ್ಳಿ' ಈತ ಆವತಿಯಿಂದ ತನ್ನ ರಾಜಧಾನಿಯನ್ನು ಯಲಹಂಕಕ್ಕೆ ಬದಲಾಯಿಸಿದ. ಇವನು ನಿಧನವಾದ ನಂತರ ಒಂದನೇ ಭೈರೇಗೌಡ ಆಳ್ವಿಕೆಗೆ ಬಂದ. ಇವನು ಹೊಯ್ಸಳರೊಡನೆ ಒಳ್ಳೆಯ ಸಂಬಂಧ ಹೊಂದಿದ್ದ ಕಾರಣ ದೊಡ್ಡಬಳ್ಳಾಳನ ನೆನಪಿಗಾಗಿ ದೊಡ್ಡಬಳ್ಳಾಪುರ ಪಟ್ಟಣವನ್ನು ನಿರ್ಮಿಸಿದ. ಹೊಯ್ಸಳರ ಪಟ್ಟದರಸಿ ಶಾಂತಲಾದೇವಿಯ ಪುತ್ರ ಚಿಕ್ಕ ಬಳ್ಳಾಳ. ಇವನ ಗೌರವಾರ್ಥ ಒಂದನೇ ಭೈರೇಗೌಡ ಚಿಕ್ಕಬಳ್ಳಾಪುರ ನಿರ್ಮಿಸಿದ.

ಒಂದನೇ ಭೈರೇಗೌಡನ ಕಾಲಾನಂತರ ಇಮ್ಮಡಿ ಭೈರೇಗೌಡ ಅಧಿಕಾರದ ಚುಕ್ಕಾಣಿ ಹಿಡಿದ. ಈತನನ್ನು ರಣಭೈರೇಗೌಡ ಎಂದೂ ಕರೆಯಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯ ಕಟ್ಟುವ ಕಾಲದಲ್ಲಿ ಅವರಿಗೆ ಸರ್ವ ರೀತಿಯಲ್ಲಿ ಸಹಕಾರ ನೀಡಿ ವಿಜಯನಗರ ಸಾಮ್ರಾಜ್ಯದ ಬೆಳವಣಿಗೆಯಲ್ಲಿ ಇವನು ಪ್ರಮುಖ ಪಾತ್ರವಹಿಸಿದ್ದ. ಇಮ್ಮಡಿ ಭೈರೇಗೌಡನ ನಂತರ ಈತನ ಪುತ್ರ ನಂಜಪ್ಪಗೌಡ ಪಟ್ಟಕ್ಕೆ ಬಂದ. ನಂಜಪ್ಪಗೌಡನಿಗೆ ಬಹಳಕಾಲ ಮಕ್ಕಳಿರಲಿಲ್ಲ. ತಮ್ಮ ಕುಲದೇವತೆಯಾದ ಕುರುವಗೆರೆ ಕೆಂಪಮ್ಮನಿಗೆ ಹರಕೆ ಕಟ್ಟಿಕೊಂಡಿದ್ದರಿಂದ ದೇವಿಯ ಆಶೀರ್ವಾದದ ಫಲವಾಗಿ ಕೆಂಪನಂಜೇಗೌಡ ಜನಿಸಿದ. ಈತನೇ ನಾಡಪ್ರಭು ಕೆಂಪೇಗೌಡರ ತಂದೆ. ಕೆಂಪನಂಜೇಗೌಡ ಮತ್ತು ಲಿಂಗಮಾಂಬೆ ದಂಪತಿಗೆ ನಾಲ್ಕು ಗಂಡು ಮಕ್ಕಳು.

> **ಗುರು ಮಾಧವಭಟ್ಟರ ಆಣತಿಯಂತೆ ರಾಜ್ಯಾಡಳಿತ ರಥವೇರುವ ಮುನ್ನ ದೇಶನೋಡು ಕೋಶ ಓದು ಎಂಬಂತೆ ದೇಶ ಪರ್ಯಟನೆಗೆ ಹೊರಟ ಕೆಂಪೇಗೌಡ ಮೊದಲಿಗೆ ವಿಜಯನಗರಕ್ಕೆ ಭೇಟಿ ನೀಡುತ್ತಾರೆ. ಐದಾರು ವರ್ಷಗಳ ಬಾಲಕನಾಗಿದ್ದಾಗಲೇ 1515ರ ಆಸುಪಾಸಿನಲ್ಲಿ ಒಮ್ಮೆ ತಂದೆಯ ಹೆಗಲ ಮೇಲೆ ಕೂತು ರಾಜಧಾನಿ ಹಂಪಿಯಲ್ಲಿ ವಿಜಯನಗರದ ವೈಭವವನ್ನು ಕಂಡು ಬೆರಗಾಗಿದ್ದ ಕೆಂಪೇಗೌಡರು ಈಗ ಮತ್ತಷ್ಟು ನಿಬ್ಬೆರಗುಗೊಂಡು ರೋಮಾಂಚಿತನಾಗುತ್ತಾರೆ. ಅಷ್ಟೇ ಅಲ್ಲ, ಬಾಲಕನಾಗಿದ್ದಾಗಲೇ ಇಂತಹದೊಂದು ನಗರವನ್ನು ತಾನೂ ನಿರ್ಮಿಸಬೇಕೆಂಬ ಕನಸು ಕಂಡಿದ್ದ ಕನಸುಗಾರ ಕೆಂಪೇಗೌಡರು ಈಗ ಅದನ್ನು ಸಾಕಾರಗೊಳಿಸುವತ್ತ ಮನಸ್ಸನ್ನು ದೃಢ ಮಾಡಿಕೊಂಡು ಒಟ್ಟಾರೆ ದೇಶ ಸಂಚಾರದ ಬಳಿಕ ಯಲಹಂಕಕ್ಕೆ ವಾಪಸು ಬರುತ್ತಾರೆ. 1528ರಲ್ಲಿ ಚೆನ್ನಮಾಂಬೆಯೊಡನೆ ವಿವಾಹವಾಗಿ ಯುವರಾಜರಾಗಿ ಪಟ್ಟಾಭಿಷಕ್ತರಾಗುತ್ತಾರೆ. ಆ ನಂತರ 1531ರಲ್ಲಿ ಯಲಹಂಕ ಪ್ರಭುವಾಗಿ ಪಟ್ಟಾಭಿಷಕ್ತರಾಗಿ ರಾಜ್ಯಾಡಳಿತದ ಚುಕ್ಕಾಣಿ ಹಿಡಿಯುತ್ತಾರೆ. ಅಲ್ಲಿಂದ ಆರಂಭವಾಗುತ್ತದೆ ಕೆಂಪೇಗೌಡರ ಯುಗ. ಇಡೀ ಜಗತ್ತೇ ಕೆಂಪೇಗೌಡರತ್ತ ಹಾಗೂ ಇವರು ನಿರ್ಮಿಸಿದ ಬೆಂಗಳೂರಿನತ್ತ ತಿರುಗಿ ನೋಡುವಂಥಾ ಮಹದದ್ಭುತ...!**

ಅವರಲ್ಲಿ ಹಿರಿಮಗನೇ ನಾಡ ಪ್ರಭುವಾದ ಕೆಂಪೇಗೌಡ. ಇವರು 1510ರಲ್ಲಿ ಜನಿಸಿದರು. ಇನ್ನು ಮೂವರೆಂದರೆ ವೀರೇಗೌಡ, ಬಸವೇಗೌಡ ಹಾಗೂ ಕೆಂಪಸೋಮೇಗೌಡ. ಇವರುಗಳ ತಂದೆ ಕೆಂಪನಂಜೇಗೌಡ ವಿಜಯ ನಗರ ಸಾಮ್ರಾಜ್ಯಕ್ಕೆ ಅತ್ಯಂತ ನಿಷ್ಠನಾಗಿದ್ದುದ ರಿಂದ ಕೃಷ್ಣದೇವರಾಯ ಇವನನ್ನು ಹಾಗೂ ಇವನ ಆಡಳಿತದ ಕಾರ್ಯ ಶೈಲಿಯನ್ನು ಬಹಳ ಮೆಚ್ಚಿಕೊಂಡಿದ್ದ. ಇದು ನಾಡಪ್ರಭು ಕೆಂಪೇಗೌಡರ ಕಾಲಕ್ಕೂ ಮುಂದುವರೆದು ಕೃಷ್ಣದೇವರಾಯನಿಗೆ ಕೆಂಪೇಗೌಡ ಅತ್ಯಂತ ಪ್ರೀತಿ ಪಾತ್ರನಾಗಿದ್ದ.

ಯಲಹಂಕ ಊರಿಗೆ ಅಂದಾಜು 1200 ವರ್ಷಗಳ ಇತಿಹಾಸವಿದೆ. ಗಂಗರ ಕಾಲದಲ್ಲಿ ಇದು ಹೆಚ್ಚಿನ ಮಹತ್ವ ಪಡೆದಿತ್ತು. ವಿಶೇಷ ಮಾನ್ಯತೆ ಗಳಿಸಿತ್ತು. ಬೆಂಗಳೂರು ಸಮೀಪದ ಚಿಕ್ಕಜಾಲದ ಚೆನ್ನಕೇಶವ ಯಲಹಂಕ ಪ್ರಭುಗಳ ಆರಾಧ್ಯದೈವ. ಹಾಗೆಯೇ ಕುರುವಗೆರೆ ಕೆಂಪಮ್ಮ ಆರಾಧ್ಯ ದೇವತೆ. ಕುಲದೈವ ಭೈರವೇಶ್ವರ. ನಾಡಪ್ರಭು ಕೆಂಪೇಗೌಡರ ವಂಶಸ್ಥರು ರಾಜ್ಯಭಾರ ಮಾಡಿದ ಮತ್ತೊಂದು ಪ್ರಮುಖ ಸ್ಥಳ 'ಮಾಗಡಿ'. ಇದು 12ನೇ ಶತಮಾನದಲ್ಲಿ ಚೋಳರಾಜನೊಬ್ಬನಿಂದ ಸ್ಥಾಪಿತವಾಯಿತೆಂದು ಹೇಳಲಾಗುತ್ತದೆ. ಇದಕ್ಕೆ ಪೂರಕವಾದ ಐತಿಹ್ಯ ಕೂಡ ಇಲ್ಲುಂಟು. ನಂತರದ ದಿನಗಳಲ್ಲಿ 'ಮಾಗಡಿ'ಯು ಹೊಯ್ಸಳರ ಕೈವಶವಾಗಿ ಬಳಿಕ ವಿಜಯನಗರದ ಅರಸರ ಕೈ ಸೇರಿತು. ಅಂತಿಮವಾಗಿ ಕೆಂಪೇಗೌಡರ ವಂಶಸ್ಥರ ವಶಕ್ಕೆ ಬಂತು. ಇದನ್ನು ಬಹು ವೈಭವದಿಂದ ಆಳಿದ ನಾಡಪ್ರಭು ಕೆಂಪೇಗೌಡರ ಎರಡನೇ ಪುತ್ರ ಇಮ್ಮಡಿ ಕೆಂಪೇಗೌಡನು ಮಾಗಡಿ ಕೆಂಪೇಗೌಡರೆಂದೇ ಕರೆಸಿಕೊಂಡು ಹೆಸರುವಾಸಿಯಾದರು. ಮತ್ತೊಬ್ಬ ಮಗ ಗಿಡ್ಡೇಗೌಡ ಕ್ರಿ.ಶ. 1578ರವರೆಗೆ ಆಳಿದನೆಂದು ಹೇಳಲಾಗುತ್ತದೆ. 18ನೇ ಶತಮಾನದ ಪ್ರಾರಂಭದ ತನಕವೂ ಕೆಂಪೇಗೌಡರ ವಂಶಸ್ಥರ ಆಳ್ವಿಕೆಯಲ್ಲಿದ್ದ ಮಾಗಡಿ ಆ ನಂತರ ಮೈಸೂರು ಅರಸರ ಪಾಲಾಯಿತು. ಕ್ರಿ.ಶ. 1791ರಲ್ಲಿ ಇದನ್ನು ಬ್ರಿಟಿಷರು ಆಕ್ರಮಿಸಿಕೊಂಡರು. ಅಲ್ಲಿಗೆ ವೈಭವದ ಮಾಗಡಿಯ ಇತಿಹಾಸ ಮಣ್ಣುಗೂಡಿತು. ಇದು ನಾಡಪ್ರಭು ಕೆಂಪೇಗೌಡರ ವಂಶಸ್ಥರ ಇತಿಹಾಸ. ಸುಮಾರು 500 ವರ್ಷಗಳ ಕಾಲ ವೈಭವಪೂರ್ಣವಾಗಿ ಆಡಳಿತ ನಡೆಸಿದ ಈ ವಂಶದ ಸಾಮ್ರಾಜ್ಯ ನಾಡಪ್ರಭು ಕೆಂಪೇಗೌಡರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕಿಂತ ವಿಶಾಲವಾಗಿತ್ತು. ವಿಶ್ವವಿಖ್ಯಾತಿಯಾಗಿ ಮೆರೆದಿತ್ತು.

ಇಂಥಾ ಕಿರೀಟ ಪ್ರಾಯ ವಂಶದಲ್ಲಿ ರತ್ನಪ್ರಾಯರಾಗಿ ಜನಿಸಿದ ನಾಡಪ್ರಭು ಕೆಂಪೇಗೌಡ ಪುಟ್ಟ ವಯಸ್ಸಿನಲ್ಲೇ ಪುಟಿದೇಳುವ ಪಾದರಸದಂತಹ ಚುರುಕು ಸ್ವಭಾವದ ಕ್ರಿಯಾಶೀಲತೆ ಹೊಂದಿದ್ದರು. ತನ್ನ ಜೀವಿತಾವಧಿಯಲ್ಲಿ ಏನಾದರೂ ಅದ್ಭುತವಾದುದನ್ನು ಸಾಧಿಸಿ ಸೈ ಎನಿಸಿಕೊಳ್ಳಬೇಕೆಂಬ ಮಹದಾಕಾಂಕ್ಷೆ ಬಾಲಕ ಕೆಂಪೇಗೌಡನ ಕಣ್ಣುಗಳಲ್ಲಿ ಆಗಲೇ ಕುಣಿಯುತ್ತಿತ್ತು. ಇವರ ಬಾಲ್ಯ ಅತ್ಯಂತ ರೋಚಕವಾದದ್ದು. ತಂದೆ ಕೆಂಪನಂಜೇಗೌಡನಿಗೆ ಮಗ ಕೆಂಪೇಗೌಡನ ಮೇಲೆ ಅಗಾಧ ಪ್ರೀತಿ, ಇವನನ್ನು ಸಕಲಕಲಾವಲ್ಲಭನನ್ನಾಗಿ ಮಾಡಬೇಕೆಂಬ ಅದಮ್ಯ ಆಸೆ. ಅದಕ್ಕೆ ತಕ್ಕ ಹಾಗೆ ಬೆಳೆವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ಬಾಲಕ ಕೆಂಪೇಗೌಡ ಎಲ್ಲಕ್ಕೂ ಸಿದ್ಧನಿದ್ದ. ಗುರುಗಳೆಂದರೆ ಹೀಗಿರಬೇಕೆನ್ನುವಂತಿದ್ದ ತಮ್ಮ ಪಾಂಡಿತ್ಯದಿಂದ ಹೆಸರುವಾಸಿಯಾಗಿದ್ದ, ಐಗಂಡಪುರದ ಮಾಧವ ಭಟ್ಟರಲ್ಲಿ ಶಿಷ್ಯನೆಂದರೆ ಹೀಗಿರಬೇಕೆನ್ನುವಂತಿದ್ದ ಐದು ವರ್ಷದ ಬಾಲಕ ಕೆಂಪೇಗೌಡನನ್ನು ತಂದೆ ಕೆಂಪನಂಜೇಗೌಡ ವಿದ್ಯಾಭ್ಯಾಸಕ್ಕೆ ಸೇರಿಸಿದ್ದರು. ಅಲ್ಲಿ ಗುರುಗಳಿಂದ ಆಡಳಿತ, ರಾಜನೀತಿ ಸೇರಿದಂತೆ ಪ್ರತಿಯೊಂದು ವಿಷಯಗಳಲ್ಲೂ ಪರಿಣತಿ ಗಳಿಸಿ ಕುದುರೆ ಸವಾರಿ, ಕತ್ತಿವರಸೆ, ಮಲ್ಲಯುದ್ಧ ಮುಂತಾದ ಓರ್ವ ರಾಜನಿಗಿರಬೇಕಾದ ಸರ್ವ ವಿದ್ಯೆಗಳಲ್ಲೂ ಸಮರ್ಥರಾದರು. ಅಲ್ಲಿ ಗೆಳೆಯನಾಗಿ ದೊರೆತ ನಾರಾಯಣಭಟ್ಟ (ನಾಣಿ) ಕೆಂಪೇಗೌಡನ ಪ್ರತಿಯೊಂದು ಹೆಜ್ಜೆಯಲ್ಲೂ ಸಹಕಾರದ ಆತ್ಮೀಯನಾಗಿದ್ದ. ಇವರಿಬ್ಬರ ಸ್ನೇಹ ಕೃಷ್ಣ–ಕುಚೇಲ ಸಂಬಂಧವಾಗಿತ್ತು.

ಗುರು ಮಾಧವಭಟ್ಟರ ಅಣತಿಯಂತೆ ರಾಜ್ಯಾಡಳಿತ ರಥವೇರುವ ಮುನ್ನ ದೇಶನೋಡು ಕೋಶ ಓದು ಎಂಬಂತೆ ದೇಶ ಪರ್ಯಟನೆಗೆ ಹೊರಟ ಕೆಂಪೇಗೌಡ ಮೊದಲಿಗೆ ವಿಜಯನಗರಕ್ಕೆ ಭೇಟಿ ನೀಡುತ್ತಾನೆ. ಐದಾರು ವರ್ಷಗಳ ಬಾಲಕನಾಗಿದ್ದಾಗಲೇ 1515ರ ಆಸುಪಾಸಿನಲ್ಲಿ ಒಮ್ಮೆ ತಂದೆಯ ಹೆಗಲ ಮೇಲೆ ಕೂತು ರಾಜಧಾನಿ ಹಂಪಿಯಲ್ಲಿ ವಿಜಯನಗರದ ವೈಭವವನ್ನು ಕಂಡು ಬೆರಗಾಗಿದ್ದ ಕೆಂಪೇಗೌಡ ಈಗ ಮತ್ತಷ್ಟು ನಿಬ್ಬೆರಗುಗೊಂಡು ರೋಮಾಂಚಿತನಾಗುತ್ತಾನೆ. ಅಷ್ಟೇ ಅಲ್ಲ, ಬಾಲಕನಾಗಿದ್ದಾಗಲೇ ಇಂತಹದೊಂದು ನಗರವನ್ನು ತಾನೂ ನಿರ್ಮಿಸಬೇಕೆಂಬ ಕನಸು ಕಂಡಿದ್ದ ಕನಸುಗಾರ ಕೆಂಪೇಗೌಡ ಈಗ ಅದನ್ನು ಸಾಕಾರಗೊಳಿಸುವತ್ತ ಮನಸ್ಸನ್ನು ದೃಢ ಮಾಡಿಕೊಂಡು ಒಟ್ಟಾರೆ ದೇಶ ಸಂಚಾರದ ಬಳಿಕ ಯಲಹಂಕಕ್ಕೆ ವಾಪಸು ಬರುತ್ತಾರೆ. 1528ರಲ್ಲಿ ಚೆನ್ನಮಾಂಬೆಯೊಡನೆ ವಿವಾಹವಾಗಿ ಯುವರಾಜರಾಗಿ ಪಟ್ಟಾಭಿಷಕ್ತರಾಗುತ್ತಾರೆ. ಆ ನಂತರ 1531ರಲ್ಲಿ ಯಲಹಂಕ ಪ್ರಭುವಾಗಿ ಪಟ್ಟಾಭಿಷಕ್ತರಾಗಿ ರಾಜ್ಯಾಡಳಿತದ ಚುಕ್ಕಾಣಿ ಹಿಡಿಯುತ್ತಾರೆ. ಅಲ್ಲಿಂದ ಆರಂಭವಾಗುತ್ತದೆ ಕೆಂಪೇಗೌಡರ ಯುಗ. ಇಡೀ ಜಗತ್ತೇ ಕೆಂಪೇಗೌಡರತ್ತ ಹಾಗೂ ಇವರು ನಿರ್ಮಿಸಿದ ಬೆಂಗಳೂರಿನತ್ತ ತಿರುಗಿ ನೋಡುವಂಥಾ ಮಹದದ್ಭುತ...!

ರಾಜಧಾನಿ ಹಂಪೆಯ ಬೀದಿ ಬೀದಿಗಳಲ್ಲಿ ಮುತ್ತುರತ್ನಗಳನ್ನು, ವಜ್ರ ವೈಢೂರ್ಯಗಳನ್ನು ಬಳ್ಳಗಳಲ್ಲಿ ಅಳೆದು ಸುರಿದು ಮಾರುತ್ತಿದ್ದ ಮಹಾ ಸಿರಿವಂತಿಕೆಯ ವಿಜಯನಗರ ಸಾಮ್ರಾಜ್ಯದ ಸಂಪದಭಿವೃದ್ಧಿಯ ವೈಭವದಲ್ಲಿ ಸಾಮಂತರಾಗಿದ್ದ ಕೆಂಪೇಗೌಡರ ವಂಶಸ್ಥರದ್ದೂ ಸಿಂಹಪಾಲಿತ್ತು. ಹಾಗಾಗಿ ವಿಜಯನಗರ ಅರಸರಿಗೆ ಅದರಲ್ಲೂ ವಿಶೇಷವಾಗಿ ಕೃಷ್ಣದೇವರಾಯನಿಗೆ ಇವರ ಮೇಲೆ ಹೆಚ್ಚಿನ ಒಲವಿತ್ತು. ಚಿಕ್ಕ ವಯಸ್ಸಿನಲ್ಲೇ ಕೆಂಪೇಗೌಡರಿಗೆ ಕೃಷ್ಣದೇವರಾಯರೊಡನಾಟ ಚೆನ್ನಾಗಿತ್ತು.

ಕೃಷ್ಣದೇವರಾಯ1529ರಲ್ಲಿ ನಿಧನರಾದಾಗ ಅವರ ಸಹೋದರ ಅಚ್ಯುತರಾಯ ಅಧಿಕಾರಕ್ಕೆ ಬರುತ್ತಾರೆ. ಬೆಂಗಳೂರು ನಿರ್ಮಾಣಕ್ಕೆ 50 ಸಾವಿರ ಚಿನ್ನದ ವರಾಹಗಳನ್ನು ನೀಡುವುದರ ಜೊತೆಗೆ 30 ಸಾವಿರ ಪಗೋಡಗಳ ಉತ್ಪನ್ನ ಬರುವ ಹಳೆಬೆಂಗಳೂರು, ಬೇಗೂರು, ವರ್ತೂರು, ಹಲಸೂರು, ಜಿಗಣಿ, ತಲಘಟ್ಟಪುರ, ಕೆಂಗೇರಿ, ಕುಂಬಳಗೋಡು, ಹೆಸರಘಟ್ಟ, ಕಾವಳ್ಳಿ (ಈಗಿನ ಕನ್ನಲ್ಲಿ), ಚಿಕ್ಕಬಾಣವರ ಇತ್ಯಾದಿ 12 ಹೋಬಳಿಗಳನ್ನು ಕೆಂಪೇಗೌಡರಿಗೆ ದಾನವಾಗಿ ಬಿಟ್ಟುಕೊಡುತ್ತಾರೆ. ವೈಜ್ಞಾನಿಕ ಪ್ರಜ್ಞೆಯ ಪ್ರಖರ ವಿಚಾರವಾದಿಯಾಗಿದ್ದ ಕೆಂಪೇಗೌಡರು ಯಾವುದೇ ಮೂಢನಂಬಿಕೆಗಳಿಗೆ ಒಳಗಾಗದೆ ಪುರೋಹಿತರ ಆಣತಿಯಂತೆ ಯಾವುದೇ ಶಾಸ್ತ್ರ, ಘಳಿಗೆ ನೋಡದೆ ರೈತನೊಬ್ಬನಿಂದ ನೇಗಿಲಿನಿಂದ ಗೆರೆ ಎಳೆಸುವ ಮೂಲಕ ತಮ್ಮ ಮಹದಾಕಾಂಕ್ಷೆಯ ಬೆಂಗಳೂರು ನಿರ್ಮಾಣವನ್ನು ಆರಂಭಿಸಿದ್ದರು. ಹಾಗೆಯೇ ರೈತ ಸಮುದಾಯದಿಂದ ಬಂದವರಾದ ಇವರು ಬಸವನನ್ನು ರಾಜಮುದ್ರೆಯಾಗಿ ಸ್ವೀಕರಿಸಿದ್ದರು. ಇದರ ದ್ಯೋತಕವಾಗಿ ಬೆಂಗಳೂರು ಕೋಟೆಯ ದಕ್ಷಿಣ ಭಾಗದ ಗುಡ್ಡವೊಂದರ ಮೇಲೆ ಬೃಹತ್ ಬಸವ ವಿಗ್ರಹವನ್ನು ನಿರ್ಮಿಸಿದ್ದರು. ನವಬೆಂಗಳೂರಿಗೆ 1537ರಲ್ಲಿ ಅಡಿಗಲ್ಲು ಹಾಕಿ ನಗರದ ನಾಲ್ಕು ದಿಕ್ಕುಗಳಿಗೂ ನಾಲ್ಕು ದ್ವಾರಗಳನ್ನು ನಿರ್ಮಿಸಿ ಅವುಗಳನ್ನು ಹಲಸೂರು ಹೆಬ್ಬಾಗಿಲು, ಕೆಂಗೇರಿ ಹೆಬ್ಬಾಗಿಲು, ಯಶವಂತಪುರ ಹೆಬ್ಬಾಗಿಲು, ಯಲಹಂಕ ಹೆಬ್ಬಾಗಿಲುಗಳೆಂದು ಹೆಸರಿಟ್ಟರು. ಮುಖ್ಯದ್ವಾರದ ಬಾಗಿಲು ನಿಲ್ಲದೇ ಬೀಳುತ್ತಿರಲು ಸೊಸೆ ಲಕ್ಷ್ಮೀದೇವಿ ಆತ್ಮಾರ್ಪಣೆ ಮಾಡಿಕೊಳ್ಳುತ್ತಾಳೆ. ನಾಡಪ್ರಭು ಕೆಂಪೇಗೌಡರ ಸೊಸೆ ನಾಡಿಗಾಗಿ ಬಲಿದಾನಗೈದ ಪರಿಣಾಮವಾಗಿ ಮುಖ್ಯ ಧ್ವಾರದ ಬಾಗಿಲು ಭದ್ರವಾಗಿ ನಿಲ್ಲುತ್ತದೆ. ಈ ಮುಖೇನ ಲಕ್ಷ್ಮೀದೇವಿ ಬೆಂಗಳೂರು ಚರಿತ್ರೆಯ ಸುವರ್ಣ ಪುಟಗಳಲ್ಲಿ ತಾನೇ ಒಂದು ವಿಶೇಷ ಪುಟವಾಗಿ ಸೇರಿಹೋಗುತ್ತಾಳೆ.

ಮೈಸೂರಿನ ಪಿರಿಯಾಪಟ್ಟಣ, ಕಲ್ಲಹಳ್ಳಿ, ನಂಜರಾಯಪಟ್ಟಣ, ಕೊಡಗು ಮುಂತಾದ ಪ್ರಾಂತ್ಯಗಳು ಸೇರಿದಂತೆ ಉಮ್ಮತ್ತೂರಿನ ಆಡಳಿತಕ್ಕೆ ಒಳಪಟ್ಟಿದ್ದ ಶಿವನಸಮುದ್ರ ಸೀಮೆಯವರೆಗೂ ಕೆಂಪೇಗೌಡರ ಆಳ್ವಿಕೆ ಇತ್ತು. ಇದರಿಂದ ಯಲಹಂಕ ನಾಡು ದಕ್ಷಿಣದ ಗಡಿ ಕಾವೇರಿ ತೀರದವರೆಗೂ ವಿಸ್ತಾರ ಗೊಂಡಿತ್ತು. 1510ರಲ್ಲಿ ಜನಿಸಿ 1531ರಲ್ಲಿ ಪಟ್ಟಾಭಿಷಿಕ್ತರಾಗಿ ಅಧಿಕಾರಕ್ಕೆ ಬಂದ ನಾಡಪ್ರಭು ಕೆಂಪೇಗೌಡರು 1569ರವರೆಗೆ ಸುಮಾರು 38 ವರ್ಷಗಳ ಕಾಲ ಆಳ್ವಿಕೆ ನಡೆಸಿ 1569ರಲ್ಲಿ ಇಹಲೋಕ ತ್ಯಜಿಸಿದರು. ಆದರೆ ತಮ್ಮ ಅಭೂತಪೂರ್ವ ಸಾಧನೆಗಳಿಂದ ಯಾವತ್ತೂ ಅವರು ಚಿರಂಜೀವಿಯಾಗಿರುತ್ತಾರೆ. ಕೆಂಪೇಗೌಡರೆಂದರೆ ಹಾಗೇನೇ ಅವರಿಗೆ ಎಂದಿಗೂ ಸಾವಿಲ್ಲ. ಸತ್ತು ಬದುಕಿರುವ ಅಸಾಮಾನ್ಯ ಸಾಧಕರವರು, ಅಜರಾಮರರು.



ಸೋಮವಾರ ಹುಟ್ಟುಹಬ್ಬ ಆಚರಿಸಿಕೊಂಡ ಸಿದ್ದಲಿಂಗಪುರ ಜಿಲ್ಲಾ ಪಂಚಾಯಿತಿ ಉಸ್ತುವಾರಿ ಹಾಗೂ ಎಂಸಿಡಿಸಿಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷರಾದ ಮಂಜೂಗೌಡರನ್ನು ರಮ್ಮನಹಳ್ಳಿ ಗ್ರಾಮದ ವತಿಯಿಂದ ಮಾಜಿ ಗ್ರಾಪಂ ಅಧ್ಯಕ್ಷ ರಾದ ಶ್ರೀಕಾಂತ ಅರಸ್ ನೇತೃತ್ವದಲ್ಲಿ ಅಭಿನಂದಿಸಿ, ಶುಭಾಶಂಯ ಕೋರ ಲಾಯಿತು. ಚಿತ್ರದಲ್ಲಿ ವೆಂಕಟಯ್ಯ, ಮಹದೇವು, ರಾಜಶೇಖರ, ಕುಮಾರ್, ಮಂಜು, ಬಸವರಾಜು, ರಘು, ರಾಜು, ಶಂಕರ್, ಮಾದೇಶ್, ರಮೇಶ್ ಮತ್ತಿತರರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ



ವರುಣಾ ವಿಧಾನಸಭಾ ಕ್ಷೇತ್ರ ಮಾಜಿ ಶಾಸಕರು
ಹಾಗೂ ಯುವಕರ ಕಣ್ಮಣಿ
ಸನ್ಮಾನ್ಯ
ಡಾ. ಯತೀಂದ್ರಸಿದ್ದರಾಮಯ್ಯ
ರವರಿಗೆ ಹುಟ್ಟುಹಬ್ಬದ
ಶುಭಾಶಯಗಳು
ರಾಕೇಶ್ ಪಾಪಣ್ಣ
ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ಪ್ರಕಟಣೆ : ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು

ಮೈಸೂರು ಮಿತ್ರ ಮಂಗಳವಾರ 27 ಜೂನ್ 2023

ನಾಲ್ಕು ವರ್ಷ ಕಳೆದರೂ ಮನೆ ಸಿಗದ ಪ್ರವಾಹ ಸಂತ್ರಸ್ತ ಮಹಿಳೆಯಿಂದ ದಯಾಮರಣ ಕೋರಿ ರಾಷ್ಟ್ರಪತಿಗೆ ಪತ್ರ

ಸಿದ್ದಾಪುರ, ಜೂ.26– ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಪ್ರಕೃತಿ ವಿಕೋಪ ಪ್ರವಾಹ ಸಂದರ್ಭದಲ್ಲಿ ಮನೆ ಆಸ್ತಿಪಾಸ್ತಿ ಕಳೆದುಕೊಂಡು ಸಂಕಷ್ಟದ ಜೀವನ ನಡೆಸುತ್ತಿರುವ ಸಂತ್ರಸ್ತರಿಗೆ ಐದು ವರ್ಷ ಕಳೆದರೂ ಶಾಶ್ವತ ಸೂರು ನಿರ್ಮಿಸಿ ನೀಡದೆ ನಿರ್ಲಕ್ಷಿಸುತ್ತಿರುವ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕಿನ ನೆಲ್ಯಹುದಿಕೇರಿ ಗ್ರಾಮದ ಮಹಿಳೆಯೊಬ್ಬರು ದಯಾಮರಣ ಕೋರಿ ರಾಷ್ಟ್ರಪತಿಯವರಿಗೆ ಪತ್ರ ಬರೆದಿದ್ದಾರೆ.

ನೆಲ್ಯಹುದಿಕೇರಿಯ ನಿವಾಸಿ ಶಾಂತಾ (66) ದಯಾಮರಣಕ್ಕಾಗಿ ರಾಷ್ಟ್ರಪತಿಗಳಿಗೆ ಪತ್ರ ಬರೆದವರಾಗಿದ್ದು, ಕೊಡಗು ಜಿಲ್ಲೆಯಲ್ಲಿ 2019ರಲ್ಲಿ ಸುರಿದ ಭಾರೀ ಮಳೆಯಿಂದಾಗಿ ನೆಲ್ಯಹುದಿಕೇರಿ ಸೇರಿದಂತೆ ಹಲವೆಡೆ ನೂರಾರು ಮನೆಗಳು ಕೊಚ್ಚಿ ಹೋಗಿತ್ತು. ಪ್ರವಾಹ ಸಂದರ್ಭದಲ್ಲಿ ಶಾಂತಾ ಅವರ ಮನೆ ಕುಸಿದು ಬಿದ್ದಿತ್ತು. ಪುನರ್ವಸತಿಗಾಗಿ ಅವರು ಹಲವಾರು ಅರ್ಜಿಗಳನ್ನು ಸಲ್ಲಿಸಿ, ಕಚೇರಿಗಳಿಗೆ ಅಲೆದಾಡಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಹಾಗಾಗಿ ಇತ್ತೀಚೆಗೆ



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದು ತಮ್ಮ ದುಸ್ಥಿತಿಯನ್ನು ವಿವರಿಸಿದ್ದಾರೆ. 2019ರ ಪ್ರವಾಹದಲ್ಲಿ ತನ್ನ ಮನೆ ಸೇರಿದಂತೆ ಹಲವಾರು ಮನೆಗಳು ಕೊಚ್ಚಿಹೋಗಿವೆ. ನೆಲ್ಯಹುದಿಕೇರಿ, ಸಿದ್ದಾಪುರ, ಕರಡಿಗೋಡು, ಗುಹ್ಯ ಮತ್ತು ಸುತ್ತಮುತ್ತಲಿನ ತಗ್ಗು ಪ್ರದೇಶಗಳು ಪ್ರವಾಹಕ್ಕೆ ಸಿಲುಕಿವೆ ಎಂದು ಅವರು ಹೇಳಿದರು.

ಮನೆ ಕಳೆದುಕೊಂಡು 4 ವರ್ಷಗಳಾದರೂ ಪುನರ್ವಸತಿ ಪಡೆಯಲಾಗದೆ ಶಾಂತಾ ಬೇಸತ್ತಿದ್ದಾರೆ. ಹೀಗಾಗಿ, ತಮಗೆ ಮನೆ ಕಟ್ಟಿಕೊಡಿ, ಇಲ್ಲವೇ, ದಯಾಮರಣಕ್ಕೆ ಅನುಮತಿ ಕೊಡಿ ಎಂದು ರಾಷ್ಟ್ರಪತಿಗೆ ಪತ್ರ ಬರೆದಿದ್ದಾರೆ. ಯಡಿಯೂರಪ್ಪ ನೇತೃತ್ವದ ಸರ್ಕಾರ ಪ್ರವಾಹ ಸಂತ್ರಸ್ತರಿಗೆ ಹೊಸ ಮನೆಗಳ ಭರವಸೆ ನೀಡಿತ್ತು. ಪ್ರವಾಹ ಸಂತ್ರಸ್ತರಿಗೆ ಹೊಸ ಮನೆಗಳ ನಿರ್ಮಾಣ ಪೂರ್ಣಗೊಳ್ಳುವವರೆಗೆ ಸಂತ್ರಸ್ತರು ಉಳಿದುಕೊಂಡಿರುವ ಮನೆಗಳಿಗೆ ಮಾಸಿಕ ಬಾಡಿಗೆ ನೀಡುವುದಾಗಿಯೂ ಸರ್ಕಾರ ಭರವಸೆ ನೀಡಿತ್ತು. ಆದರೆ, ಸರ್ಕಾರ ತನ್ನ ಭರವಸೆಯನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂದು ರಾಷ್ಟ್ರಪತಿಗಳಿಗೆ ಬರೆದ ಪತ್ರದಲ್ಲಿ ಶಾಂತಾ ಅವರು ಆರೋಪಿಸಿದ್ದಾರೆ. ತಾನೇ ಮನೆ ನಿರ್ಮಿಸಲು ಜಿಲ್ಲಾಡಳಿತ ಮತ್ತು ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ತೋರುತ್ತಿದ್ದಾರೆ. ಒಂದೋ ನನಗೆ ಮನೆ ನಿರ್ಮಿಸಲು ಸರ್ಕಾರ ಸಹಾಯ ಮಾಡಬೇಕು ಅಥವಾ ಸಾಯಲು ನನಗೆ ಅನುಮತಿ ನೀಡಬೇಕು ಎಂದು ಪತ್ರದಲ್ಲಿ ಬರೆದಿದ್ದಾರೆ. ಶಾಂತಾ ಮನೆಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಇದೀಗ ಬಾಡಿಗೆ ಮನೆಯಲ್ಲಿ ವಾಸವಿದ್ದು, ಮಾಸಿಕ ಬಾಡಿಗೆ ಕಟ್ಟಲು ಸಾಧ್ಯವಾಗುತ್ತಿಲ್ಲ. ಹಣಕಾಸಿನ ಪರಿಸ್ಥಿತಿ ಯು ದಿನದಿಂದ ದಿನಕ್ಕೆ ಹದಗೆಡುತ್ತಿದೆ ಎಂದು ಮನವಿ ಮಾಡಿದ್ದಾರೆ.

ಅಕ್ರಮ ಗೋ ಸಾಗಾಟ; ಇಬ್ಬರ ಬಂಧನ

ಮಡಿಕೇರಿ, ಜೂ.26– ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ ಗೋ ಸಾಗಾಟ ಮಾಡುತ್ತಿದ್ದ ಪ್ರಕರಣವನ್ನು ಪೊನ್ನಂಪೇಟೆ ಪೊಲೀಸರು ಪತ್ತೆ ಹಚ್ಚಿ, ವಾಹನ ಸಹಿತ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.



ಕೇರಳದ ಮಾನಂದವಾಡಿ ನಿವಾಸಿ ಕೆ.ಆರ್.ಕುಮಾರ್ ಮತ್ತು ಗೋಣಿಕೊಪ್ಪಲುವಿನ ಚೆನ್ನಂಗೊಲ್ಲಿಯ ನಿವಾಸಿ ಪಿ.ಎಸ್. ಪ್ರಸನ್ನ ಎಂಬವರೇ ಬಂಧಿತ ಆರೋಪಿಗಳಾಗಿದ್ದು, ಇವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪೊನ್ನಂಪೇಟೆಯ ಮಾಪಿಳ್ಳೆತೋಡು ಬಳಿಯ ಬೇಗೂರು ಗ್ರಾಮದ ಮುಖ್ಯ ರಸ್ತೆಯಲ್ಲಿ ಭಾನುವಾರ ರಾತ್ರಿ ಅಕ್ರಮವಾಗಿ ಗೋಸಾಗಾಟ ಮಾಡುತ್ತಿದ್ದ ಬಗ್ಗೆ ಪೊನ್ನಂಪೇಟೆ ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಇದನ್ನಾಧರಿಸಿ ದಾಳಿ ನಡೆಸಿದ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿ, ಗೋವುಗಳನ್ನು ಸಾಗಾಟ ಮಾಡಲು ಬಳಸಿದ್ದ (ಕೆಎ.12–ಸಿ–1080) ಅಶೋಕ್ ಲೈಲ್ಯಾಂಡ್ ಗೂಡ್ಸ್ ವಾಹನವನ್ನು ವಶಕ್ಕೆ ಪಡೆದಿದ್ದಾರೆ. ಎರಡು ಜಾನುವಾರುಗಳನ್ನು ರಕ್ಷಿಸಿ ಮೈಸೂರಿನ ಪಿಂಜರಾಪೋಲ್‌ಗೆ ಸ್ಥಳಾಂತರಿಸಲಾಗಿದೆ. ಪೊನ್ನಂಪೇಟೆ ಪೊಲೀಸ್ ಠಾಣಾಧಿಕಾರಿ ಲಕ್ಷ್ಮಣ ಕಾಮಣ್ಣನವರ್, ಅಪರಾಧ ವಿಭಾಗದ ಠಾಣಾಧಿಕಾರಿ ಸುಬ್ರಮಣಿ, ಸಿಬ್ಬಂದಿಗಳಾದ ಮಂಜುನಾಥ್, ಮುತ್ತುರಾಜ್, ಭರತ್ ಕುಮಾರ್, ನರೇಂದ್ರ, ಮಹದೇವಸ್ವಾಮಿ ಅವರುಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಹಾರಂಗಿ ಹಿನ್ನೀರಲ್ಲಿ ನಿಲಸುಗಲ್ಲು, ವೃತ್ತಾಕಾರದ ಸಮಾಧಿಗಳು ಪತ್ತೆ

ಕುಶಾಲನಗರ, ಜೂ.26– ತಾಲೂಕಿನ ಹಾರಂಗಿ ಹಿನ್ನೀರು ಪ್ರದೇಶ ವ್ಯಾಪ್ತಿಯ ಹಾದ್ರೆ, ಹೇರೂರು, ಕಲ್ಲೂರಿನಲ್ಲಿ ಬೃಹತ್ ಸಂಸ್ಕೃತಿಯ ಕಾಲಮಾನದ ನಿಲಸುಗಲ್ಲು ಮತ್ತು ವೃತ್ತಾಕಾರದ ಸಮಾಧಿಗಳು ಪತ್ತೆಯಾಗಿವೆ.

ಚಿಕ್ಕ ಅಳುವಾರ ಕೊಡಗು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಉಪನ್ಯಾಸಕ ಡಾ. ಎಚ್.ಆರ್.ಅರುಣ್ ಕುಮಾರ್ ನೇತೃತ್ವದಲ್ಲಿ ನಡೆದ ಕ್ಷೇತ್ರ ಕಾರ್ಯದಲ್ಲಿ ಪತ್ತೆ ಹಚ್ಚಿದ್ದಾರೆ. ಬಸವನಹಳ್ಳಿ ಮುಖ್ಯ ರಸ್ತೆಯ ಅರಣ್ಯ ಪ್ರದೇಶದಿಂದ ಕೂಡಿರುವ ಈ ಪ್ರದೇಶದಲ್ಲಿ ರಸ್ತೆಯ ಬಲ ಭಾಗದಲ್ಲಿ ನಿಲಸುಗಲ್ಲು ಪತ್ತೆಯಾಗಿದ್ದು, 8 ಅಡಿ ಎತ್ತರವಿದೆ. ಎತ್ತರಕ್ಕೆ ಹೋದಂತೆ ಚೂಪಾಗಿ ಮತ್ತು ದಪ್ಪವಾಗಿ ಭೂಮಿ ಒಳಗೆ ಹೂತ್ತಿಕೊಂಡಿದ್ದು ದೊಡ್ಡ ಗಾತ್ರದಲ್ಲಿ ಕಾಣುತ್ತದೆ. ಇದರಲ್ಲಿ ಯಾವುದೇ ಕೆತ್ತನೆಗಳು ಕಂಡು ಬಂದಿಲ್ಲ.





ಮುಂದೆ ಹೇರೂರು ಕಲ್ಲೂರು ಹಿನ್ನೀರಿನ ಪ್ರದೇಶದಲ್ಲಿ ಬೃಹತ್ ಪ್ರಮಾಣದ ವೃತ್ತಾಕಾರದ ಆರು ಸಮಾಧಿಗಳು ಮತ್ತು ಎಂಟು ನಿಲಸುಗಲ್ಲು ಕಂಡುಬಂದಿವೆ. ಈ ಸಮಾಧಿಗಳ ಮಧ್ಯೆ ಗಿಡ ಗಂಟಿಗಳು ಬೆಳೆದು ನಿಂತಿವೆ. ಒಂದು ಸಮಾಧಿಯು 30 ಅಡಿ ಅಗಲ ಇದೆ. 24 ಬೃಹತ್ ಉಂಡೆ ಕಲ್ಲುಗಳನ್ನು ಬಳಸಿ ಮಧ್ಯೆ ಬೃಹತ್ ಬಂಡೆಯನ್ನು ಭೂಮಿಗೆ ಹೂತಿದಂತೆ ವೃತ್ತಾಕಾರದ ಸಮಾಧಿಯನ್ನು ಮಾಡಿದ್ದಾರೆ. ಕಲ್ಲು ಚಪ್ಪಡಿಗಳಿಂದ ಕೂಡಿದೆ. ಸಮಾಧಿಗಳನ್ನು ನಿರ್ಮಿಸಿದ್ದಾರೆ. ಅನೇಕ ಸಮಾಧಿಗಳು ನೈಸರ್ಗಿಕ ವಿಕೋಪದಿಂದ ಭೂಮಿಯಿಂದ ಕಲ್ಲುಗಳು ಹೊರ ಬಂದಿವೆ. ಈ ಪ್ರದೇಶವು ಬೃಹತ್ ಸಂಸ್ಕೃತಿಯ ಜನಾಂಗದ ನೆಲೆಯಾಗಿದ್ದು. ಈ ಪ್ರದೇಶ ಕಪ್ಪು ಮಣ್ಣಿನಿಂದ ಕೂಡಿದೆ. ವ್ಯವಸಾಯಕ್ಕೆ ಮತ್ತು ಮಡಿಕೆ ತಯಾರಿಕೆಗೆ ಯೋಗ್ಯವಾದ ಪ್ರದೇಶವಾಗಿದೆ. ನೀರಿನ ಸೌಲಭ್ಯವು ಸಹ ಸಿಗುತ್ತದೆ. ಈ ಸಂಸ್ಕೃತಿಯ ವಿಶೇಷವೆಂದರೆ ಕಬ್ಬಿಣ ಬಳಸಿ, ಬೃಹತ್ ಬಂಡೆಗಳನ್ನು, ಸೀಳಿ ಚಪ್ಪಡಿಗಳನ್ನು ತಯಾರಿಸಿ ಶವಗಳನ್ನು ಹೂಳುವ ಪದ್ಧತಿ ಇತ್ತು. ಕಬ್ಬಿಣದ ಆಯುಧಗಳ ಬಳಕೆ, ಮಡಿಕೆಗಳ ತಯಾರಿಕೆಗಳು ಕಂಡು ಬರುತ್ತವೆ. ಸ್ಥಳೀಯರು ಇವುಗಳನ್ನು ಪಾಂಡವರ ದೇವರುಗಳ ಕಲ್ಲು ಎಂದು ಕರೆಯುತ್ತಾರೆ.

ಪೂಜೆಯನ್ನು ಮಾಡುತ್ತಾರೆ. ಈ ಬೃಹತ್ ಶಿಲಾಯುಗದ ಸಂಸ್ಕೃತಿಯು ಕ್ರಿಸ್ತಪೂರ್ವ 700 ರಿಂದ 400 ಕಾಲಮಾನ ಎಂದು ಹೇಳಬಹುದು. ಕರ್ನಾಟಕದಲ್ಲಿ ಬೃಹತ್ ಶಿಲಾಯುಗದ ಸಮಾಧಿಯನ್ನು ಬ್ರಿಟಿಷ್ ಆಡಳಿತಕಾರಿ ರಾಬರ್ಟ್ ಬ್ರೂಸ್ ಬೂಟ್ ಅನೇಕ ನೆಲೆಗಳನ್ನು ಸಂಶೋಧನೆ ಮಾಡಿದ್ದಾರೆ. ಕರ್ನಾಟಕದಲ್ಲಿ ಇಂತ ನೆಲೆಗಳು ಸಂಗನಕಲ್ಲು ಮೈಸೂರು ಜಿಲ್ಲೆ, ಚಾಮರಾಜನಗರ ಜಿಲ್ಲೆ, ಕೊಡಗಿನ ಹೆಗ್ಗಡೆಹಳ್ಳಿ, ಕೊಪ್ಪ, ಚಿಕ್ಕ ಅಳುವಾರ, ತೊರೆನೂರು ಮುಂತಾದ ಪ್ರದೇಶಗಳಲ್ಲಿ ಕಂಡು ಬಂದಿವೆ. ಆದರೆ ಕೊಡಗು ಜಿಲ್ಲೆಯಲ್ಲಿ ದೊಡ್ಡ ನಿಲಿಸುಗಲ್ಲು ಕಂಡುಬಂದಿರುವುದು ಈ ಪ್ರದೇಶದಲ್ಲಿ ಮಾತ್ರ. ಬೃಹತ್ ಶಿಲಾಯುಗದ ಸಂಸ್ಕೃತಿಯ ಮಾನವರು ಯೋಗ್ಯವಾದ ಮಣ್ಣನ್ನು ಮತ್ತು ವಾಸ ಮಾಡುವುದಕ್ಕೆ ಯೋಗ್ಯವಾದ ಸ್ಥಳವನ್ನು ಹುಡುಕುತ್ತಿದ್ದರು. ಇದು ಅರಣ್ಯ ಪ್ರದೇಶವಾಗಿರುವುದರಿಂದ ಉತ್ತಮವಾದ ಹವಾಗುಣ ಇರುವುದರಿಂದ ಈ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇಂತಹ ಬೃಹತ್ ಶಿಲಾಯುಗ ಸಮಾಧಿಗಳನ್ನು ಕೊಡಗು ಜಿಲ್ಲೆಯ ಪುರಾತತ್ವ ಇಲಾಖೆ ಸ್ವಚ್ಛಗೊಳಿಸಿ, ಹಿನ್ನೀರಿನ ಪ್ರದೇಶ ಮತ್ತೆ ಪ್ರವಾಸಿತಾಣವಾಗಿ ಆಕರ್ಷಣೆ ಮಾಡಬೇಕಾಗಿದೆ. ಈ ಸಂಸ್ಕೃತಿಯ ಸಮಾಧಿಗಳನ್ನು ಉಳಿಸಬೇಕಾಗಿದೆ.

ನಾಳೆ ನೇರ ಸಂದರ್ಶನ

ಮಂಡ್ಯ, ಜೂ.26– ಮೆ॥ ಚೈತನ್ಯ ಇಂಡಿಯಾ ಫಿನ್‌ಕ್ರೆಡಿಟ್ ಪ್ರೈ.ಲಿ, ವತಿಯಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಜೆಓಸಿ ಹಾಗೂ ಯಾವುದೇ ಪದವಿಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಜೂ.28 ರಂದು ಬೆಳಗ್ಗೆ 10 ಗಂಟೆಗೆ ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಕಸ್ಟಮರ್ ರಿಲೇಷನ್‌ಷಿಪ್ ಎಕ್ಸಿಕ್ಯೂಟಿವ್ ಹುದ್ದೆಗಳಿಗಾಗಿ ನೇರ ಸಂದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಹೆಚ್ಚಿನ ವಿವರಗಳಿಗೆ ಮೊ: 9164642684 ಮತ್ತು ದೂ:08232–295124 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಮಂಡ್ಯ, ಜೂ.26– ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಿಂದ ಜಿಲ್ಲೆಯ ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ / ಸಂಸ್ಥೆಗಳಿಗೆ 2023ನೇ ಸಾಲಿನಲ್ಲಿ ರಾಷ್ಟ್ರಪ್ರಶಸ್ತಿ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು www.awards.gov.in ವೆಬ್ ಸೈಟ್ ಮೂಲಕ ಜು.31 ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ www.disabilityaffairs.gov.in ವೆಬ್‌ಸೈಟ್ ಅಥವಾ ದೂ:08232–231090/239234 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನರೇಗಾ ಯೋಜನೆಯಡಿ ಬಾಕಿ ಕಾಮಗಾರಿ ಪೂರ್ಣಗೊಳಿಸಿ

ತಾಪಂ ಆಡಳಿತಾಧಿಕಾರಿ ಧನರಾಜ್ ಬೋಳಾರೆ

ಮದ್ದೂರು, ಜೂ.26– ನರೇಗಾ ಯೋಜನೆಯಡಿ ಬಾಕಿ ಇರುವ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಸಕಾಲದಲ್ಲಿ ಪೂರ್ಣಗೊಳಿಸಿ ಗ್ರಾಮಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕೆಂದು ತಾಪಂ ಆಡಳಿತಾಧಿಕಾರಿ ಧನರಾಜ್ ಬೋಳಾರೆ ತಿಳಿಸಿದರು.

ಪಟ್ಟಣದ ತಾಪಂ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಕೆಲ ಗ್ರಾಮಗಳಲ್ಲಿ ನರೇಗಾ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸದೆ ಅಭಿವೃದ್ಧಿ ಕುಂಠಿತವಾಗಿದ್ದು, ಕೂಡಲೇ ನರೇಗಾ ಕೆಲಸ ಕಾರ್ಯಗಳನ್ನು ತ್ವರಿತಗತಿಯಲ್ಲಿ ಕೈಗೊಂಡು ಮೂಲ ಸೌಲಭ್ಯಗಳಿಗೆ ಹೆಚ್ಚಿನ ಒತ್ತು ನೀಡಬೇಕೆಂದರು.

ಅರಣ್ಯ ಇಲಾಖೆ ಕೋಟಿ ವೃಕ್ಷ ಅಭಿಯಾನ ಹಾಗೂ ಹಸಿರು ಸರೋವರ ಯೋಜನೆಯಡಿ ಗಿಡ ನೆಡುವ ಕಾರ್ಯಕ್ರಮಕ್ಕೆ ಮುಂದಾಗಿದ್ದು, ರೇಷ್ಮೆ, ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಕೈಜೋಡಿಸುವ ಮೂಲಕ ಸರ್ಕಾರಿ ಬರಡು ಭೂಮಿ, ಸಾರ್ವಜನಿಕ ಭೂಮಿಯಲ್ಲಿ ಗಿಡ ನೆಟ್ಟು ಅರಣ್ಯ ಸಂರಕ್ಷಣೆಗೆ ಮುಂದಾಗಿ ಇತರರಿಗೂ ಅರಿವು ಮೂಡಿಸಬೇಕೆಂದು ಸೂಚಿಸಿದರು.

ಜಿಪಂ ಸಿಇಓ ಮಾರ್ಗದರ್ಶನದಲ್ಲಿ 12 ಅಂಶದ ಕಾರ್ಯಕ್ರಮ ಹಮ್ಮಿಕೊಂಡಿದ್ದು, ನರೇಗಾ ಯೋಜನೆಯಡಿ ಪುರಾತತ್ವ ಇಲಾಖೆಗೆ ಒಳಪಡುವ ತಾಲೂಕಿನ ಆತ ಗೂರು, ಕೊಳಗೆರೆ, ಕೆ.ಬೆಳ್ಳೂರು ಮತ್ತು ವೀರಗಲ್ಲುಗಳನ್ನು ಒಳಗೊಂಡಂತೆ ಇತಿಹಾಸ ಪ್ರಸಿದ್ಧ ಸ್ಥಳಗಳನ್ನು ಜೀರ್ಣೋದ್ಧಾರಗೊಳಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದು ಅಧಿಕಾರಿಗಳು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಬೇಕೆಂದರು.



ಮುಂಗಾರು ಮಳೆ ವಿಳಂಭವಾಗಿರುವ ಹಿನ್ನೆಲೆಯಲ್ಲಿ ರೈತರು ಆತಂಕಕ್ಕೊಳಗಾಗಿದ್ದು, ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗುವ ಮುನ್ಸೂಚನೆ ಇದೆ. ಕೃಷಿ ಇಲಾಖೆ ಅಧಿಕಾರಿಗಳು ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕ ಮತ್ತು ಹಸಿರು ಎಲೆ ಗೊಬ್ಬರದ ಬೀಜಗಳನ್ನು ಸಕಾಲದಲ್ಲಿ ರೈತರಿಗೆ ವಿತರಿಸಿ ಯಾವುದೇ ತೊಡಕುಂಟಾಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಬೇಕೆಂದರು.

ಜಲ ಸಂಜೀವಿನಿ ಕಾಮಗಾರಿ ಮತ್ತು ವಿಪತ್ತು ನಿರ್ವಹಣೆ, ಗೋಮಾಳ ಅಭಿವೃದ್ಧಿ, ಕೊಳವೆ ಬಾವಿ ಮರುಜೀವನ, ಜೈವಿಕ ಅನಿಲ ಮತ್ತು ಹಸಿರು ಸರೋವರ ಪಂಚ ಅಭಿಯಾನಗಳನ್ನು, ಸರ್ಕಾರದ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸಿ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕೆಂದು ಸಭೆಯಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಿನಾದ್ಯಂತ ನಿಷ್ಕ್ರಿಯಗೊಂಡಿರುವ ಕೊಳವೆ ಬಾವಿಗಳ ಅಂದಾಜು ಪಟ್ಟಿ ತಯಾರಿಸಿ ಅವುಗಳ ದುರಸ್ಥಿ ಕಾರ್ಯಕ್ಕೆ ಮುಂದಾಗುವ ಜತೆಗೆ ವಿನ್ಯಾಸದಂತೆ ಅನುಷ್ಠಾನಗೊಳಿಸಿ ಅಂತರ್ಜಲ ಮಟ್ಟ ಕುಸಿತಗೊಂಡಿರುವ ಕೊಳವೆ ಬಾವಿಗಳ ಮರುಜೀವನಕ್ಕೆ ಹೆಚ್ಚಿನ ಒತ್ತು ನೀಡಬೇಕೆಂದರು.

ತಾಲೂಕಿನ ಇಲಾಖಾವಾರು ಅಧಿಕಾರಿಗಳು ಸರ್ಕಾರದ ಯೋಜನೆಗಳನ್ನು ಹಂತ ಹಂತವಾಗಿ ಅರ್ಹ ಫಲಾನುಭವಿಗಳಿಗೆ ತಲುಪಲು ಕ್ರಮ ವಹಿಸಬೇಕು. ಕೆಲ ಅಧಿಕಾರಿಗಳು ಸಾರ್ವಜನಿಕರ ಕೆಲಸ ಕಾರ್ಯಗಳಲ್ಲಿ ವಿಳಂಬ ಮಾಡುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಕೇಳಿ ಬಂದಿದ್ದು ಅಂತಹ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮದ ಬಗ್ಗೆ ಎಚ್ಚರಿಕೆ ನೀಡಿದರು.

ಸಭೆ ವೇಳೆ ತಾಪಂ ಇಓ ಸಂದೀಪ್, ವಿವಿಧ ಇಲಾಖೆ ಅಧಿಕಾರಿಗಳಾದ ಎಸ್.ಕೆ.ತಮ್ಮೇಗೌಡ, ಸಿ.ನಾಗಲಕ್ಷ್ಮಿ, ಲೋಕೇಶ್, ಅಭಿಷೇಕ್, ವೆಂಕಟೇಶ್ ಇತರರಿದ್ದರು.

ಭಾರತೀನಗರದಲ್ಲಿ ಕೆಂಪೇಗೌಡರ ಸ್ತಬ್ಧಚಿತ್ರಕ್ಕೆ ಅದ್ದೂರಿ ಸ್ವಾಗತ



ಭಾರತೀನಗರ, ಜೂ.26– ನಾಡಪ್ರಭು ಕೆಂಪೇಗೌಡರ 154ನೇ ಜಯಂತಿ ಅಂಗವಾಗಿ ಸಂಚರಿಸುತ್ತಿರುವ ಕೆಂಪೇಗೌಡರ ಸ್ತಬ್ಧಚಿತ್ರವನ್ನು ಭಾರತೀನಗರದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಅದ್ದೂರಿಯಾಗಿ ಸ್ವಾಗತಿಸಿ, ಬೀಳ್ಕೊಟ್ಟರು.

ಇಲ್ಲಿನ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಬಳಿ ಆಗಮಿಸಿದ ಕೆಂಪೇಗೌಡರ ಸ್ತಬ್ಧಚಿತ್ರವನ್ನು ವಾದ್ಯಗೋಷ್ಠಿಯೊಂದಿಗೆ ಮದ್ದೂರು–ಮಳವಳ್ಳಿ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಭಾರತೀನಗರ ಗ್ರಾಪಂ ಕಚೇರಿ ಮುಂಭಾಗ ಗ್ರಾಪಂ ಸದಸ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿ ಕೆಂಪೇಗೌಡರ ಭಾವಚಿತ್ರಕ್ಕೆ ಬೃಹತ್ ಹೂವಿನ ಹಾರ ಹಾಕಿ ಪೂಜೆ ಸಲ್ಲಿಸಿದರು. ಹಲಗೂರು ವೃತ್ತದ ಸರ್.ಎಂ.ವಿಶ್ವೇಶ್ವರಯ್ಯ ಪುತ್ಥಳಿ ಬಳಿ ಆಗಮಿಸಿದ ವೇಳೆ ನಿವೃತ್ತ ಪ್ರಾಧ್ಯಾಪಕ ಪ್ರೊ.ಬಿ.ಎಸ್.ಬೋರೇಗೌಡ ಕೆಂಪೇಗೌಡರ ಕುರಿತು ಹಲವು ವಿಚಾರ ಮಂಡಿಸಿದರು. ಈ ಸಂದರ್ಭ ವಿವಿಧ ಸಂಘಟನೆಗಳ ಮುಖಂಡರು ಹಾಗೂ ಯುವಕರು ಕೆಂಪೇಗೌಡರಿಗೆ ಜೈಕಾರ ಕೂಗಿದರು.

ಅಂತಿಮವಾಗಿ ಸಾರ್ವಜನಿಕರಿಗೆ ಸಿಹಿ ವಿತರಿಸಿ ಕೆಂಪೇಗೌಡರ ಸ್ತಬ್ಧಚಿತ್ರವನ್ನು ಮದ್ದೂರಿಗೆ ಬೀಳ್ಕೊಡಲಾಯಿತು. ಈ ವೇಳೆ ಕೆಂಪೇಗೌಡ ಒಕ್ಕಲಿಗರ ಸಂಘದ ಅಧ್ಯಕ್ಷ ಶಿವಲಿಂಗೇಗೌಡ, ಶಂಕರೇಗೌಡ, ನಲಿ ಕೃಷ್ಣ, ರವಿಕುಮಾರ್, ಚಿಕ್ಕತಿಮ್ಮೇಗೌಡ, ಎ.ಎಸ್.ರಾಜೀವ್, ಆರ್.ಸಿದ್ದಪ್ಪ, ಗಿರೀಶ್, ಚಂದ್ರಶೇಖರ್, ಸತೀಶ್, ಮಹೇಂದ್ರ, ರಘುವೆಂಕಟೇಗೌಡ, ವೆಂಕಟೇಶ್, ಬಿ.ಕೆ.ಜಗದೀಶ್, ಯೋಗೇಶ್, ಬಸವರಾಜು, ಶಿವಲಿಂಗಯ್ಯ, ಶ್ರೀನಿವಾಸ್, ಚಾಂಷುಗರ್ ಆಡಳಿತಾಧಿಕಾರಿಗಳಾದ ನಿತೀಶ್, ನಿಂಗಪ್ಪ ಇನ್ನರ್‌ವೀಲ್ಡ್ ಸಂಸ್ಥೆ ಪದಾಧಿಕಾರಿಗಳು ಸೇರಿದಂತೆ ಹಲವರಿದ್ದರು.

ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಜೂ.26– ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ 2023–24ನೇ ಸಾಲಿಗೆ ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ ಅರ್ಹ ಕೈಮಗ್ಗ ನೇಕಾರರಿಂದ ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.


ಅರ್ಹ ಕೈಮಗ್ಗ ನೇಕಾರರು ರಾಷ್ಟ್ರೀಕೃತ ಬ್ಯಾಂಕಿನಿಂದ ಕೈಮಗ್ಗ ನೇಯ್ಗೆ ಚಟುವಟಿಕೆಗಾಗಿ 50 ಸಾವಿರದಿಂದ 2 ಲಕ್ಷದವರೆಗೆ ಸಾಲ ಸೌಲಭ್ಯ ಪಡೆಯಲು ಅವಕಾಶವಿದೆ. ಹೆಚ್ಚಿನ ಮಾಹಿತಿಗೆ ದೂ:08232–222366 ಸಂಪರ್ಕಿಸಿ.

ನಾಳೆ ಗೋಹತ್ಯೆ ನಿಷೇಧ ಕಾಯ್ದೆ ಬಲಪಡಿಸಲು ಆಗ್ರಹಿಸಿ ಪ್ರತಿಭಟನೆ

ಮಂಡ್ಯ, ಜೂ.26– ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ನಿಷ್ಕ್ರಿಯಗೊಳಿಸದೇ, ಕಾಯ್ದೆಯನ್ನು ಬಲಪಡಿಸಿ ವ್ಯವಸಾಯವನ್ನೇ ನಂಬಿರುವ ರೈತರನ್ನು ಉಳಿಸಬೇಕೆಂದು ಆಗ್ರಹಿಸಿ ಜೂ.28ರಂದು ಮಂಡ್ಯದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ನೂರಾರು ರೈತರೊಂದಿಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದು ಭಾರತೀಯ ಕಿಸಾನ್ ಸಂಘದ ಪ್ರಾಂತ ಪ್ರಧಾನ ಕಾರ್ಯದರ್ಶಿ ಹಾಡ್ಯ ರಮೇಶ್ ರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಿಸಾನ್ ಸಮ್ಮಾನ್ ಯೋಜನೆ ಮೂಲಕ ಕೇಂದ್ರ ಸರ್ಕಾರ 6 ಸಾವಿರ ಹಾಗೂ ರಾಜ್ಯ ಸರ್ಕಾರ 4 ಸಾವಿರ ರೂ.ಗಳನ್ನು ರೈತರ ವ್ಯವಸಾಯದ ಖರ್ಚಿಗೆ ಧನಸಹಾಯ ನೀಡುತ್ತಿರುವುದರಿಂದ ರೈತರ ಆತ್ಮಹತ್ಯೆಗಳು ಕೊಂಚ ತಗ್ಗಿದೆ. ಆದರೂ ವ್ಯವಸಾಯದ ಖರ್ಚು ಇಂದಿನ ದಿನಗಳಲ್ಲಿ ತುಂಬಾ ಹೆಚ್ಚಾಗಿದೆ. ಇದರಿಂದ ರೈತ ಕಂಗಾಲಾಗಿದ್ದಾನೆ. ಹೀಗಾಗಿ ರಾಜ್ಯ ಸರ್ಕಾರದಿಂದ ಸಿಗುತ್ತಿರುವ 4 ಸಾವಿರ ಧನ ಸಹಾಯವನ್ನು 10 ಸಾವಿರ ರೂ.ಗಳಿಗೆ ಏರಿಸಿ ರೈತರನ್ನು ಉಳಿಸಬೇಕಾಗಿದೆ ಎಂದರು. ಕೃಷಿ ಉತ್ಪನ್ನ ಮಾರುಕಟ್ಟೆ ಸಂಸ್ಥೆ (ಎಪಿಎಂಸಿ)ಯ ಹೊರಗೂ ರೈತರ ಉತ್ಪನ್ನ ಮಾರಾಟ ಮಾಡಲು ಅವಕಾಶ ಕಲ್ಪಿಸುವ ರೈತ ಉತ್ಪನ್ನ ವಾಣಿಜ್ಯ ವ್ಯವಹಾರ ಕಾಯ್ದೆ, ಬೆಲೆ ಖಾತ್ರಿ ಒಪ್ಪಂದ ಮತ್ತು ಕೃಷಿ ಸೇವೆಗಳ (ಸಬಲೀಕರಣ ಮತ್ತು ರಕ್ಷಣೆ) ಕಾಯ್ದೆ ಹಾಗೂ ಕೃಷಿ ಉತ್ಪನ್ನಗಳ ದಾಸ್ತಾನು ಮಿತಿ ರದ್ದುಗೊಳಿಸುವ ಅಗತ್ಯ ವಸ್ತುಗಳ (ತಿದ್ದುಪಡಿ) ಕಾಯ್ದೆಗಳು ಈಗಾಗಲೇ ಕರ್ನಾಟಕದಲ್ಲಿ ಜಾರಿಯಲ್ಲಿದೆ. ಈ ಕೃಷಿ ಕಾಯ್ದೆಗಳು ರೈತರಿಗೆ ಅನುಕೂಲಕರವಾಗಿರುವುದರಿಂದ ಅದನ್ನು ಉಳಿಸಿಕೊಂಡು ಇನ್ನಷ್ಟು ಬಲಪಡಿಸಬೇಕೆಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಮುಖಂಡರಾದ ವೆಂಕಟೇಶ್, ರಮೇಶ್ ರಾಜು, ಜೆಕೆಬಸವರಾಜು, ಪುಟ್ಟಮ್ಮ ಉಪಸ್ಥಿತರಿದ್ದರು.

ಮಾದಪ್ಪನ ಬೆಳ್ಳಿ ರಥ ಭಕ್ತರ ಸೇವೆಗೆ ಮುಕ್ತ



ಚಾಮರಾಜನಗರ, ಜೂ.26– ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟದ ಮಾದಪ್ಪ ದೇವಾಲಯದ ಹೊಸ ಬೆಳ್ಳಿ ರಥ ಭಕ್ತರ ಸೇವೆಗೆ ಮುಕ್ತವಾಗಿದೆ.

ಪ್ರತಿ ದಿನ ಬೆಳಗ್ಗೆ 9 ಗಂಟೆಗೆ ಬೆಳ್ಳಿ ತೇರಿನ ಉತ್ಸವ ನಡೆಯಲಿದ್ದು, ಉತ್ಸವಕ್ಕೆ 2001 ರೂ. ಶುಲ್ಕ ನಿಗದಿಪಡಿಸಲಾಗಿದೆ. ಮಾರ್ಚ್ 18ರಂದು, 108 ಅಡಿ ಎತ್ತರದ ಮಹದೇಶ್ವರ ಸ್ವಾಮಿಯ ಪ್ರತಿಮೆ ಅನಾವರಣ ಮಾಡಿದ ದಿನ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಳ್ಳಿ ರಥವನ್ನು ಉದ್ಘಾಟಿಸಿದ್ದರು. ಮೂರು ತಿಂಗಳಾಗಿದ್ದರೂ ರಥ ಭಕ್ತರ ಸೇವೆಗೆ ಮುಕ್ತವಾಗಿರಲಿಲ್ಲ. ಪಾಲಿಶಿಂಗ್ ಮತ್ತು ಕಳಶಕ್ಕೆ ಚಿನ್ನದ ಲೇಪನ ಕಾರಣಕ್ಕೆ ವಿಳಂಬವಾಗಿತ್ತು. ಮಣ್ಣೆತ್ತಿನ ಅಮಾವಾಸ್ಯೆ ದಿನದಿಂದ ಬೆಳ್ಳಿ ರಥೋತ್ಸವ ಆರಂಭಿಸಲಾಗುವುದು ಎಂದು ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಹೇಳಿದ್ದರು. ಅದಾಗಿ ವಾರದ ನಂತರ ಬೆಳ್ಳಿ ರಥ ಭಕ್ತರ ಸೇವೆಗೆ ಸಮರ್ಪಿತವಾಗಿದೆ.

ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಹನೂರು ಶಾಸಕ ಎಂ.ಆರ್. ಮಂಜುನಾಥ್, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರೂ ಆದ, ಪ್ರಾಧಿಕಾರದ ಹಿಂದಿನ ಕಾರ್ಯದರ್ಶಿ ಜಯವಿಭವಸ್ವಾಮಿ, ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಸ್. ಕಾತ್ಯಾಯಿನಿದೇವಿ ಹಾಗೂ ಇತರ ಅಧಿಕಾರಿಗಳು, ಭಕ್ತರ ಉಪಸ್ಥಿತಿಯಲ್ಲಿ ಬೆಳ್ಳಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಬಾಳೆಕಂದು, ಹೂವುಗಳಿಂದ ಅಲಂಕರಿಸಲಾಗಿದ್ದ ಬೆಳ್ಳಿ ರಥದಲ್ಲಿ ಉತ್ಸವ ಮೂರ್ತಿಯನ್ನು ಕೂರಿಸಿ ಪೂಜೆ ಸಲ್ಲಿಸಲಾಯಿತು. ಬಳಿಕ ದೇವಾಲಯದ ಹೊರ ಆವರಣದಲ್ಲಿ ರಥವನ್ನು ಒಂದು ಸುತ್ತು ತರಲಾಯಿತು.

ಭಕ್ತರು ದಾನ, ಕಾಣಿಕೆ ರೂಪದಲ್ಲಿ ನೀಡಿರುವ ಬೆಳ್ಳಿ ಪದಾರ್ಥಗಳನ್ನು ಬಳಸಿಕೊಂಡು 17ಅಡಿ 11 ಇಂಚು ಎತ್ತರದ ತೇಗದ ಮರದಿಂದ ಮಾಡಿದ ರಥಕ್ಕೆ ಬೆಳ್ಳಿ ಕವಚವನ್ನು ಅಳವಡಿಸಲಾಗಿದೆ. ಬೆಳ್ಳಿ ಕೆಲಸದ ಕೂಲಿ 20ಲಕ್ಷವನ್ನು ಭಕ್ತರಾದ ಕೊಯಮತ್ತೂರಿನ ಮೋಹನ್‌ರಾಮ್ ಹಾಗೂ ಬೆಂಗಳೂರಿನ ಸೋಮಶೇಖರ್ ಭರಿಸಿದ್ದರು. ದೇವಾಲಯದಲ್ಲಿ ಚಿನ್ನದ ತೇರು ಕೂಡ ಇದ್ದು, ಪ್ರತಿ ದಿನ ರಾತ್ರಿ 7 ಗಂಟೆಗೆ ಚಿನ್ನದ ರಥೋತ್ಸವ ನಡೆಯುತ್ತದೆ. ಉತ್ಸವದ ಶುಲ್ಕ 3001 ಇದೆ.

ಪಿಂಚಣಿ ಪಡೆಯಲು ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಕಡ್ಡಾಯ

ಚಾಮರಾಜನಗರ, ಜೂ.26– ವೃದ್ಧಾಪ್ಯ, ಸಂಧ್ಯಾ ಸುರಕ್ಷಾ, ವಿಧವಾ, ಅಂಗವಿಕಲ, ಮೈತ್ರಿ, ಮನಸ್ವಿನಿ ಹಾಗೂ ಇತರೆ ಮಾಸಿಕ ಪಿಂಚಣಿಯನ್ನು ಪಡೆಯುತ್ತಿರುವ ಫಲಾನುಭವಿಗಳಿಗೆ ನ್ಯಾಷನಲ್ ಪೇಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ) ಇವರ ಮೂಲಕ ಆಧಾರ್ ಆಧಾರಿತ ಪಿಂಚಣಿ ಪಾವತಿ ಮಾಡಲು ಸರ್ಕಾರ ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಆಧಾರ್ ನಂಬರನ್ನು ಬ್ಯಾಂಕ್ ಅಥವಾ ಅಂಚೆ ಕಚೇರಿಯ ಖಾತೆಗೆ ತಕ್ಷಣವೇ ಲಿಂಕ್ ಮಾಡಿಸಿಕೊಳ್ಳಲು ತಿಳಿಸಲಾಗಿದೆ. ಕಡ್ಡಾಯವಾಗಿ ಜುಲೈ 3ರೊಳಗಾಗಿ ತಪ್ಪದೇ ಪಿಂಚಣಿ ಜಮಾ ಆಗುವ ಬ್ಯಾಂಕ್ ಅಥವಾ ಪೋಸ್ಟ್ ಆಫೀಸ್ ಖಾತೆಗೆ ಆಧಾರ್ ನಂಬರ್ ಲಿಂಕ್ ಮಾಡಿಸಬೇಕು. ತಪ್ಪಿದ್ದಲ್ಲಿ ಪಿಂಚಣಿಯು ಸ್ಥಗಿತಗೊಳ್ಳಬಹುದೆಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖಾಸಗಿ ವಲಯದಲ್ಲೂ ಮೀಸಲಾತಿ ಅಗತ್ಯ: ನಟ ಚೇತನ್



ಚಾಮರಾಜನಗರ, ಜೂ.26– ಖಾಸಗಿ ವಲಯದಲ್ಲೂ ಮೀಸಲಾತಿ ಅಗತ್ಯವಾಗಿದೆ ಎಂದು ಚಿತ್ರನಟ ಚೇತನ್ ಅಹಿಂಸಾ ಹೇಳಿದರು. ತಾಲೂಕಿನ ಶಿವಪುರ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಯುವಕ ಸಂಘದಿಂದ ನಡೆದ ವಿಶ್ವರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರ 132ನೇ ಭೀಮಹಬ್ಬ 2023ನೇ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇಂದು ಸರ್ಕಾರ ಬಹುತೇಕ ಎಲ್ಲಾ ಇಲಾಖೆಗಳನ್ನೂ ಖಾಸಗೀಕರಣ ಮಾಡುತ್ತಿರುವುದರಿಂದ ಖಾಸಗಿ ವಲಯದಲ್ಲೂ ಸಾಮಾಜಿಕ ನ್ಯಾಯ ಬಹಳ ಅಗತ್ಯವಾಗಿದೆ. ಅದಕ್ಕಾಗಿ ನಾವು ಖಾಸಗಿ ವಲಯದ ಮೀಸಲಾತಿ ಪರವಾಗಿ ನಿಂತುಕೊಳ್ಳಬೇಕು. ಅದರ ಜೊತೆಗೆ ಕ್ರಿಕೆಟ್‌ನಲ್ಲೂ ಮೀಸಲಾತಿ ಜಾರಿಯಾಗಬೇಕು. ಬಿಸಿಸಿ ಒಂದು ಅತೀ ಶ್ರೀಮಂತ ಕ್ರೀಡಾ ವ್ಯವಸ್ಥೆಯಾಗಿದೆ. ಅಲ್ಲೂ ಕೂಡ ಮೀಸಲಾತಿ ಜಾರಿಯಾಗಬೇಕು ಎಂದು ಒತ್ತಾಯಿಸಿದರು.

ದಿವ್ಯ ಸಾನಿಧ್ಯ ವಹಿಸಿದ್ದ ನಳಂದ ಬೌದ್ಧ ವಿಶ್ವವಿದ್ಯಾನಿಲಯದ ಕಾರ್ಯದರ್ಶಿ ಬಂತೇ ಬೋದಿದತ್ತ ತೇರ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಬೌದ್ಧ ಸಂಘವು 1954ರಲ್ಲಿ 'ಬೋಧಿಸತ್ವ' ಬಿರುದು ನೀಡಿದೆ. ಭಗವಾನ್ ಬುದ್ಧರು ಬಿಟ್ಟರೇ ಬೋದಿಸತ್ವ ಎಂದು ಕರೆಸಿಕೊಂಡವರು ಅಂಬೇಡ್ಕರ್ ಒಬ್ಬರೇ. ಹೀಗಾಗಿ ಭಾರತದ ಎಲ್ಲ ಜನರು ಅಂಬೇಡ್ಕರ್ ಅವರನ್ನು ಒಪ್ಪಿಕೊಳ್ಳಬೇಕು. ಬುದ್ಧ, ಅಂಬೇಡ್ಕರ್‌ರವರ ಆಶಯ ಮೈಗೂಡಿಸಿಕೊಂಡು ಒಳ್ಳೆಯ ಮಾರ್ಗದಲ್ಲಿ ಸಾಗಬೇಕಿದೆ ಎಂದರು.

ಅಂಬೇಡ್ಕರ್‌ರವರ ಪ್ರತಿಮೆ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೇರವೇರಿಸಿದ ಕನಿಷ್ಠ ವೇತನ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಉಮೇಶ್ ಮಾತನಾಡಿ, ಅಂಬೇಡ್ಕರ್‌ರವರ ಪ್ರತಿಮೆ ನಿರ್ಮಾಣಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು ಎಂದರು.

ಕರ್ನಾಟಕ ಬೌದ್ಧ ಸಮಾಜದ ಅಧ್ಯಕ್ಷ ಹ.ರಾ. ಮಹೇಶ್, ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್. ನಾಗಯ್ಯ, ದೈಹಿಕ ಶಿಕ್ಷಕ ಎ.ಎಂ. ಪ್ರಸಾದ್‌ಮೂರ್ತಿ, ಮೈಸೂರು ಮಹಾರಾಜ ಕಾಲೇಜು ಪ್ರಾಧ್ಯಾಪಕ ಯೋಗೇಶ್, ವಕೀಲ ಪ್ರಸನ್ನಕುಮಾರ್, ರಾಮಸಮುದ್ರ ಪುಟ್ಟಸ್ವಾಮಿ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಯುವಕರ ಸಂಘದ ಪದಾಧಿಕಾರಿಗಳು, ಯಜಮಾನರು, ಮಹಿಳಾ ಸಂಘಟನೆಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಬೇಗೂರಲ್ಲಿ ವಿಜೃಂಭಣೆಯ ಬಸವ ಜಯಂತಿ

ಬೇಗೂರು(ಗುಂಡ್ಲುಪೇಟೆ), ಜೂ.26– ಗ್ರಾಮದಲ್ಲಿ ಬೇಗೂರು ಹೋಬಳಿ ವಿಶ್ವಗುರು ಬಸವೇಶ್ವರ ಸೇವಾ ಸಮಿತಿ ವತಿಯಿಂದ 2 ನೇ ವರ್ಷದ ಬಸವ ಜಯಂತಿ ಕಾರ್ಯಕ್ರಮ ಸಾವಿರಾರು ಜನರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಸೋಮಹಳ್ಳಿ ಶಿಲಾಮಠಾಧ್ಯಕ್ಷ ಶ್ರೀ ಸಿದ್ಧಮಲ್ಲಸ್ವಾಮೀಜಿ, ಶಾಸಕ ಎಚ್.ಎಂ ಗಣೇಶ್ ಪ್ರಸಾದ್, ಮಾದಪಟ್ಟಣ ವಿರಕ್ತ ಮಠ ಹಾಗೂ ಸಮಿತಿಯ ಗೌರವಾಧ್ಯಕ್ಷ ಶ್ರೀ ತೋಂಟದಾರ್ಯ ಸ್ವಾಮಿಜಿ ಪುಷ್ಪಾರ್ಚನೆ ಮಾಡುವ ಮೂಲಕ ವಿವಿಧ ಕಲಾ ತಂಡಗಳ ಮೆರವಣಿಗೆಗೆ ಚಾಲನೆ ನೀಡಿದರು.



ಕಾರ್ಯಕ್ರಮದಲ್ಲಿ ಶಿವಕುಮಾರ ಪುರದ ವಿರಕ್ತ ಮಠದ ಶ್ರೀ ಇಮ್ಮುಡಿ ಮಹಾಂತ ಸ್ವಾಮೀಜಿ, ಕಬ್ಬಹಳ್ಳಿ ಮಠದ ಶ್ರೀ ಗುರುಸಿದ್ದ ಸ್ವಾಮೀಜಿ, ಭೋಗಯ್ಯನಹುಂಡಿ ದಾಸೋಹ ಬಿಕ್ಷದ ಮಠ ಶ್ರೀ ನಂಜುಂಡ ಸ್ವಾಮೀಜಿ, ಚಾಮುಲ್ ಮಾಜಿ ಅಧ್ಯಕ್ಷ ಎಚ್.ಎಸ್. ನಂಜುಂಡಪ್ರಸಾದ್, ಜಿಪಂ ಮಾಜಿ ಉಪಾಧ್ಯಕ್ಷ ಕಬ್ಬಹಳ್ಳಿ ಮಹೇಶ್, ತಾಪಂ ಮಾಜಿ ಅಧ್ಯಕ್ಷ ಮಧು ಶಂಕರ್, ಹಾಪ್ ಕಾಮ್ ಜಿಲ್ಲಾಧ್ಯಕ್ಷ ಕೆ.ಆರ್.ಲೋಕೇಶ್, ಎಪಿಎಂಸಿ ತಾ.ಅಧ್ಯಕ್ಷ ರವಿಕುಮಾರ್, ಸದಸ್ಯ ರಂಗೂಪುರ ನಾಗರಾಜು, ಮೂಡ್ಲುಪುರ ನಂದೀಶ್, ಬಸವಣ್ಣ ಹಂಗಳ ನಂಜಪ್ಪ, ಉದ್ಯಮಿ ನಟರಾಜು, ಪಂಚಾಕ್ಷರಿ, ಸುದೀಪ್, ನಿರಂಜನ್, ಸೇರಿದಂತೆ ವೀರಶೈವ ಮಹಾಸಭಾದ ಪದಾಧಿಕಾರಿಗಳು, ಗ್ರಾಮಸ್ಥರು ಹಾಜರಿದ್ದರು.

ಬಾಲಕಿ ಮೇಲೆ ಚಿರತೆ ದಾಳಿ

ಹನೂರು, ಜೂ.26– ಮನೆಯಿಂದ ಹೊರಬಂದ ಬಾಲಕಿ ಮೇಲೆ ದಾಳಿ ನಡೆಸಿದ ಚಿರತೆ ಆಕೆಯನ್ನು ಎಳೆದೊಯ್ಯಲು ಪ್ರಯತ್ನಿಸಿದ ಘಟನೆ ಹನೂರು ತಾಲೂಕು ಕಗ್ಗಲಗುಂಡಿ ಸೋಲಿಗರ ಹಾಡಿಯಲ್ಲಿ ಇಂದು ರಾತ್ರಿ ನಡೆದಿದೆ.

ಹಾಡಿಯ ಆರೂವರೆ ವರ್ಷದ ಬಾಲಕಿ ಸುಶೀಲಾ ಚಿರತೆ ದಾಳಿಯಿಂದ ಗಾಯ ಗೊಂಡವಳಾಗಿದ್ದು, ಈಕೆ ಮನೆಯಿಂದ ಹೊರ ಬಂದಾಗ ಹಠಾತ್ ದಾಳಿ ನಡೆಸಿದ ಚಿರತೆ ಈಕೆಯನ್ನು ಕೆಲ ಅಡಿಗಳಷ್ಟು ದೂರ ಎಳೆದೊಯ್ದಿದೆ. ಬಾಲಕಿಯ ಕಿರುಚಾಟ ಕೇಳಿ ಹೊರ ಬಂದ ಮನೆಯವರ ಕೂಗಾಟಕ್ಕೆ ಚಿರತೆ ಬಾಲಕಿಯನ್ನು ಬಿಟ್ಟು ಕಾಡಿನತ್ತ ಪರಾರಿಯಾಗಿದೆ. ಗಾಯ ಗೊಂಡ ಬಾಲಕಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.



ಒಕ್ಕಲಿಗರ ಸಂಘ (ರಿ) ಮೈಸೂರು ಜಿಲ್ಲೆ
(ಚಾಮರಾಜನಗರ ಜಿಲ್ಲೆ ಒಳಗೊಂಡಂತೆ)
ವಿದ್ಯಾರಣ್ಯಪುರಂ, ಮೈಸೂರು-08
ಸಿ.ಜಿ. ಗಂಗಾಧರ್ ಕಾರ್ಯದರ್ಶಿ ರಾಜ್ಯ ಒಕ್ಕಲಿಗರ ಸಂಘ
ಕೆ.ವಿ.ಶ್ರೀಧರ ನಿರ್ದೇಶಕರು ರಾಜ್ಯ ಒಕ್ಕಲಿಗರ ಸಂಘ
ಎಂ.ಬಿ. ಮಂಜೇಗೌಡ ನಿರ್ದೇಶಕರು, ರಾಜ್ಯ ಒಕ್ಕಲಿಗರ ಸಂಘ
ನಾಡಪ್ರಭು
ಕೆಂಪೇಗೌಡರ
27.06.2023 ಮಂಗಳವಾರ
ಜಯಂತಿಯ ಶುಭಾಶಯಗಳು
ಅರಮನೆಯಿಂದ ಮೆರವಣಿಗೆ ಬೆಳಿಗ್ಗೆ 9.30ಕ್ಕೆ
ಸರ್ವರಿಗೂ ಸುಸ್ವಾಗತ
ಕಾರ್ಯಕ್ರಮ: ಬೆಳಿಗ್ಗೆ 11.00ಕ್ಕೆ ಕಲಾಮಂದಿರ, ಮೈಸೂರು
ಶ್ರೀ ಜಯರಾಮ್ ಆರ್ ಗೌರವಾಧ್ಯಕ್ಷರು
ಶ್ರೀ ಮರಿಸ್ವಾಮಿ ಸಿ ಅಧ್ಯಕ್ಷರು
ಶ್ರೀ ರವಿಕುಮಾರ್ ಆರ್ (ರಾಜಕೀಯ) ಉಪಾಧ್ಯಕ್ಷರು
ಶ್ರೀ ಮಹೇಶ್ ಬಿ.ಸಿ. ಉಪಾಧ್ಯಕ್ಷರು
ಶ್ರೀ ಚೇತನ್ ಎಂ.ಇ. ಪ್ರಧಾನ ಕಾರ್ಯದರ್ಶಿ
ಶ್ರೀ ಜಯರಾಮು ಸಹ ಕಾರ್ಯದರ್ಶಿ
ಶ್ರೀ ಲೋಕೇಶ್ ಆರ್. ಖಜಾಂಚಿ
ನಿರ್ದೇಶಕರುಗಳು
ಜಿ. ಮಂಜು
ಎಂ. ಶಿವಕುಮಾರ್
ಎನ್. ಪ್ರಕಾಶ್
ಎಸ್. ಗುರುರಾಜ್
ಪ್ರಸನ್ನ ಎನ್. ಲಕ್ಷ್ಮಣ್
ಜಿ. ಕುಮಾರ್‌ಗೌಡ
ಶ್ರೀಮತಿ ಸಶೀಲಾ ನಂಜಪ್ಪ
ಎ. ರವಿ.
ಬಿ.ಇ. ಗಿರೀಶ್‌ಗೌಡ
ಬಿ.ಪಿ. ಬೋರೇಗೌಡ
ಎಸ್. ಉಮೇಶ
ಕೆ.ಪಿ. ನಾಗಣ್ಣ
ಗೋಪಾಲ್
ಪಿ. ಪ್ರಶಾಂತ್‌ಗೌಡ
ಮಿರ್ಲೆ ಶ್ರೀನಿವಾಸಗೌಡ ಎಂ ಕೆ
ಹೆಚ್.ಎನ್. ಸುಧೀರ್
ಎಚ್.ಕೆ. ನಾಗಣ್ಣ
ಪಿ.ಹೆಚ್. ರಾಜು
ಎ. ಕುಮಾರ್
ಟಿ.ಎನ್. ಸಂತೋಷ್‌ಕುಮಾರ್
@bhi design: 97407 97701



ನಾಡಪ್ರಭು ಶ್ರೀ ಕೆಂಪೇಗೌಡ ಜಯಂತಿ ಶುಭಾಶಯಗಳು
ಮಾಜಿ ಶಾಸಕರಾದ ಸನ್ಮಾನ್ಯ ಡಾ. ಯತೀಂದ್ರ ಸಿದ್ದರಾಮಯ್ಯರವರಿಗೆ ಹಾಗೂ
ಶ್ರೀ ಎಂ.ಎಸ್. ಆನಂದ್‌ರವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ಹರೀಶ್ ಹೆಚ್.ಹೆಚ್. ವಕೀಲರು
ರಾಹುಲ್ ಮಾಸಿ ಉದ್ಯಮಿಗಳು, ಇಂಟೀರಿಯರ್ಸ್
ಕುಮಾರ್ ಮಾಲೀಕರು ಸ್ವಸ್ತಿಕ್ ಮೋಟರ್ಸ್
ಕಿರಣ್ ಮಾಲೀಕರು ಆಸ್ಪೈರ್ ಪ್ರಾಪರ್ಟಿಸ್
ಶುಭಕೋರುವವರು :
ಆನಂದ್ ಎಂ ಬ್ಲಾಕ್
ಹಿತೈಷಿಗಳ ಬಳಗ
ಕುವೆಂಪುನಗರ, ಮೈಸೂರು

ಮೈಸೂರು ಮಿತ್ರ

ಅನ್ನಭಾಗ್ಯ ಯೋಜನೆ: ರಾಜ್ಯಕ್ಕೆ ಅಕ್ಕಿ ನೀಡಲು 3 ಕೇಂದ್ರೀಯ ಸಂಸ್ಥೆಗಳ ತಾತ್ವಿಕ ಒಪ್ಪಿಗೆ



ಬೆಂಗಳೂರು: ಅನ್ನಭಾಗ್ಯ ಯೋಜನೆ ಘೋಷಣೆ ಮಾಡಿ ಅಕ್ಕಿ ಸಿಗದೆ ಸಂಕಷ್ಟಕ್ಕೆ ಸಿಲುಕಿದ್ದ ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಸರ್ಕಾರಕ್ಕೆ ನೆರವು ನೀಡಲು 3 ಕೇಂದ್ರೀಯ ಸಂಸ್ಥೆಗಳು ಮುಂದೆ ಬಂದಿವೆ.

ಕೇಂದ್ರೀಯ ಸ್ವಾಮ್ಯದ ಮೂರು ಸಂಸ್ಥೆಗಳಾದ ರಾಷ್ಟ್ರೀಯ ಗ್ರಾಹಕರ ಸಹಕಾರ ಒಕ್ಕೂಟ (ಎನ್‌ಸಿಸಿಎಫ್), ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳ (ನಾಫೆಡ್) ಮತ್ತು ಭಾರತೀಯ ಆಹಾರ ನಿಗಮ (ಎಫ್‌ಸಿಐ) ರಾಜ್ಯ ಸರ್ಕಾರಕ್ಕೆ ಅಕ್ಕಿ ನೀಡಲು ತಾತ್ವಿಕ ಒಪ್ಪಿಗೆ ನೀಡಿವೆ ಎಂದು ತಿಳಿದುಬಂದಿದೆ. ಆದರೆ, ಮೂರು ಸಂಸ್ಥೆಗಳ ಅಕ್ಕಿಯ ದರ ಬಲು ದುಬಾರಿಯಾಗಿದ್ದು, ಸಾಗಾಣಿಕೆ ವೆಚ್ಚ ಸೇರಿ ಪ್ರತಿ ಕೆ.ಜಿ.ಗೆ 40 ರೂ. ಅಧಿಕ ದಾಟುವ ಸಾಧ್ಯತೆ ಎಂದು ಹೇಳಲಾಗುತ್ತಿದೆ. ಇದು FCI ಪೂರೈಕೆ ಮಾಡುತ್ತಿದ್ದ ದರಕ್ಕಿಂತ ಹೆಚ್ಚಾಗಲಿದೆ ಎನ್ನಲಾಗಿದೆ. ಶನಿವಾರವಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ನಡೆಯಿತು. ಸಭೆಯಲ್ಲಿ ಕೇಂದ್ರೀಯ ಸಂಸ್ಥೆಗಳ ಅಧಿಕಾರಿಗಳು ಭಾಗಿಯಾಗಿದ್ದರು. ಮಾತುಕತೆ ವೇಳೆ ಪ್ರತಿ ಕೆಜಿಗೆ ರೂ.34ರಂತೆ ಅಕ್ಕಿ ಖರೀದಿ ಮಾಡಲು ಸರ್ಕಾರ ಒಪ್ಪಿಗೆ ಸೂಚಿಸಿದೆ. ಆದರೆ, ರಾಜ್ಯ ಸರ್ಕಾರವೇ ಸಾಗಣೆ ವೆಚ್ಚವನ್ನು ಭರಿಸಬೇಕಾಗಿದ್ದು, ಏಜೆನ್ಸಿಗಳಿಗೆ ಸುಮಾರು 1 ಪ್ರತಿಶತದಷ್ಟು ಕಮಿಷನ್ ಅನ್ನು ಪಾವತಿಸಬೇಕಾಗುತ್ತದೆ ಎಂದು ಮೂಲಗಳು ತಿಳಿಸಿವೆ. ಈ ಸಭೆಗೂ ಮುನ್ನ ಸಚಿವ ಮುನಿಯಪ್ಪ ಅವರು ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪಿಯೂಷ್ ಗೋಯೆಲ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ, ಅನ್ನಭಾಗ್ಯ ಯೋಜನೆಗೆ ಅಕ್ಕಿ ಒದಗಿಸುವಂತೆ ಮನವಿ ಮಾಡಿಕೊಂಡಿದ್ದರು. ಆದರೆ, ಇದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿರಲಿಲ್ಲ.

ಮೂರನೇ ಪುಟದಿಂದ

ಧಿಮಾಕು ತೋರಬೇಡಿ...

ಮಸ್ಸತ್ತಿ ಬೆಳೆಸಿಕೊಳ್ಳಿ ಎಂದು ಕರೆ ನೀಡಿದರು. ಯಾರು ಸಂವಿಧಾನವನ್ನು ಓದಿ ಅರ್ಥ ಮಾಡಿಕೊಳ್ಳುವುದಿಲ್ಲವೋ ಅವರು ಉತ್ತಮ ಶಾಸಕರಾಗಲು, ಸಂಸದರಾಗಲು ಸಾಧ್ಯವಿಲ್ಲ. ಆದ್ದರಿಂದ ಮೊದಲು ಸಂವಿಧಾನವನ್ನು ಓದಿ ಅದರ ಮೂಲಭೂತ ತತ್ವ ಮತ್ತು ಉದ್ದೇಶಗಳನ್ನು ಅರಿತುಕೊಳ್ಳಿ. ಸದನದ ನಿಯಮಾವಳಿಗಳನ್ನು ನಾವೇ ಮಾಡಿದ್ದೇವೆ. ಅದನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಂಡರೆ ಜನರ ಸಮಸ್ಯೆಗಳನ್ನು ನಿಯಮ ಬದ್ಧವಾಗಿ ಸದನದ ಮುಂದೆ ಮಂಡಿಸಬಹುದು. ಸಂವಿಧಾನಕ್ಕೆ ವಿರುದ್ಧವಾದ ಕಾನೂನು-ಕಾಯ್ದೆಗಳನ್ನು ಮಾಡಲು ಸಾಧ್ಯವಿಲ್ಲ ಆದ್ದರಿಂದ ಸಂವಿಧಾನವನ್ನು ಓದಿ ಅಕ್ಷರಸ್ಥರಾಗಿ ಎಂದರು.

ಯಾವುದೇ ಸರ್ಕಾರವಿರಲಿ ಜನರಿಗೆ ಮಾರಕವಾದ ಸಂವಿಧಾನ ವಿರೋಧಿಯಾದ ಕಾನೂನು ಮಾಡಬಾರದು. ಹಾಗೇ ಮಾಡಿದರೆ ಅದು ಹಿಟ್ಲರ್ ಆಡಳಿತ ಎನಿಸಿಕೊಳ್ಳುತ್ತದೆ. ಕಾನೂನು ತರುವ ಸಂದರ್ಭದಲ್ಲಿ ಬಹಳ ಎಚ್ಚರಿಕೆ ವಹಿಸಬೇಕು.

ಇತ್ತೀಚಿನ ಚುನಾವಣೆಗಳು ದುಬಾರಿ ಆಗುತ್ತಿವೆ. ಇದರಿಂದ ಅರ್ಹರು ಮತ್ತು ಪ್ರಾಮಾಣಿಕರ ಆಯ್ಕೆ ವಿರಳವಾಗಿದೆ. ಹಣ ಮತ್ತು ತೋಳ್ಬಲವಿದ್ದವರು ಹೆಚ್ಚು ಮಂದಿ ವಿಧಾನಸಭೆಗೆ ಆಯ್ಕೆಯಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಶಾಸಕರು, ಸಂಸದರು ಬಜೆಟ್ ಅಂದರೆ ಏನೆಂದು ಅರ್ಥ ಮಾಡಿಕೊಳ್ಳಬೇಕು. 12ನೇ ಶತಮಾನದಲ್ಲಿ ಕಾಯಕಯೋಗಿ ಬಸವಣ್ಣನವರು ಬಜೆಟ್ ಬಗ್ಗೆ ಹೇಳಿದ್ದಾರೆ. ಕಾಯಕ ಮತ್ತು ದಾಸೋಹ ಬಜೆಟ್‌ನ ಪ್ರಮುಖ ಸಂಗತಿಗಳು. ಕಾಯಕ ಅಂದರೆ ಉತ್ಪಾದನೆ, ದಾಸೋಹ ಅಂದರೆ ಹಂಚಿಕೆ. ಬಜೆಟ್ ಅಂದರೆ ಇಷ್ಟೇ. ಎಲ್ಲಿಂದ ಉತ್ಪಾದನೆ ಬರುತ್ತದೆ ಅದನ್ನು ಸಮಾಜದ ಯಾರಿಗೆ ಹಂಚುತ್ತೇವೆ ಎನ್ನುವುದೇ ಬಜೆಟ್‌ನ ಮೌಲ್ಯ ಎಂದು ವಿವರಿಸಿದರು. ನಾನು ಮೊದಲ ಬಾರಿ ಹಣಕಾಸು ಸಚಿವನಾದಾಗ "ನೂರು ಕುರಿ ಎಣಿಸಲು ಬಾರದವನು ಬಜೆಟ್ ಹೇಗೆ ಮಾಡ್ತಾರೆ?" ಎಂದು ಪತ್ರಿಕೆಯೊಂದು ಟೀಕಿಸಿತ್ತು. ಟೀಕೆಯನ್ನು ನಾನು ಸವಾಲಾಗಿ ಸ್ವೀಕರಿಸಿ, ನಿರಂತರ ವಿಷಯ ತಜ್ಞರ ಜತೆ ಚರ್ಚಿಸಿ ಬಜೆಟ್ ಮಂಡಿಸಿದೆ. ಮರುದಿನ ರಾಷ್ಟ್ರೀಯ ಪತ್ರಿಕೆ ನನ್ನ ಬಜೆಟ್ ಅನ್ನು ಅತ್ಯುತ್ತಮ ಎಂದು ಶ್ಲಾಘಿಸಿ ಸಂಪಾದಕೀಯ ಬರೆಯಿತು. ಹೀಗಾಗಿ ಜ್ಞಾನದಾಹ ಮತ್ತು ಅಧ್ಯಯನಶೀಲತೆಯನ್ನು ಬೆಳೆಸಿಕೊಳ್ಳಿ ಎಂದು ತಮ್ಮದೇ ಉದಾಹರಣೆ ಮೂಲಕ ಶಾಸಕರಿಗೆ ತಿಳಿ ಹೇಳಿದರು. ನಾನು, ನನ್ನಂಥವರು ಶಾಸಕರಾಗಲು, ಮುಖ್ಯಮಂತ್ರಿ ಆಗಲು ಡಾ.ಅಂಬೇಡ್ಕರ್ ಅವರು ನೀಡಿದ ಸಂವಿಧಾನ ಕಾರಣ. ಸಂವಿಧಾನ ಇಲ್ಲದಿದ್ದರೆ ಸಿ.ಟಿ.ರವಿ, ಕೆ.ಎಸ್.ಈಶ್ವರಪ್ಪ, ನಾನು ಎಲ್ಲೋ ಕುರಿ, ಹಸು ಕಾಯುತ್ತಾ ಇರಬೇಕಾಗಿತ್ತು. ಆದ್ದರಿಂದ ಸಂವಿಧಾನದ ಮೌಲ್ಯ ಅರಿತುಕೊಳ್ಳಿ ಎಂದು ಒತ್ತಿ ಹೇಳಿದರು.

ವಾಟಾಳ್ ನಾಗರಾಜ್ ಅವರು ಒಬ್ಬ ಮಾದರಿ ಶಾಸಕರಾಗಿದ್ದರು. ಅಧಿವೇಶನದ ಬೆಲ್ ಆಗುತ್ತಿದ್ದಂತೆ ಸದನದ ಒಳಗೆ ಬಂದು ಕೂರುತ್ತಿದ್ದರು. ಅಧಿವೇಶನ ಮುಗಿಯುವವರೆಗೂ ಅಲುಗಾಡದೆ ಕೂರುತ್ತಿದ್ದರು. ಇದನ್ನು ಪ್ರತಿಯೊಬ್ಬರೂ ಪಾಲಿಸಿ ಎಂದು ಸೂಚಿಸಿದರು. ಬಂದೆ ಪುಟ್ಟ-ಹೋದೆ ಪುಟ್ಟ ಅಂತಾಗಬೇಡಿ. ಶಾಂತವೇರಿ ಗೋಪಾಲ ಗೌಡರನ್ನು ಇವತ್ತಿಗೂ ಇಡೀ ನಾಡು ಯಾಕೆ ಸ್ಮರಿಸುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳಿ. 224 ಶಾಸಕರುಗಳಲ್ಲಿ ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದವರು 70 ಮಂದಿ. ಮಾಜಿ ಸಂಸದ ಹಾಗೂ ಮಾಜಿ ಕೇಂದ್ರ ಸಚಿವ ಕೆ.ಹೆಚ್.ಮುನಿಯಪ್ಪ ಅವರು, ಮಾಜಿ ಸಚಿವ ಜನಾರ್ದನರೆಡ್ಡಿ ಅವರು ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದ್ದಾರೆ. ರಾಜ್ಯದ ಮೊದಲ ಬಜೆಟ್ ಕೇವಲ 21 ಕೋಟಿ 3 ಲಕ್ಷ ಇತ್ತು. ಈಗಿನ ಬಜೆಟ್ 3 ಲಕ್ಷದ 9 ಸಾವಿರ ಕೋಟಿ ಆಗಿದೆ. ಬಡವರ ಮತ್ತು ಮಧ್ಯಮ ವರ್ಗದವರ ಅನುಕೂಲಕ್ಕೆ ಘೋಷಣೆ ಮಾಡಿರುವ ಐದು ಗ್ಯಾರಂಟಿಗಳಿಗೆ 50 ಸಾವಿರ ಕೋಟಿಯಷ್ಟು ಹಣ ಬೇಕಾಗುತ್ತದೆ ಎಂದು ಅವರು ಹೇಳಿದರು.

ಇನ್ನು ಮುಂದೆ ನಾನು ಚುನಾವಣೆಗೆ ಸ್ಪರ್ಧೆ ಮಾಡಲ್ಲ

ನಿವೃತ್ತಿ ಆಗೋದಾಗಿ ಸ್ಪಷ್ಟಪಡಿಸಿದರು. ಶಾಸಕ ಅಶೋಕ್ ರೈ ಮುಖ್ಯಮಂತ್ರಿಗಳಿಗೆ ಸೋಲಿನ ಬಳಿಕ ನೀವು ಗೆದ್ದದ್ದು ಹೇಗೆ ಅಂತ ಪ್ರಶ್ನೆ ಮಾಡಿದರು. ಇದಕ್ಕೆ ಉತ್ತರ ನೀಡಿದ ಅವರು, ಜನರ ನಡುವೆ ಇದ್ದಾಗ, ಜನರ ಕಷ್ಟ ಸುಖಕ್ಕೆ ಸ್ಪಂದನೆ ಮಾಡಿದ್ರೆ ಜನ ಕೈ ಬಿಡೋಲ್ಲ. ನಮ್ಮ ತಪ್ಪಿನಿಂದ ಸೋತಿರುತ್ತೇವೆ. ಕೆಲವು ಲೋಪದಿಂದ ಸೋತಿರುತ್ತೇವೆ. ಆದರೆ ಜನರ ಪರ, ಜನರ ಜೊತೆ ಇದ್ದರೆ ಅವರು ಯಾವತ್ತೂ ಕೈ ಬಿಡೋಲ್ಲ ಎಂದು ತಿಳಿಸಿದರು. ಇದೇ ವೇಳೆ ಮಾತನಾಡಿದ ಅವರು, ಇದು ನನ್ನ ಕೊನೆ ಚುನಾವಣೆ. ಚುನಾವಣಾ ರಾಜಕೀಯದಿಂದ ನಿವೃತ್ತಿ ಆಗ್ತೀನಿ. ಆದರೆ ಜನರ ಮಧ್ಯೆ ಇರುತ್ತೇನೆ ಅಂತ ತಿಳಿಸಿದರು. ಶಿವಮೊಗ್ಗ ಶಾಸಕರು ಕೇಳಿದ ತುರ್ತು ಪರಿಸ್ಥಿತಿ ಪ್ರಶ್ನೆಗೆ ಉತ್ತರಿಸಿದ ಅವರು, ತುರ್ತು ಪರಿಸ್ಥಿತಿಯನ್ನು ನಾನು ವಿರೋಧಿಸಿದ್ದೆ. ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಭಾಷಣ ಮಾಡಿದ್ದೆ. ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಟೇಬಲ್ ಹಾಕಿಕೊಂಡು ಭಾಷಣ ಮಾಡಿದ್ದೆ. ತುರ್ತು ಪರಿಸ್ಥಿತಿ ವಿರೋಧಿಸಿ ಹ್ಯಾಂಡ್ ಬಿಲ್ ಹಂಚಿದ್ದೆ. ಪೊಲೀಸರು ಒದ್ದು ಒಳಗೆ ಹಾಕಿದ್ದರು. ದೇವರಾಜ ಠಾಣೆ ಪೊಲೀಸರು ಒಂದು ದಿನ ಜೈಲಿಗೆ ಹಾಕಿದ್ದರು ಎಂದು ಆ ದಿನಗಳನ್ನು ನೆನಪು ಮಾಡಿಕೊಂಡರು.

ತಾಂತ್ರಿಕ ತಂಡ ರಚನೆ

ಆಗ್ರಹಪಡಿಸಲಾಯಿತು. ಅಪಘಾತಗಳ ಹೆಚ್ಚಳಕ್ಕೆ ಕಾರಣಗಳೇನು, ಯಾವ್ಯಾವ ಸ್ಥಳಗಳಲ್ಲಿ ಹೆಚ್ಚಿನ ಅಪಘಾತ ಸಂಭವಿಸುತ್ತವೆ. ಮಳೆಗಾಲದಲ್ಲಿ ರಸ್ತೆಗಳಲ್ಲೇ ನೀರು ನಿಲ್ಲಲು ಕಾರಣವೇನು, ಸರ್ವಿಸ್ ರಸ್ತೆಯಲ್ಲೂ ನೀರು ನಿಲ್ಲುತ್ತಿದೆ. ಇದರಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಇದಕ್ಕೇನು ಪರಿಹಾರ ಕ್ರಮ ಕೈಗೊಂಡಿದ್ದೀರಿ. ಹೈವೇಯಲ್ಲಿ ಹಾಕಿರುವ ದೀಪಗಳು ಹಾಳಾಗಿದ್ದು, ರಾತ್ರಿ ವೇಳೆ ಸಂಚಾರಕ್ಕೆ ಕಷ್ಟವಾಗುತ್ತಿದೆ. ಅಂಡರ್ ಪಾಸ್‌ಗಳಲ್ಲಿ ಅನೇಕ ಸಮಸ್ಯೆಗಳಿವೆ. ಚೈನ್‌ಲಿಂಕ್ ಸರಿಯಾಗಿ ಆಗಿಲ್ಲ, ಪಾರ್ಕಿಂಗ್ ಸಮಸ್ಯೆ ಇದೆ. ಎಲೆಕ್ಟ್ರಿಕ್ ಪೋಲ್‌ಗಳ ಸಮಸ್ಯೆ ಇದೆ. ಆಂಬುಲೆನ್ಸ್‌ಗಳ ವ್ಯವಸ್ಥೆ ಇಲ್ಲ. ಇರುವುದು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಸ್ಕೈ ವಾಕ್‌ಗಳ ನಿರ್ಮಾಣ ಬಾಕಿ ಇದೆ ಇತ್ಯಾದಿ ವಿಷಯಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಕಾಮಗಾರಿ ಪೂರ್ಣಗೊಳ್ಳದೆ ಟೋಲ್ ಸಂಗ್ರಹ ಏಕೆ?: ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪ್ರಾರಂಭಿಸಿದಾಗ ಅಗ್ರಿಮೆಂಟ್‌ನಲ್ಲಿ ಕಂಡೀಶನ್ ಏನಿತ್ತು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHA) ಮತ್ತು ಡಿಎಲ್‌ವಿ ಸಂಸ್ಥೆ ನಡುವೆ ಆಗಿರುವ ಒಪ್ಪಂದದ ಪ್ರಕಾರವಾಗಿ ರಸ್ತೆ ಕಾಮಗಾರಿ ನಡೆದಿದೆಯೇ. ರಸ್ತೆ ಕಾಮಗಾರಿ ಸಂಪೂರ್ಣಗೊಳ್ಳದೇ ಟೋಲ್ ಸಂಗ್ರಹ ಮಾಡುತ್ತಿರುವುದು ಏಕೆ. ಕಾಮಗಾರಿ ಪೂರ್ಣಗೊಂಡ ಮೇಲೆ ಟೋಲ್ ಸಂಗ್ರಹ ಮಾಡಬೇಕಲ್ಲವೇ ಎಂಬ ಪ್ರಶ್ನೆಯನ್ನೂ ಈ ವೇಳೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಮುಂದಿಡಲಾಯಿತು.

ತಾಂತ್ರಿಕ ತಂಡ ರಚನೆಗೆ ನಿರ್ಣಯ: ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣದಲ್ಲಿ ಅನೇಕ ಸಮಸ್ಯೆಗಳಿವೆ. ಫುಟ್‌ಪಾತ್ ಸಮಸ್ಯೆಗಳಿವೆ. ಎಕ್ಸಿಟ್-ಎಂಟ್ರಿ ಪಾಯಿಂಟ್‌ಗಳು ಆಗಬೇಕಿದೆ. ಹೀಗೆಯೇ ಇನ್ನೂ ಹಲವು ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳು, ಉಸ್ತುವಾರಿ ಸಚಿವರು ಈ ವೇಳೆ ಚರ್ಚೆ ನಡೆಸಿದರು. ಹಾಗೆಯೇ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಹೆದ್ದಾರಿ ಪ್ರಾಧಿಕಾರ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದು, ಒಂದು ತಾಂತ್ರಿಕ ತಂಡ ರಚನೆ ಮಾಡಿ, ಅದರಲ್ಲಿ ಅವೈಜ್ಞಾನಿಕ ಕಾಮಗಾರಿ ಮತ್ತು ಸಾರ್ವಜನಿಕರಿಂದ ಬಂದಿರುವ ದೂರುಗಳ ಬಗ್ಗೆ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಕೊಡಬೇಕೆಂದು ಸಚಿವ ಚಲುವರಾಯಸ್ವಾಮಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದರು.

ಸಿಎಂ ನೇತೃತ್ವದಲ್ಲಿ ಸಭೆ ನಡೆಸಲು ತೀರ್ಮಾನ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಅಧಿಕಾರಿಗಳ ಸಭೆ ಕರೆದು, ಹೆದ್ದಾರಿ ನ್ಯೂನ್ಯತೆಗಳ ಬಗ್ಗೆ ಚರ್ಚಿಸಬೇಕು. ಕೇಂದ್ರ ಹೆದ್ದಾರಿ ಸಚಿವರ ಗಮನಕ್ಕೆ ತರಬೇಕೆಂದು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ಸಭೆಯಲ್ಲಿ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಗಣಿಗ ರವಿಕುಮಾರ್, ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ಕೆ.ಎಂ.ಉದಯ್, ಸಂಸದೆ ಸುಮಲತಾ, ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಎನ್.ಯತೀಶ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, DBL ಬಿಲ್ಡರ್ ಪ್ರೈವೇಟ್ ಲಿಮಿಟೆಡ್ ಅಧಿಕಾರಿಗಳು, ಮಂಡ್ಯ ಜಿಲ್ಲೆ ಅಧಿಕಾರಿಗಳು ಹಾಜರಿದ್ದರು.

ಹಳೇ ಡಿಸಿ ಆಫೀಸ್ ಕಟ್ಟಡವನ್ನು ಪಾರಂಪರಿಕ ಇಲಾಖೆಗೆ ನೀಡಿ

128 ವರ್ಷದ ಪ್ರಸಿದ್ಧ ಕಟ್ಟಡ ಸಂರಕ್ಷಣೆಗೆ ಸರ್ಕಾರ ಶೀಘ್ರ ನಿರ್ಧಾರ ಕೈಗೊಳ್ಳಲಿ





ಮೈಸೂರು, ಜೂ.26(ಆರ್‌ಕೆ)- ಮೈಸೂರಿನ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿನ ಹಿಂದಿನ ಹಜಾರ ಕಚೇರಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಿಲ್ಲಾಧಿಕಾರಿಗಳ ಕಚೇರಿಯನ್ನು ಇತ್ತೀಚೆಗೆ ಸಿದ್ಧಾರ್ಥನಗರದ ಹೊಸ ಜಿಲ್ಲಾ ಮಟ್ಟದ ಅಧಿಕಾರಿಗಳ ಕಚೇರಿಗಳ ಸಂಕೀರ್ಣಕ್ಕೆ ಸ್ಥಳಾಂತರಿಸಲಾಗಿದೆ.

ಪರಿಣಾಮ ಪಾರಂಪರಿಕ ಕಟ್ಟಡ ಬಿಕೋ ಎನ್ನುತ್ತಿದ್ದು, ಮುಂದಿನ ದಿನಗಳಲ್ಲಿ ಯಾವ ರೀತಿಯಲ್ಲಿ ಉಪಯೋಗಿಸಿ ಕೊಳ್ಳಬಹುದು ಎಂಬ ಕುತೂಹಲ ಸೃಷ್ಟಿಯಾಗಿದೆ ಯಥಾಸ್ಥಿತಿಯಲ್ಲಿ ಉಳಿಯುವುದೋ? ಅಥವಾ ನವೀಕರಣ ಮಾಡಿ, ಬೇರೆ ಯಾವುದಾದರೂ ಸರ್ಕಾರಿ ಕಚೇರಿಗಳನ್ನು ಇಲ್ಲಿಗೆ ಸ್ಥಳಾಂತರ ಮಾಡಲಾಗುವುದೋ? ಇಲ್ಲವೇ ಸರ್ಕಾರದ ಯೋಜನೆ ಬೇರೆ ಇದೆಯೇ? ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆಗಳಾಗುತ್ತಿವೆ.

ಈ ನಡುವೆ ಪಾರಂಪರಿಕ ಹಾಗೂ ಐತಿಹಾಸಿಕ ಕಟ್ಟಡಕ್ಕೆ ದೊಡ್ಡಕೆರೆ ಮೈದಾನದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಹಾಗೂ ಪಾರಂಪರಿಕ ಇಲಾಖೆ ಆಯುಕ್ತರ ಕಚೇರಿಗೆ ವಹಿಸಬೇಕೆಂಬ ಒತ್ತಾಯ ಕೇಳಿಬಂದಿದೆ.

ಪುರಾತತ್ವ ಇತಿಹಾಸ, ಸಂಶೋಧನೆ, ಅನ್ವೇಷಣೆ ಹಾಗೂ ಸಂರಕ್ಷಣಾ ಕಾರ್ಯದ ಜೊತೆಗೆ ಪುರಾತನ ಸ್ಮಾರಕ, ನಾಣ್ಯಗಳ ಅಧ್ಯಯನದಲ್ಲಿ ತೊಡಗಿರುವ ಇಲಾಖೆ, ಸಂಗ್ರಹಾಲಯಗಳ ಸಂರಕ್ಷಣೆ ಜವಾಬ್ದಾರಿಯನ್ನೂ ನಿರ್ವಹಿಸುತ್ತಿದೆ. ಪ್ರಾಚೀನ ಶಿಲ್ಪಗಳು, ಅಪರೂಪದ ಕಲ್ಲಿನ ಶಿಲೆಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯ ಈ ಇಲಾಖೆಯಿಂದ ನಿರಂತರವಾಗಿ ನಡೆದಿದೆ. ಹಾಗಾಗಿ ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪಾರಂಪರಿಕ ಇಲಾಖೆಗೆ ಹಳೇ ಡಿಸಿ ಕಚೇರಿ ಕಟ್ಟಡವನ್ನು ನೀಡಿದರೆ ತುಂಬಾ ಅನುಕೂಲವಾಗಲಿದೆ ಎಂಬುದು ಜಿಲ್ಲಾ ಪಾರಂಪರಿಕ ಸಮಿತಿ ಸದಸ್ಯರಾದ ಇಂಡಿಯನ್ ನ್ಯಾಷನಲ್ ಹೆರಿಟೇಜ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್(INTACT)ನ ಪ್ರೊ.ಎನ್.ಎಸ್.ರಂಗರಾಜು ಅವರ ಅಭಿಪ್ರಾಯ.



ಪ್ರಸ್ತುತ ಪುರಾತತ್ವ ಸಂಗ್ರಹಾಲಯಗಳು ಹಾಗೂ ಪಾರಂಪರಿಕ ಇಲಾಖೆಗೆ ದೊಡ್ಡಕೆರೆ ಮೈದಾನದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಕಚೇರಿ ಆವರಣ ಸೂಕ್ತ ಸ್ಥಳವಲ್ಲ. ದಸರಾ ವೇಳೆ ಗೇಟ್ ಬಂದ್ ಆಗುವುದರಿಂದ ಯಾರನ್ನು ಒಳಗೆ ಬಿಡುವುದಿಲ್ಲ ಅನುಮತಿ ಪಡೆದು ಇಲಾಖೆಗೆ ಹೋಗಬೇಕು. ಟಿಕೆಟ್ ಪಡೆದು ಕಚೇರಿಗೆ ಭೇಟಿ ನೀಡಬೇಕು. ಹಳೇ ಡಿಸಿ ಕಚೇರಿ ಕಟ್ಟಡಕ್ಕೆ ಸ್ಥಳಾಂತರಿಸುವುದರಿಂದ ತುಂಬಾ ಅನುಕೂಲವಾಗಲಿದೆ.

-ಪ್ರೊ.ಎನ್.ಎಸ್.ರಂಗರಾಜು

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, 128 ವರ್ಷಗಳ ಐತಿಹಾಸಿಕ-ಪಾರಂಪರಿಕ ಕಟ್ಟಡವನ್ನು ಸಂರಕ್ಷಿಸಬೇಕು. ಜಿಲ್ಲಾಧಿಕಾರಿಗಳ ಕಾರ್ಯಾಲಯವನ್ನು ಸಿದ್ಧಾರ್ಥನಗರದ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿದ ಬೆನ್ನಲ್ಲೇ ಈ ನಿಟ್ಟಿನಲ್ಲಿ ಪ್ರಕ್ರಿಯೆಗಳು ಆರಂಭವಾಗಬೇಕಿತ್ತು. ಆದರೆ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಕಟ್ಟಡ ದುಸ್ಥಿತಿ ತಲುಪದಂತೆ ತ್ವರಿತವಾಗಿ ಸೂಕ್ತ ಕ್ರಮ ಕೈಗೊಂಡು ಪುರಾತತ್ವ ಇಲಾಖೆ ಅಧೀನದಲ್ಲಿ ಸುರಕ್ಷಿತವಾಗಿ ಕಾಪಾಡಿಕೊಳ್ಳಬೇಕಿದೆ ಎಂದರು.


ಪುರಾತತ್ವ ಸಂಗ್ರಹಾಲಯಗಳು ಮತ್ತು ಪಾರಂಪರಿಕ ಇಲಾಖೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ ಮ್ಯೂಸಿಯಂಗೆ ಸಮಂಜಸವಾಗಿಲ್ಲ. ರಾಜ್ಯದಲ್ಲಿ 2004ರಲ್ಲಿ ಆರಂಭವಾದ ಇಲಾಖೆ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಸೂಕ್ತ ಸ್ಥಳಾವಕಾಶದ ಅಗತ್ಯವಿದೆ. ಈ ನಿಟ್ಟಿನಲ್ಲಿ ಹಳೇ ಡಿಸಿ ಕಚೇರಿ ಕಟ್ಟಡವನ್ನು ನೀಡಿದರೆ ಸೂಕ್ತ. ಇದು ಸಾಕಾರವಾದರೆ ಮೊದಲು ಪಾರಂಪರಿಕ ಇಲಾಖೆ ಹಳೇ ಡಿಸಿ ಕಚೇರಿ ಕಟ್ಟಡವನ್ನು ಸಮಗ್ರವಾಗಿ ಸಂರಕ್ಷಿಸಿ, ನಂತರ ತನ್ನ ಕಚೇರಿ ಮತ್ತು ಮ್ಯೂಸಿಯಂ ಅನ್ನು ಸ್ಥಳಾಂತರಿಸಬೇಕು ಎಂದು ಸಲಹೆ ನೀಡಿದ್ದಾರೆ.

ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನ ಪಾರಂಪರಿಕ ಇಲಾಖೆ ಕಾರ್ಯನಿರ್ವಹಣೆಗೆ ಸೂಕ್ತವಾಗಿಲ್ಲ. ದಸರಾ ಸಂದರ್ಭದಲ್ಲಿ ಗೇಟ್ ಬಂದ್ ಮಾಡಲಾಗುತ್ತದೆ. ಇಲಾಖೆ ಕಚೇರಿಗೆ ಹೋಗಲು ವಸ್ತುಪ್ರದರ್ಶನ ಪ್ರಾಧಿಕಾರದ ಅನುಮತಿ ಪಡೆಯಬೇಕು. ಅದರಿಂದ ಸಾರ್ವಜನಿಕರಿಗೂ ತೊಂದರೆಯಾಗುತ್ತದೆ. ಹಳೇ ಡಿಸಿ ಕಚೇರಿ ಬಿಲ್ಡಿಂಗ್‌ಗೆ ಸ್ಥಳಾಂತರಿಸಿದರೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಬಹುದು. ಈ ಮೂಲಕ ಪಾರಂಪರಿಕ ಕಟ್ಟಡದ ಸೂಕ್ತ ನಿರ್ವಹಣೆಯೂ ಸಾಧ್ಯವಾಗುತ್ತದೆ. ರಾಜ್ಯದಲ್ಲಿ ಬಹುತೇಕ ಮ್ಯೂಸಿಯಂಗಳು ಪಾರಂಪರಿಕ ಕಟ್ಟಡಗಳಲ್ಲೇ ಇವೆ. ಆ ಕಟ್ಟಡಗಳನ್ನು ಸಂರಕ್ಷಿಸುವ ಜವಾಬ್ದಾರಿಯನ್ನೂ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದರು.

ವಿವಿಗೆ ನೀಡುವುದು ಬೇಡ: ಹಳೇ ಡಿಸಿ ಆಫೀಸ್ ಕಟ್ಟಡವನ್ನು ಬೇರೆ ಇಲಾಖೆಗಳಿಗೆ ಹಸ್ತಾಂತರಿಸಲು ಸೂಕ್ತವಲ್ಲ. ಏಕೆಂದರೆ ಕಳೆದ ಹಲವು ವರ್ಷಗಳಿಂದ ಹೇಗೆ ನಿರ್ವಹಣೆ ಮಾಡಿವೆ ಎಂಬುದು ಎಲ್ಲರಿಗೂ ತಿಳಿದಿದೆ. ಅದರಲ್ಲೂ ಈ ಕಟ್ಟಡವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡಲೂ ನನ್ನ ವಿರೋಧವಿದೆ. ವಿಶ್ವವಿದ್ಯಾನಿಲಯದಲ್ಲಿ ನಾನು ಸೇವೆ ಸಲ್ಲಿಸಿದ್ದೇನಾದರೂ, ಆ ಈ ಕಟ್ಟಡ ಮತ್ತೊಂದು ಜಯಲಕ್ಷ್ಮಿ ವಿಲಾಸ ಅರಮನೆಯಂತೆ ಆಗುವುದು ನಮಗಿಷ್ಟವಿಲ್ಲ. ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 25ಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳಿವೆ. ಯಾವುದನ್ನೂ ಸಮರ್ಪಕವಾಗಿ ನಿರ್ವಹಣೆ ಮಾಡಿಲ್ಲ ಎಂದು ಪ್ರೊ.ರಂಗರಾಜು ಹೇಳಿದರು.

ಹಾಗಾಗಿ ಪಾರಂಪರಿಕ ಇಲಾಖೆಯನ್ನು ಹಳೇ ಡಿಸಿ ಕಚೇರಿ ಕಟ್ಟಡಕ್ಕೆ ಸ್ಥಳಾಂತರಿಸುವುದು ಸೂಕ್ತ ಮಹಾರಾಣಿ, ಮಹಾರಾಜ, ಯುವರಾಜ ಕಾಲೇಜು ಇನ್ನಿತರ ಪಾರಂಪರಿಕ ಕಟ್ಟಡಗಳೂ ಇದಕ್ಕೇ ಸಮೀಪದಲ್ಲಿದ್ದು, ಅವುಗಳ ಸಂರಕ್ಷಣೆಗೂ ಸಹಕಾರಿಯಾಗಲಿದೆ. ಅಲ್ಲದೆ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಕೂಡ ಹತ್ತಿರದಲ್ಲೇ ಇರುವುದರಿಂದ ದೇವನಾಗರಿ (ಸಂಸ್ಕೃತ), ಬ್ರಾಹ್ಮಿಕ(ಕನ್ನಡ) ಇನ್ನಿತರ ಅಪರೂಪದ ಲಿಪಿಗಳನ್ನೂ ರಕ್ಷಣೆಗೂ ಸಹಾಯವಾಗಲಿದೆ ಎಂದು ತಿಳಿಸಿದ್ದಾರೆ.

ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ



ಎ. ದೇವರಾಜು

ಮೈಸೂರು, ಜೂ.26(ಆರ್‌ಕೆ)- ಮೈಸೂರಿನ ದೊಡ್ಡಕೆರೆ ಮೈದಾನದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾರಂಪರಿಕ ಇಲಾಖೆ ಕಚೇರಿಯನ್ನು ಹಳೇ ಡಿಸಿ ಆಫೀಸ್ ಕಟ್ಟಡಕ್ಕೆ ಸ್ಥಳಾಂತರಿಸಬೇಕೆಂದು ಈ ಹಿಂದೆಯೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು ತಿಳಿಸಿದ್ದಾರೆ.

ಸಿದ್ಧಾರ್ಥನಗರದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಕಚೇರಿ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದ ಸಂದರ್ಭದಲ್ಲೇ ಆಗಿನ ಆಯುಕ್ತ ಟಿ.ವೆಂಕಟೇಶ್, ಪ್ರವಾಸೋದ್ಯಮ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗಳ ಮುಂದೆ ಪ್ರಸ್ತಾವನೆಯಿಟ್ಟು, ಅವರ ಮೂಲಕ ಕಂದಾಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಪಾರಂಪರಿಕ ಇಲಾಖೆ ಕಚೇರಿಯನ್ನು ಹಳೇ ಡಿಸಿ ಆಫೀಸ್ ಪಾರಂಪರಿಕ ಕಟ್ಟಡಕ್ಕೆ ಸ್ಥಳಾಂತರಿಸಲು ಅನುಮತಿ ನೀಡಬೇಕೆಂದು ಕೋರಿದ್ದಾರೆ ಎಂದು ಹೇಳಿದರು.

ನಾನೂ ಕೂಡ ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಿದ್ದೇನೆ. ಜಿಲ್ಲಾಧಿಕಾರಿಗಳ ಕಚೇರಿಯನ್ನು ಸಿದ್ಧಾರ್ಥನಗರದ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿರುವುದರಿಂದ ಹಳೇ ಪಾರಂಪರಿಕ ಕಟ್ಟಡ ಖಾಲಿ ಇದೆ. ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಲಿದೆ ಎಂಬ ವಿಶ್ವಾಸವಿದೆ. ಅನುಮತಿ ಸಿಗುತ್ತಿದ್ದಂತೆಯೇ ನಮ್ಮ ಕಚೇರಿಯನ್ನು ಸ್ಥಳಾಂತರಿಸಿ, ಉತ್ತಮ ನಿರ್ವಹಣೆಯೊಂದಿಗೆ ಆ ಕಟ್ಟಡವನ್ನು ಸಂರಕ್ಷಿಸುತ್ತೇವೆ ಎಂದು ವಿಶ್ವಾಸದಿಂದ ನುಡಿದರು.

ರಾಷ್ಟ್ರೀಯ ಶಿಕ್ಷಣ ನೀತಿ ಹಿಂಪಡೆಯಲು ಪ್ರತಿಭಟನೆ



ಮೈಸೂರು, ಜೂ.26(ಎಂಟಿವೈ)- ರಾಜ್ಯದಲ್ಲಿ ಜಾರಿ ಮಾಡಿರುವ ರಾಷ್ಟ್ರೀಯ ಶಿಕ್ಷಣ ನೀತಿ-2020 ಹಿಂಪಡೆಯುವಂತೆ ಒತ್ತಾಯಿಸಿ ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಓ) ನೇತೃತ್ವದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾಲಯದ ಕ್ರಾಫರ್ಡ್ ಹಾಲ್ ಮುಂದೆ ಸೋಮವಾರ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳ ಪದವಿ ಕಾಲೇಜುಗಳಲ್ಲಿ ಈ ವರ್ಷದ ಪ್ರವೇಶಾತಿ ಸಂಖ್ಯೆ ಕುಸಿಯುತ್ತಿದೆ. ಇದಕ್ಕೆ 2020ರಲ್ಲಿ ಬಿಜೆಪಿ ಸರ್ಕಾರ ಜಾರಿಗೆ ತಂದ ಹೊಸ ಶಿಕ್ಷಣ ನೀತಿಯನ್ನು ದಿಢೀರ್ ಆಗಿ ಹೇರಿಕೆ ಮಾಡಿರುವುದೇ ಪ್ರಮುಖ ಕಾರಣ. ಮೈಸೂರಲ್ಲೂ ಈ ಸಮಸ್ಯೆ ಹೆಚ್ಚಾಗಿದೆ. ಸರ್ಕಾರಿ ಕಾಲೇಜುಗಳಲ್ಲಿನ ಶುಲ್ಕ ಏರಿಕೆ, ಸರ್ಕಾರಿ ಸಂಸ್ಥೆಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಮಾಡುತ್ತಿರುವುದು ಎನ್‌ಇಪಿಯ ಒಂದು ಭಾಗವಾಗಿದೆ ಇದರಿಂದ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣದಿಂದಲೇ ದೂರ ಉಳಿಯುತ್ತಿದ್ದಾರೆ ಎಂದು ಆರೋಪಿಸಿದರು.

ಸರ್ಕಾರಿ ಪದವಿ ಕಾಲೇಜುಗಳಲ್ಲಿ ಮೂಲ ಸೌಕರ್ಯಗಳ ಕೊರತೆ, ವಿದ್ಯಾರ್ಥಿ ವೇತನ, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸೂಕ್ತ ಬಸ್ ಹಾಗೂ ಹಾಸ್ಟೆಲ್ ಸೌಲಭ್ಯವಿಲ್ಲ. ಸಮರ್ಪಕವಾಗಿ ತರಗತಿಗಳನ್ನು ನಡೆಸಲು ಶಿಕ್ಷಕರ ಕೊರತೆಯೂ ಇದೆ. ಇವೆಲ್ಲವೂ ವಿದ್ಯಾರ್ಥಿಗಳ ಶೈಕ್ಷಣಿಕ ಏಳಿಗೆಗೆ ಅಡ್ಡಗಾಲಾಗಿ ಪರಿಣಮಿಸಿವೆ. ಇಂತಹ ಪರಿಸ್ಥಿತಿಯಿಂದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ರಕ್ಷಿಸಿ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳ ಭವಿಷ್ಯವನ್ನು ಹಸನಾಗಿಸುವ ತುರ್ತು ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಸರ್ಕಾರ ಕೂಡಲೇ ಶೈಕ್ಷಣಿಕ ಕ್ಷೇತ್ರದಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳಬೇಕು. ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸಿ, ಮೂಲ ಸೌಲಭ್ಯ ಒದಗಿಸಿ ಪ್ರವೇಶಾತಿ ಹೆಚ್ಚಿಸಬೇಕು. ಮೈಸೂರು ಜಿಲ್ಲೆಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಬೇಕು. ವಿದ್ಯಾರ್ಥಿ ವೇತನ ಮತ್ತು ಹಾಸ್ಟೆಲ್ ಸೌಲಭ್ಯ ಖಾತ್ರಿಪಡಿಸಿ ಶುಲ್ಕ ವಿನಾಯಿತಿಯನ್ನು ಪ್ರವೇಶಾತಿ ಸಂದರ್ಭದಲ್ಲೇ ಒದಗಿಸಬೇಕು. ಎನ್‌ಇಪಿಯನ್ನು ವಾಪಸ್ ಪಡೆದುಕೊಳ್ಳಬೇಕು. ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಮಾಡುವ ಪ್ರಸ್ತಾವನೆಯನ್ನು ಕೈಬಿಡಬೇಕು. ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕು. ಮಹಾರಾಣಿ ಕಾಲೇಜಿನ ಮೂಲ ಸೌಕರ್ಯಗಳ ಕೊರತೆಯ ಸಮಸ್ಯೆಯನ್ನು ನಿವಾರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಐಡಿಎಸ್ ಸಂಘಟನೆ ಜಿಲ್ಲಾಧ್ಯಕ್ಷ ಸುಭಾಷ್, ಕಾರ್ಯದರ್ಶಿ ಚಂದ್ರಕಲಾ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತಿನ್, ಸ್ವಾತಿ ಚಂದ್ರಿಕಾ, ಚಂದನ, ಹೇಮಾ ಹಾಗೂ ಸಮಿತಿಯ ಸದಸ್ಯರಾದ ಧನುಶ್ರೀ, ಅಂಜಲಿ ಶ್ರೇಯಸ್, ಜಟ್ಟಪ್ಪ ದಿಶಾ ಹಾಗೂ ಮಹಾರಾಜ ಹಾಗೂ ಮಹಾರಾಣಿ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕನ್ನಡ ಭಾಷೆ, ಕನ್ನಡಿಗರ ರಕ್ಷಣೆಗೆ ಕ್ರಮ ಕೈಗೊಳ್ಳಿ



ಮೈಸೂರು,ಜೂ.26(ಎಂಟಿವೈ)- ಕನ್ನಡ ಭಾಷೆ ಹಾಗೂ ಕನ್ನಡಿಗರ ರಕ್ಷಣೆಗಾಗಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಕದಂಬ ಸೈನ್ಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಿದ ಕದಂಬ ಸೈನ್ಯ ಕಾರ್ಯಕರ್ತರು, ಡಾ.ಸರೋಜಿನಿ ಮಹಿಷಿ ಪರಿಷ್ಕೃತ ವರದಿಯನ್ನು ಸದನದಲ್ಲಿ ಮಂಡಿಸಿ ಕಾಯ್ದೆಯಾಗಿ ಜಾರಿಗೆ ತರಬೇಕು. ಕನ್ನಡಿಗರ ಮೇಲೆ ಹಿಂದಿ ಹೇರಿಕೆ ಸಂಪೂರ್ಣವಾಗಿ ನಿಲ್ಲಿಸಬೇಕು. ದ್ವಿಭಾಷಾ ನೀತಿ ಜಾರಿಗೆ ತರಬೇಕು. ಪ್ರಥಮ ಭಾಷೆಯಾಗಿ ಕನ್ನಡ, 2ನೇ ಭಾಷೆಯಾಗಿ ಇಂಗ್ಲಿಷ್ ಕಲಿಸಬೇಕು. ಆದರೆ, ಹಿಂದಿ ಕಲಿಕೆ ಅಗತ್ಯ ಇಲ್ಲ. ತ್ರಿಭಾಷಾ ಸೂತ್ರವನ್ನು ವಾಪಸ್ ಪಡೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿ ಪಡಿಸಬೇಕು. ರೈತರ ಸಾಲ ಮನ್ನಾ ಮಾಡಬೇಕು. ಕನ್ನಡ ಕಲಾವಿದರು, ಕ್ರೀಡಾಪಟುಗಳಿಗೆ ಆರ್ಥಿಕ ಪ್ರೋತ್ಸಾಹ ನೀಡಬೇಕು. ಪಠ್ಯಪುಸ್ತಕದಲ್ಲಿ ಕನ್ನಡ ನಾಡಿನ ಮಹಾಕವಿಗಳು, ನಾಡು-ನುಡಿ ಕನ್ನಡ ಹಿರಿಮೆಯನ್ನು ಪರಿಚಯಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಂಘಟನೆ ಮುಖಂಡರಾದ ಬೇಕ್ರಿ ರಮೇಶ್, ಎಸ್.ಶಿವಕುಮಾರ್, ಉಮ್ಮಡಹಳ್ಳಿ ನಾಗೇಶ್, ಬಿ.ಶಿವಕುಮಾರ್, ನಾ.ಮಹದೇವಸ್ವಾಮಿ ಇನ್ನಿತರರು ಪಾಲ್ಗೊಂಡಿದ್ದರು.

ಯಕ್ಷಗಾನ ಕಲಾವಿದ ತೋನ್ಸೆ ಜಯಂತ್ ಕುಮಾರ್ ನಿಧನ



ಮಂಗಳೂರು: ಹಿರಿಯ ಯಕ್ಷಗಾನ ಕಲಾವಿದ ತೋನ್ಸೆ ಜಯಂತ್ ಕುಮಾರ್ ಸೋಮವಾರ ಮುಂಜಾನೆ ಉಡುಪಿಯಲ್ಲಿ ನಿಧನರಾಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರಿಗೆ 78 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಹಾಗೂ ಮೂವರು ಪುತ್ರರನ್ನು ಅಗಲಿದ್ದಾರೆ. ಕುಮಾರ್ ಅವರು ಯಕ್ಷಗಾನ ವೇಷಧಾರಿಯಾಗಿ ನಂತರ ಯಕ್ಷಗಾನ ಗುರುಗಳಾಗಿ ಮಿಂಚಿದ್ದು, ಈ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಉಡುಪಿ ಯಕ್ಷ ಶಿಕ್ಷಣ ಟ್ರಸ್ಟ್‌ನ ಗುರುಗಳಾಗಿದ್ದ ಅವರು, ಆರಂಭದಿಂದಲೂ ಅದರ ಯಶಸ್ಸಿಗೆ ಕಾರಣರಾಗಿದ್ದರು.

ನಾಡಪ್ರಭು ಕೆಂಪೇಗೌಡರು ಅಭಿವೃದ್ಧಿಯ ಪ್ರತೀಕ

ಮೈಸೂರು,ಜೂ.26(ಪಿಎಂ)- ನಾಡಪ್ರಭು ಕೆಂಪೇಗೌಡರು ಅಭಿವೃದ್ಧಿಯ ಪ್ರತೀಕ. ಕೃಷಿ, ವಿಜ್ಞಾನ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಅವರ ಹೆಜ್ಜೆ ಗುರುತುಗಳಿದ್ದು, ಅವರನ್ನು ಸಾವಿರ ಕೆರೆಗಳ ಸರದಾರ ಎಂದೇ ಸ್ಮರಿಸಲಾಗುತ್ತದೆ ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಸ್ಮರಿಸಿದರು.

ಮೈಸೂರಿನ ಅಗ್ರಹಾರ ವೃತ್ತದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡ ಅವರ 514ನೇ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಫೋಟೋಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ನಮ್ಮ ದೇಶ-ನಾಡನ್ನು ಬೇಕಾದಷ್ಟು ರಾಜ ವಂಶಸ್ಥಗಳ ರಾಜ ಮಹಾರಾಜರು ಆಳಿದ್ದಾರೆ. ಆ ಪೈಕಿ ಅತ್ಯುತ್ತಮ ಕೊಡುಗೆ ನೀಡಿದವರಲ್ಲಿ ಕೆಂಪೇಗೌಡರು ಅಗ್ರಗಣ್ಯರು. ಇವರು ನಾಡಪ್ರಭು ಮಾತ್ರವಲ್ಲ, ನಾಡ ಬ್ರಹ್ಮರೂ ಹೌದು. ಅಂದು ಬೆಂಗಳೂರಿನ ನಿರ್ಮಾಣದಲ್ಲಿ ಅಭಿವೃದ್ಧಿಗೆ ನಾಂದಿ ಹಾಡಿ ಜಗದ್ವಿಖ್ಯಾತಿ ಆಗುತ್ತಾರೆ. ಆಗ ಇಡೀ ಪ್ರಪಂಚ ಅವರತ್ತ ನೋಡುತ್ತದೆ ಎಂದರು.

ಕಳೆದ ವರ್ಷ ಬೆಂಗಳೂರಿನಲ್ಲಿ ಕೆಂಪೇಗೌಡರ 108 ಅಡಿ ಎತ್ತರದ ಬೃಹತ್ ಕಂಚಿನ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅನಾವರಣ ಮಾಡಿದರು. ಈ ಪ್ರಗತಿಯ ಪ್ರತಿಮೆ ವರ್ಲ್ಡ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ನಿರ್ಮಿಸಿದೆ. ಬಹುಶಃ ಆ ಎತ್ತರ ಎಂಬುದು ಒಂದು ಸಂಕೇತವಷ್ಟೆ, ಯಾವ ಎತ್ತರಕ್ಕೂ ನಿಲುಕದ ಅದ್ಭುತ ವ್ಯಕ್ತಿ ಕೆಂಪೇಗೌಡರು.

ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಸ್ಮರಣೆ



ಅವರು ಕೇವಲ ಆಡಳಿತಗಾರರು ಮಾತ್ರ ಆಗಿರಲಿಲ್ಲ. ಅಭಿವೃದ್ಧಿ ಮತ್ತು ಜನಜೀವನ ಸುಧಾರಣೆಯಲ್ಲಿ ದೂರದೃಷ್ಟಿ ಹೊಂದಿದ್ದರು ಎಂದು ತಿಳಿಸಿದರು.

ಕೆಂಪೇಗೌಡರು ಬೆಂಗಳೂರಿನಲ್ಲಿ ನೂರಾರು ಕೆರೆಗಳನ್ನು ನಿರ್ಮಿಸಿದರು. ಒಂದು ಕೆರೆಗೆ ನೀರು ತುಂಬಿದರೆ ಉಳಿದೆಲ್ಲಾ ಕೆರೆಗಳಿಗೆ ನೀರು ಹರಿಯುತ್ತಿತ್ತು. ಅಂತಹ ತಂತ್ರಗಾರಿಕೆ ಮೂಲಕ ಕೆರೆಗಳನ್ನು ನಿರ್ಮಾಣ ಮಾಡಲಾಗಿತ್ತು. ಆದರೆ ಇಂದು ಮಳೆ ಬಂದರೆ ಇಡೀ ಬೆಂಗಳೂರು ಕೆರೆಯಾಗುವ ಸನ್ನಿವೇಶ ನಿರ್ಮಾಣವಾಗಿದೆ. ಕಾರಣ ಏನೆಂದರೆ ಎಲ್ಲಾ ಕೆರೆಗಳನ್ನು ಒತ್ತುವರಿ ಮಾಡಿ ಅವುಗಳ ಮೇಲೆ ಕಾಂಕ್ರೀಟ್ ಕಾಡು ನಿರ್ಮಾಣ ಮಾಡಿದ್ದಾರೆ. ಈ ವಿಷಯದಲ್ಲಿ ಎಚ್ಚೆತ್ತುಕೊಳ್ಳದೇ ಹೋದರೆ ಮುಂದೊಂದಿನ ಬೆಂಗಳೂರಿಗೆ ಅಪಾಯ ಕಾದಿದೆ ಎಂದು ಎಚ್ಚರಿಸಿರು.

ಬೆಂಗಳೂರಿನಲ್ಲಿ ಕೆಂಪೇಗೌಡರು ನಾಲ್ಕು ದ್ವಾರಗಳನ್ನು ನಿರ್ಮಿಸಿದ್ದರು. ಆ ಪೈಕಿ ಒಂದು ದ್ವಾರ ಮಾತ್ರ ಪದೇಪದೆ ನೆಲಕ್ಕುರುಳುತ್ತಿರುತ್ತದೆ. ಇದನ್ನು ತಪ್ಪಿಸಲು ಆ ದ್ವಾರಕ್ಕೆ ಬಲಿ ಅಗತ್ಯ ಎಂದಾಗ, ಕೆಂಪೇಗೌಡರ ಸೊಸೆ ಲಕ್ಷ್ಮೀದೇವಿಯವರು ಸ್ವಯಂ ಪ್ರೇರಣೆಯಿಂದ ದ್ವಾರಕ್ಕೆ ಬಲಿಯಾಗಿ ಅರ್ಪಿಸಿಕೊಳ್ಳುತ್ತಾರೆ. ಹಾಗಾಗಿಯೇ ಕೆಂಪೇಗೌಡರ ಚರಿತ್ರೆಯಲ್ಲಿ ಲಕ್ಷ್ಮೀದೇವಿಯವರ ಹೆಸರನ್ನು ಸುವರ್ಣಾಕ್ಷರದಲ್ಲಿ ಬರೆದಿಡಬಹುದಾಗಿದೆ ಎಂದು ಸ್ಮರಿಸಿದರು.

ಕೆಂಪೇಗೌಡರು ಈ ಪ್ರಪಂಚ ಕಂಡ ಅದ್ವಿತೀಯ ಮಹಾರಾಜರು. ತಮ್ಮ ಆಡಳಿತಾವಧಿಯಲ್ಲಿ ಅಪಾರ ಕೊಡುಗೆ ನೀಡಿದರು. ದೂರದೃಷ್ಟಿಯ ಯೋಜನೆಗಳಿಂದ ಬೆಂಗಳೂರು ಕಟ್ಟಿದರು. ಇಂದಿನ ನಮ್ಮ ಆಡಳಿತಗಾರರು ಮತ್ತು ರಾಜಕಾರಣಿಗಳು ಕೆಂಪೇಗೌಡರನ್ನು ಆದರ್ಶವಾಗಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

– ಡಾ.ಎಸ್.ಪಿ.ಯೋಗಣ್ಣ
ಸುಯೋಗ್ ಆಸ್ಪತ್ರೆ ಅಧ್ಯಕ್ಷ

ಕೆಂಪೇಗೌಡರು ತಮ್ಮ ಆಡಳಿತಾವಧಿಯಲ್ಲಿ ಜಾತ್ಯತೀತವಾಗಿ ಪ್ರತಿಯೊಂದು ಸಮುದಾಯಕ್ಕೂ ಪೇಟೆಗಳನ್ನು ನಿರ್ಮಿಸಿಕೊಟ್ಟರು. ನಾಡಿಗೆ ಒಳ್ಳೆಯದಾದರೆ ಯಾವುದೇ ತ್ಯಾಗಕ್ಕೂ ಸಿದ್ಧವಿದ್ದ ಆದರ್ಶಪ್ರಾಯರು. ರಾಜ್ಯ ಸರ್ಕಾರ ಗ್ರಾಮೀಣ ಪ್ರದೇಶದ ಯೋಜನೆಗೆ ಕೆಂಪೇಗೌಡರ ಹೆಸರನ್ನು ನಾಮಕರಣ ಮಾಡಬೇಕು ಎಂದು ಒತ್ತಾಯಿಸಿದರು. ಇದೇ ವೇಳೆ ಸಿಹಿ ವಿತರಣೆ ಮಾಡಲಾಯಿತು.

ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಸಂಘದ ರಾಜಾಧ್ಯಕ್ಷ ಸಿ.ಜಿ.ಗಂಗಾಧರ್, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ

ಮೈಸೂರಲ್ಲಿ ವ್ಯಾಪಕಗೊಳ್ಳುತ್ತಿರುವ ಕಾರುಗಳ ಚಕ್ರ ಕಳವು ಪ್ರಕರಣ









ಘಟನೆಯಿಂದ ಮಾನಸಿಕ ತೊಂದರೆ ಹಾಗೂ ಹಣಕಾಸಿನ ನಷ್ಟವಾಗುತ್ತಿದ್ದು, ನಾಲ್ಕೂ ಚಕ್ರಗಳನ್ನು 64,000 ರೂ. ಖರ್ಚು ಮಾಡಿ ಕಾರಿಗೆ ಅಳವಡಿಸಿದ್ದೇನೆ. ವಿಮೆಗಾಗಿ ಕಂಪನಿಗೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದೇನೆ.
ಆದರೆ ವಿಮಾ ಕಂಪನಿಯವರು ಪೂರ್ಣ ಹಣ ಕೊಡುವುದಿಲ್ಲ. ಅಲ್ಲದೆ ಈ ಪ್ರಕ್ರಿಯೆ ಬೇಗ ಮುಗಿಯುವುದೂ ಇಲ್ಲ. ಹಾಗೆಯೇ ನವವಿವಾಹಿತರಾದ ಮತ್ತೊಂದು ಕಾರಿನ ಮಾಲೀಕರು, ತಮ್ಮ ಕಾರಿನ ಚಕ್ರಗಳನ್ನು ರೀಪ್ಲೇಸ್ ಮಾಡಿಸಲು ಸುಮಾರು 1 ಲಕ್ಷ ರೂ. ಖರ್ಚು ಮಾಡಬೇಕಾಯಿತು.

-ಕಾರು ಮಾಲೀಕರು

ಮೈಸೂರು, ಜೂ.26(ಆರ್‌ಕೆ)– ಮನೆ ಮುಂದೆ ನಿಲ್ಲಿಸಿದ್ದ ಕಾರುಗಳ ಟೈಯರ್, ಡಿಸ್ಕ್ ಸಮೇತ ಚಕ್ರಗಳನ್ನು ಕಳವು ಮಾಡುತ್ತಿರುವ ಪ್ರಕರಣ ಮೈಸೂರಲ್ಲಿ ದಿನೇ ದಿನೆ ಹೆಚ್ಚಾಗುತ್ತಿದೆ.

ಅದರಲ್ಲೂ ಐಷಾರಾಮಿ ಕಾರುಗಳ ಬೆಲೆಬಾಳುವ ಚಕ್ರಗಳನ್ನೇ ಟಾರ್ಗೆಟ್ ಮಾಡುತ್ತಿರುವ ಖದೀಮರು, ಮಧ್ಯರಾತ್ರಿ ಈ ಕೃತ್ಯ ಎಸಗುತ್ತಿದ್ದಾರೆ. ಹೊಂಚು ಹಾಕಿ, ಮನೆ ಮುಂದೆ ಅಥವಾ ಅಕ್ಕಪಕ್ಕ ಬಯಲು ಪ್ರದೇಶಗಳಲ್ಲಿ ನಿಲ್ಲಿಸಿದಂತಹ ಕಾರುಗಳ ಚಕ್ರಗಳನ್ನು ಕಳಚಿ ಹೊತ್ತೊಯ್ಯುತ್ತಿದ್ದಾರೆ.

ಪಾರ್ಕಿಂಗ್ ಸ್ಥಳದ ಕೊರತೆ ಇರುವುದರಿಂದ ಬಹುತೇಕ ಮಂದಿ ತಮ್ಮ ಕಾರುಗಳನ್ನು ಮನೆ ಮುಂದಿನ ರಸ್ತೆ ಇಲ್ಲವೇ ಅಕ್ಕಪಕ್ಕದ ಖಾಲಿ ಜಾಗದಲ್ಲಿ ನಿಲ್ಲಿಸುತ್ತಿರುವುದರಿಂದ ಕಳ್ಳರಿಗೆ ಇದೊಂದು ರೀತಿ ವರದಾನವಾಗಿದೆ. ಕಳೆದ ಒಂದು ವಾರದಲ್ಲಿ ಮೈಸೂರು ನಗರದ ಮೂರು ಕಡೆ 4 ಕಾರುಗಳ ಚಕ್ರ ಕಳವು ಮಾಡಲಾಗಿದೆ.

ಜೂನ್ 23ರಂದು ಆಲನಹಳ್ಳಿ ಠಾಣಾ ವ್ಯಾಪ್ತಿಯ ಸರ್ದಾರ್ ವಲ್ಲಭಭಾಯ್ ಪಟೇಲ್ ನಗರದ ತಿರುಮಲ ಪಬ್ಲಿಕ್ ಸ್ಕೂಲ್ ರಸ್ತೆ ನಿವಾಸಿ ಕುಬೇರಸ್ವಾಮಿ ಎಂಬುವರ ಕಿಯಾ ಕಾರಿನ ನಾಲ್ಕೂ ಚಕ್ರಗಳನ್ನು ಕಳಚಿ ಕದ್ದೊಯ್ಯಲಾಗಿತ್ತು. ಈ ಸಂಬಂಧ 'ಮೈಸೂರು ಮಿತ್ರ'ನಲ್ಲಿ ವರದಿಯಾಗಿತ್ತು. ಇನ್ನೂ ಮೂರು ಕಾರುಗಳ ಟೈಯರ್ ಮತ್ತು ಡಿಸ್ಕ್ ಕಳವು ಮಾಡಲಾಗಿದೆ ಎಂದು ಓದುಗರೇ ಮಾಹಿತಿ ನೀಡಿದ್ದಾರೆ.

ಕುವೆಂಪುನಗರ ಪೊಲೀಸ್ ಠಾಣಾ ಸರಹದ್ದಿನ ಶ್ರೀರಾಂಪುರದ ಲಿಂಗಾಂಬುದಿಪಾಳ್ಯಕ್ಕೆ ಹೊಂದಿಕೊಂಡಂತಿರುವ ಯೂನಿವರ್ಸಿಟಿ ಲೇಔಟ್‌ನ ನಿವೃತ್ತ ಪ್ರಾಧ್ಯಾಪಕಿ ಕಮಲ (ಹೆಸರು ಬದಲಾಯಿಸಲಾಗಿದೆ) ಅವರ ಮನೆ ಮುಂದೆ ನಿಲ್ಲಿಸಲಾಗಿದ್ದ ಮಾರುತಿ ಸ್ವಿಫ್ಟ್ ಡಿಸೈರ್ ವಿಎಕ್ಸ್ಐ ಕಾರು ಹಾಗೂ ಅದೇ ಬಡಾವಣೆಯ ಮತ್ತೊಂದು ರಸ್ತೆಯಲ್ಲಿ ಕವಿತಾ (ಹೆಸರು ಬದಲಾಯಿಸಲಾಗಿದೆ) ಎಂಬುವರ ಮಾರುತಿ ಬಲೆನೊ ಕಾರಿನ ಚಕ್ರಗಳನ್ನು ಜೂ.17ರಂದು ಕದಿಯಲಾಗಿದೆ.

ರಾತ್ರಿ ನಿಲ್ಲಿಸಿದ್ದ ಕಾರನ್ನು ಬೆಳಗ್ಗೆ ಬಂದು ನೋಡಿದರೆ ಚಕ್ರಗಳು ನಾಪತ್ತೆಯಾಗಿರುವುದು ತಿಳಿಯಿತು. ಸಿಮೆಂಟ್ ಇಟ್ಟಿಗೆಗಳನ್ನು ಚಾರ್ಸಿಗೆ ಆಧಾರವಾಗಿರಿಸಿ, ಕಾರಿನ ಚಕ್ರಗಳನ್ನು ಕಳಚಲಾಗಿದೆ. ವಿಷಯ ತಿಳಿದ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಅರುಣ್ ಹಾಗೂ ಸಿಬ್ಬಂದಿ, ಸ್ಥಳಕ್ಕೆ ಧಾವಿಸಿ ಪ್ರಕರಣ ದಾಖಲಿಸಿಕೊಂಡು ಸಿಸಿ ಕ್ಯಾಮರಾ ಫುಟೇಜಸ್ ಪಡೆದು ತನಿಖೆ ಮಾಡುತ್ತಿದ್ದಾರೆ.

ಯೂನಿವರ್ಸಿಟಿ ಲೇಔಟ್‌ನ ಈ ಎರಡೂ ಕಾರುಗಳ 8 ಚಕ್ರಗಳನ್ನು ಬೇರೆ ಬೇರೆ ಸಮಯದಲ್ಲಿ ಕದ್ದೊಯ್ದಿರುವುದು ಪಕ್ಕದ ಮನೆಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಅದೇ ರೀತಿ ಜೂನ್ 19ರಂದು ವಿಜಯನಗರ 4ನೇ ಹಂತದಲ್ಲಿ ಸಿನೋಜ್ ಕುಮಾರ್ ಎಂಬುವರ ಮಹೀಂದ್ರ ಎಕ್ಸ್‌ಯುವಿ–300 (ಕೆಎ 09–ಎಂಜಿ 9610) ಕಾರಿನ ನಾಲ್ಕೂ ಚಕ್ರಗಳನ್ನು ಕಳವು ಮಾಡಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್ ತನಿಖೆ ನಡೆಸುತ್ತಿದ್ದಾರೆ.

ಇತ್ತೀಚೆಗಷ್ಟೇ ವಿಜಯನಗರ 3ನೇ ಹಂತದಲ್ಲಿ ಕರ್ನಾಟಕ ರಾಜ್ಯ ಸ್ಥಾಯಿ ಕರ್ಮಚಾರಿಗಳ ಆಯೋಗದ ಮಾಜಿ ಅಧ್ಯಕ್ಷರಾದ ಎಂ. ಶಿವಣ್ಣ ಅವರ ಮನೆಯ ಕಾಂಪೌಂಡ್ ಒಳಗೆ ನಿಲ್ಲಿಸಿದ್ದ ಟೊಯೋಟಾ ಇನ್ನೋವಾ ಕಾರನ್ನು ಕಳವು ಮಾಡಲಾಗಿದ್ದು, ಪೊಲೀಸರು ಆರೋಪಿಗಳ ಪತ್ತೆಗೆ ವ್ಯಾಪಕ ಶೋಧ ನಡೆಸುತ್ತಿದ್ದಾರೆ. ಕಾರುಗಳು ಹಾಗೂ ಚಕ್ರಗಳನ್ನು ಕಳವು ಮಾಡುತ್ತಿರುವುದರಿಂದ ಎಚ್ಚೆತ್ತ ಪೊಲೀಸರು ಇದೀಗ ವಸತಿ ಬಡಾವಣೆಗಳಲ್ಲಿ ರಾತ್ರಿ ಗಸ್ತು ಕಾರ್ಯಾಚರಣೆಗಳನ್ನು ಚುರುಕುಗೊಳಿಸಿದ್ದಾರೆ.



ಪ್ರತ್ಯೇಕ ಪ್ರಕರಣಗಳಲ್ಲಿ ಮನೆ ಬೀಗ ಮುರಿದು ಚಿನ್ನಾಭರಣ, ನಗದು ಕಳವು

ಮನೆಯಲ್ಲಿ ಜನರಿದ್ದರೂ ಕಳ್ಳತನ!

ಮಳವಳ್ಳಿ, ಜೂ. 26– ಪ್ರತ್ಯೇಕ ಎರಡು ಪ್ರಕರಣಗಳಲ್ಲಿ ಮನೆ ಬೀಗ ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ಮಳವಳ್ಳಿ ತಾಲೂಕು ಜಡಗನಪುರ ಹಾಗೂ ಮೈಸೂರಿನ ವಸಂತನಗರದಲ್ಲಿ ನಡೆದಿದೆ.

ಮಳವಳ್ಳಿ ಪಟ್ಟಣದ ಹಣ್ಣಿನ ಅಂಗಡಿಯ ನೌಕರ ಎಸ್.ಕೆ.ಶ್ರೀನಿವಾಸ್(39) ಮನೆಯಲ್ಲಿ ಚಿನ್ನಾಭರಣ ಹಾಗೂ ನಗದು ಕಳವು ಮಾಡಲಾಗಿದೆ. ಇವರು ಜೂನ್ 24ರಂದು ಸಂಜೆ ಮಳವಳ್ಳಿಯ ತಮ್ಮ ಅಂಗಡಿ ಬಳಿಗೆ ಪತ್ನಿ ನಾಗಮ್ಮ ಅವರನ್ನು ಕರೆಸಿಕೊಂಡು, ಇಬ್ಬರೂ ಬೆಂಗಳೂರಿಗೆ ತೆರಳಿದ್ದಾರೆ. ಮರುದಿನ ಸಂಜೆ ಪಕ್ಕದ ಮನೆಯವರು ಕರೆ ಮಾಡಿ ಕಳುವಾಗಿರುವ ಬಗ್ಗೆ ತಿಳಿಸಿದ್ದಾರೆ. ಶ್ರೀನಿವಾಸ್ ಅವರು ವಾಪಸ್ ಬಂದು ನೋಡಿದಾಗ, ಮನೆಯ ಬೀಗ ಮುರಿದು 180 ಗ್ರಾಂ ತೂಕದ ಚಿನ್ನಾಭರಣ ಹಾಗೂ 2.20 ಲಕ್ಷ ರೂ. ನಗದು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಮಳವಳ್ಳಿ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಕ್ರೈಂ ಬಾಕ್ಸ್

ಮೈಸೂರಲ್ಲಿ ಪ್ರಕರಣ: ಮೈಸೂರಿನ ವಸಂತನಗರದಲ್ಲೂ ಹೀಗೆಯೇ ಬಾಗಿಲು ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಲಾಗಿದೆ.

ವಸಂತನಗರ 11ನೇ ಮುಖ್ಯರಸ್ತೆ ಮನೆ ಸಂಖ್ಯೆ 940ರಲ್ಲಿ ವಾಸವಿರುವ ನವಕೀಸ್ ಶಾಲೆ ಶಿಕ್ಷಕಿ ಜಿ. ವಿಜಯಲಕ್ಷ್ಮೀ(40) ಚಿನ್ನಾಭರಣ ಹಾಗೂ ನಗದು ಕಳೆದುಕೊಂಡವರಾಗಿದ್ದು, ಇವರು ಜೂನ್ 23ರಂದು ಬೆಳಗ್ಗೆ ಮನೆಗೆ ಬೀಗ ಹಾಕಿಕೊಂಡು ಊರಿಗೆ ತೆರಳಿದ್ದಾರೆ. ಮರುದಿನ ಹಿಂತಿರುಗಿದಾಗ ಇವರ ಮನೆ ಬೀಗ ಮುರಿದು 20 ಗ್ರಾಂ ತೂಕದ ಚಿನ್ನದ ನೆಕ್ಲೇಸ್ ಮತ್ತು 40 ಸಾವಿರ ರೂ. ನಗದು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಜೂನ್ 25ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಆಲನಹಳ್ಳಿ ಠಾಣೆ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಅದೇ ದಿನ, ಅದೇ ರಸ್ತೆಯ ಮನೆ ನಂಬರ್ 883ರಲ್ಲಿ ವಾಸವಿರುವ ಉದಯಗಿರಿ ಮಲ್ಲಿಕಾರ್ಜುನ ಕಾಲೇಜು ಉಪನ್ಯಾಸಕ ಹೆಚ್.ಬಿ. ದಕ್ಷಿಣಾಮೂರ್ತಿ(53) ಎಂಬುವರ ಮನೆ ಬೀಗ ಮುರಿದು 29 ಗ್ರಾಂ ತೂಕದ ಚಿನ್ನಾಭರಣ ಹಾಗೂ 10 ಸಾವಿರ ರೂ. ನಗದು ಕಳವು ಮಾಡಲಾಗಿತ್ತು. ಇವೆರಡೂ ಕೃತ್ಯಗಳನ್ನು ಒಂದೇ ತಂಡ ನಡೆಸಿರಬಹುದು ಎಂದು ಶಂಕಿಸಲಾಗಿದೆ.

ಜನರಿದ್ದರೂ ಮನೆಗೆ ಕನ್ನ: ಕುಟುಂಬಸ್ಥರು ಮನೆಯಲ್ಲಿ ಮಲಗಿರುವಾಗಲೇ ಬಾಗಿಲು ಮುರಿದು ಒಳನುಗ್ಗಿದ ಖದೀಮರು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವುದು ಮೈಸೂರು ತಾಲೂಕು ದೊಡ್ಡಹಟ್ಟಿಹುಂಡಿ ಗ್ರಾಮದಿಂದ ವರದಿಯಾಗಿದೆ.

ಈ ಗ್ರಾಮದ ಸುಬ್ಬೇಗೌಡ(50) ಎಂಬುವರದು 16 ಕಂಬದ ನಾಡಹೆಂಚಿನ ಮನೆಯಾಗಿದ್ದು, ಈ ಮನೆಯಲ್ಲಿ ಮೂರು ಕುಟುಂಬಗಳು ವಾಸವಿವೆ. ಜೂನ್ 25ರಂದು ಬೆಳಗಿನಜಾವ 3 ಗಂಟೆ ಸುಮಾರಿನಲ್ಲಿ ಇವರ ಅಕ್ಕಪಕ್ಕದ ಮನೆಯವರು "ಕಳ್ಳರು ಬಂದಿದ್ದಾರೆ, ಕಳ್ಳರು ಬಂದಿದ್ದಾರೆ" ಎಂದು ಕೂಗಾಡಿದ ಶಬ್ದ ಕೇಳಿ ಸುಬ್ಬೇಗೌಡ ಕುಟುಂಬಸ್ಥರು ಎದ್ದು ನೋಡಿದಾಗ ಅವರ ಮನೆ ಬಾಗಿಲು ಮುರಿದು ನುಗ್ಗಿದ್ದ ಖದೀಮರು ರೂಂನಲ್ಲಿದ್ದ ಗೋದ್ರೇಜ್ ಬೀರು ಮೀಟಿ 68 ಗ್ರಾಂ ತೂಕದ ಚಿನ್ನಾಭರಣ ಹಾಗೂ 14 ಸಾವಿರ ನಗದು ಕಳವು ಮಾಡಿದ್ದಾರೆ. ಈ ಸಂಬಂಧ ಇಲವಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸಗೊಬ್ಬರ ಅಧಿಕ ಬೆಲೆಗೆ ಮಾರಾಟ ಮಾಡದಂತೆ ಮಾರಾಟಗಾರರಿಗೆ ಮೈಸೂರು ಜಿಲ್ಲಾಧಿಕಾರಿ ಎಚ್ಚರಿಕೆ



ಮೈಸೂರು, ಜೂ.26(ಎಂಕೆ)– ಯೂರಿಯಾ ರಸಗೊಬ್ಬರ ಸೇರಿದಂತೆ ಇತರೆ ಯಾವುದೇ ರಸಗೊಬ್ಬರಗಳ ಸಾಗಾಣಿಕೆ ವೆಚ್ಚಗಳ ನೆಪದಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡದಂತೆ ಎಲ್ಲಾ ರಸಗೊಬ್ಬರ ಮಾರಾಟಗಾರರಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸೂಚನೆ ನೀಡಿದರು.

ಮೈಸೂರು ಜಿಲ್ಲೆಗೆ ರಸಗೊಬ್ಬರ ಸರಬರಾಜು ಮಾಡುವ ಕಂಪನಿಗಳ ಪ್ರತಿನಿಧಿಗಳು, ಸಗಟು ರಸಗೊಬ್ಬರ ಮಾರಾಟಗಾರರು, ರಸಗೊಬ್ಬರಕ್ಕೆ ಸಂಬಂಧಿಸಿದ ಸಿ ಅಂಡ್ ಎಫ್ ಏಜೆಂಟ್ಸ್ ಹಾಗೂ ಎಂಎನ್‌ಜಿಟಿ ರೈಲ್ವೇ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಪದಾಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ಅವರು, ಇತ್ತೀಚಿನ ದಿನಗಳಲ್ಲಿ ಲಾರಿ ಮಾಲೀಕರ ಸಂಘದ ಪದಾಧಿಕಾರಿಗಳು ಸಾಗಾಣಿಕಾ ವೆಚ್ಚವನ್ನು ಶೇ.24 ರಿಂದ 30 ರಷ್ಟು ಏರಿಕೆ ಮಾಡಿದ್ದು, ಚಿಲ್ಲರೆ ಮಾರಾಟಗಾರರ ಬಳಿ ತಲುಪುವ ಸಮಯಕ್ಕೆ ರಸಗೊಬ್ಬರದ ಬೆಲೆಗಳು ಎಂಆರ್‌ಪಿ ದರಕ್ಕಿಂತ ಹೆಚ್ಚಾಗುತ್ತಿರುವುದರಿಂದ ಚಿಲ್ಲರೆ ಮಾರಾಟಗಾರರು ರಸಗೊಬ್ಬರ ಖರೀದಿ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಇದರಿಂದಾಗಿ, ರಸಗೊಬ್ಬರ ತಯಾರಿಕಾ ಪ್ರತಿನಿಧಿಗಳು ಜಿಲ್ಲೆಗೆ ಯೂರಿಯಾ ಹಾಗೂ ಕಾಂಪ್ಲೆಕ್ಸ್ ರಸಗೊಬ್ಬರವನ್ನು ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು.

ರಸಗೊಬ್ಬರ ತಯಾರಿಕೆ ಮತ್ತು ಸರಬರಾಜಿನ ಎಲ್ಲಾ ಪಾಲುದಾರರ ಹಿತವನ್ನು ಗಮನದಲ್ಲಿಟ್ಟುಕೊಂಡು ಯೂರಿಯಾ ರಸಗೊಬ್ಬರ ಸೇರಿದಂತೆ ರೇಕ್ ಪಾಯಿಂಟ್ ನಿಂದ ಸಾಗಾಣಿಕೆ ವೆಚ್ಚ ಇಲ್ಲದ (Ex-Rake Point) ರಸಗೊಬ್ಬರವನ್ನು ಈ ಹಿಂದೆ ನಿಗಧಿಪಡಿಸಿದ್ದ ದರದಲ್ಲೇ ಸಾಗಾಣಿಕೆ ಮಾಡಬೇಕು. ಸಾಗಾಣಿಕೆ ವೆಚ್ಚ ಸಹಿತ (FOL) ರಸಗೊಬ್ಬರಗಳಿಗೆ ನೂತನ ದರಗಳಲ್ಲೇ ಸರಬರಾಜು ಮಾಡಲು ಎಲ್ಲಾ ಪಾಲುದಾರರು ಒಪ್ಪಿಕೊಳ್ಳಬೇಕು ಎಂದರು. ಜಿಲ್ಲಾಧಿಕಾರಿಗಳ ಸೂಚನೆಗೆ ಸಭೆಯಲ್ಲಿದ್ದ ಎಲ್ಲರೂ ಸಮ್ಮತಿ ನೀಡಿದರು.

ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಡಾ.ಬಿ. ಎಸ್.ಚಂದ್ರಶೇಖರ್, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ಮತ್ತು ಪದಾಧಿಕಾರಿಗಳು, ಮೈಸೂರು ಜಿಲ್ಲಾ ಲಾರಿ ಮಾಲೀಕರ ಸಂಘದ ಪದಾಧಿಕಾರಿಗಳು ಹಾಗೂ ವಿವಿಧ ರಸಗೊಬ್ಬರ ಸರಬರಾಜು ಸಂಸ್ಥೆಗಳ ಅಧಿಕಾರಿಗಳು ಮತ್ತು ಸಿ ಅಂಡ್ ಎಫ್ ಏಜೆಂಟ್ಸ್‌ಗಳು ಉಪಸ್ಥಿತರಿದ್ದರು.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.26– 2023–24ನೇ ಸಾಲಿನ ಮೈಸೂರು ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ಬಾಲಕರ, ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹಿಂದುಳಿದ ವರ್ಗಗಳ ಪ್ರವರ್ಗ 1, 2(ಎ), 2(ಬಿ), 3(ಎ) ಮತ್ತು 3(ಬಿ), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, https://shp.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಜು.15 ಅರ್ಜಿ ಸಲ್ಲಿಸಲು ಕಡೆಯ ದಿನಾಂಕವಾಗಿರುತ್ತದೆ.

AFFIDAVIT

I, Sri K. Mahendran, S/o B. Karthikeyan, aged about 41 years, residing at Door No. 130, Ahimsa Marga, Siddartha Layout, Mysuru-570 011 do hereby solemnly affirm and state on oath as follows: I am residing in the above said address. The vehicle being sold from my ownership has not being transferred from the buyer, please legally transfer the vehicles and present B extract owner is not liable for any claims and criminal acts. Contacts No. 9886524093. Vehicle details: 1) Vehicle Heropuch KA 09-L-8211 ; (2) Vehicle Kinetic Honda KA 01-H-5730 ; (3) Vehicle Suzuki Access KA 55-H-0295 ; (4) Vehicle Yamaha Rx-100, KA-09-J9503. This affidavit produce the paper publication, authority. I do swear in the name of God that the contents of this affidavit are true and correct.

Place: Mysore
Date: 24-6-2023 Sd/- K. Mahendran

11ನೇ ವರ್ಷದ ಪುಣ್ಯಸ್ಮರಣೆ



ನೀನು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿನ್ನ ನೆನಪಿನಲ್ಲಿರುವ

ದುಃಖತಪ್ತರು: ಅಪ್ಪ, ಅಮ್ಮ, ಅಣ್ಣ ಹಾಗೂ ಕುಟುಂಬ ವರ್ಗದವರು,

ನಿಶಿಕ್ ಎಂ. ಗೌಡ ಮೈಸೂರು

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜೂ.26– ಜೂ.27 ರ ಬೆಳಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ರಾಮಾನುಜ ರಸ್ತೆ1 ರಿಂದ 9ನೇ ಕ್ರಾಸ್‌ವರೆಗೆ, ಹೊಸಬಂಡಿಕೇರಿ, ಜೆ.ಎಸ್.ಎಸ್. ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ತ್ಯಾಗರಾಜ ರಸ್ತೆ, ಚಾಮುಂಡಿಬೆಟ್ಟ ಮತ್ತು ಪಾದ, ಗುಂಡೂರಾವ್‌ನಗರ, ದತ್ತನಗರ, ಮುನೇಶ್ವರನಗರ, ಗೌರಿಶಂಕರನಗರ, ನಂಜನಗೂಡು ಟೋಲ್‌ಗೇಟ್, ತಾವರೆಕೆರೆ, ಜಾಕಿ ಕ್ವಾಟ್ರಸ್, ರೇಸ್‌ಕೋರ್ಸ್ ಹಿಂಭಾಗ, ಸಬರ್ಬ್ ಬಸ್ ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತ–ಮುತ್ತ, ಸರ್ಕಾರಿ ಅಥಿತಿ ಗೃಹ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು, ತಾಲೂಕು ಕಚೇರಿ, ಡಿ.ದೇವರಾಜ ಅರಸು ರಸ್ತೆ, ಬಿ.ಎನ್. ರಸ್ತೆ, ಚಾಮುಂಡಿಬೆಟ್ಟ, ಸಿದ್ದಾರ್ಥನಗರ, ಆಲನಹಳ್ಳಿ ಸುತ್ತ–ಮುತ್ತಲಿನ ಪ್ರದೇಶಗಳು, ಗಿರಿದರ್ಶಿನಿ ಬಡಾವಣೆ, ಅರಮನೆ ಸುತ್ತ–ಮುತ್ತಲಿನ ಪ್ರದೇಶಗಳು, ಶ್ರೀ ಹರ್ಷ ರಸ್ತೆ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಸುತ್ತ–ಮುತ್ತಲಿನ ಪ್ರದೇಶಗಳು, ಧನ್ವಂತರಿ ರಸ್ತೆ ಹಾಗೂ ಶಿವರಾಂಪೇಟೆ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿ

ಮೈಸೂರು,ಜೂ.26(ಪಿಎಂ)– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜೂ.27ರಂದು ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿ ಆಯೋಜಿಸಲಾಗಿದೆ.



ಮೈಸೂರಿನ ಕಲಾಮಂದಿರದಲ್ಲಿ ಬೆಳಗ್ಗೆ 11.30ಕ್ಕೆ ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಅವರ ಸಾನ್ನಿಧ್ಯ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯರ ಘನ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಜಯಂತಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ನಾಡಪ್ರಭು ಕೆಂಪೇಗೌಡರ ಫೋಟೋಗೆ ಸಚಿವ ಕೆ.ವೆಂಕಟೇಶ್ ಪುಷ್ಪ ನಮನ ಸಲ್ಲಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್ ಪಾಲ್ಗೊಳ್ಳಲಿದ್ದಾರೆ.

ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ಅನಿಲ್ ಚಿಕ್ಕಮಾದು, ಡಿ.ರವಿಶಂಕರ್, ಜಿ.ಡಿ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ದರ್ಶನ್ ಧ್ರುವನಾರಾಯಣ್, ಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಉಪಮೇಯರ್ ಡಾ.ಜಿ.ರೂಪ ಭಾಗವಹಿಸಲಿದ್ದಾರೆ. ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಮುಖ್ಯ ಭಾಷಣ ಮಾಡಲಿದ್ದಾರೆ.

ಇದಕ್ಕೂ ಮುನ್ನ ಬೆಳಗ್ಗೆ 9.30ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಮೆರವಣಿಗೆಯು ಕಲಾತಂಡಗಳೊಂದಿಗೆ ಕೆ.ಆರ್.ವೃತ್ತ ಡಿ.ದೇವರಾಜ ಅರಸು ರಸ್ತೆ ಜೆಎಲ್‌ಬಿ ರಸ್ತೆ ಹುಣಸೂರು ರಸ್ತೆ ಮೂಲಕ ಕಲಾಮಂದಿರ ಆವರಣ ತಲುಪಲಿದೆ ಎಂದು ಪ್ರಕಟಣೆ ತಿಳಿಸಿದೆ.

ರೈಲಿಗೆ ಸಿಲುಕಿ ವ್ಯಕ್ತಿ ಸಾವು

ಮೈಸೂರು, ಜೂ.26– ಜೂ.25 ರಂದು ಎಂಎನ್‌ಜಿಟಿ–ನಾಗನಹಳ್ಳಿ ರೈಲು ನಿಲ್ದಾಣಗಳ ನಡುವೆ ಸುಮಾರು 35–36 ವರ್ಷದ ಅಪರಿಚಿತ ಗಂಡಸು ರೈಲುಗಾಡಿಗೆ ಸಿಲುಕಿ ಮೃತಪಟ್ಟಿದ್ದು, ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. 5 ಅಡಿ ಎತ್ತರವಿರುವ ಮೃತ ವ್ಯಕ್ತಿಯು ಗೋಧಿ ಮೈಬಣ್ಣ ಕೋಲು ಮುಖ ಹಾಗೂ ಸಾಧಾರಣ ಶರೀರವನ್ನು ಹೊಂದಿದ್ದಾರೆ. ತಲೆಯಲ್ಲಿ 2 ಇಂಚು ಕಪ್ಪು ಕೂದಲು ಇದ್ದು ಗಡ್ಡ ಮೀಸೆ ಬಿಟ್ಟಿರುತ್ತಾರೆ. ಹಸಿರು ಬಣ್ಣದ ಟಿ–ಶರ್ಟ್ ಕಪ್ಪು ಬಣ್ಣದ ಪೆನ್ಸಿಲ್ ಕಟ್ ಜೀನ್ಸ್ ಪ್ಯಾಂಟ್ ಧರಿಸಿರುತ್ತಾರೆ. ಮೃತನ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ನಗರದ ರೈಲ್ವೆ ಪೊಲೀಸ್ ಠಾಣೆ ದೂ.ಸಂ.0821–2516579 ಅನ್ನು ಸಂಪರ್ಕಿಸಬಹುದು ಎಂದು ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು, ಜೂ.26– ಮೈಸೂರು ಮಹಾನಗರ ಪಾಲಿಕೆಯ 2022–23ನೇ ಸಾಲಿನ ಪರಿಷ್ಕೃತ ಮತ್ತು 2023–24ನೇ ಸಾಲಿನ ಆಯ–ವ್ಯಯದಲ್ಲಿನ ಪಾಲಿಕೆ ಅನುದಾನದ ಸಾಮಾನ್ಯ ನಿಧಿಯಲ್ಲಿ 40,70,000/– ರೂ.ಗಳನ್ನು ಕಲಾವಿದರ ಪ್ರೋತ್ಸಾಹ ಧನಕ್ಕಾಗಿ ಮೀಸಲಿಟ್ಟಿದ್ದು, ಅದರಂತೆ ಒಬ್ಬ ಕಲಾವಿದರಿಗೆ 10 ಸಾವಿರದಂತೆ ಪ್ರೋತ್ಸಾಹ ಧನ ನೀಡಲು ಅವಕಾಶವಿರುವುದರಿಂದ ನಗರಪಾಲಿಕೆಯ ವ್ಯಾಪ್ತಿಯಲ್ಲಿ ಬರುವಂತಹ ಅರ್ಹ ಫಲಾನುಭವಿಗಳು ಜುಲೈ 3ರೊಳಗೆ ನಿಗದಿತ ಅರ್ಜಿಯನ್ನು ಪಾಲಿಕೆಯ ಆಯಾ ವಲಯ ಕಚೇರಿಗಳಲ್ಲಿ ಪಡೆದು ಸಲ್ಲಿಸುವಂತೆ ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

In the Court of the Hon'ble Civil Judge Senior Division at Virajpet

O.S. No. 82/2013

Plaintiff: Mukkatira K. Ponnappa

Vs

Defendant: Kalamanda D. Kariappa & another.

Court Notice to the proposed defendants No. 4 and 5

Proposed Defendant No. 4: Sri K.A. Sandesh, aged 32 years, S/o Late K.D. Aiyappa.

Propsoed Defendant No. 5: Sri K.A. Sachin, aged 28 years, S/o late K.D. Aiyappa.

Both R/o No. 646, 5th Cross, 2nd Stage, 14th Board, Mysore

Please take notice that the plaintiff instituted the above suit against the defendants for judgement & decree praying for the declaration and injunction & you both are directed to appear before this Hon'ble Court on 10-7-2023 at 11 am personally or through your Counsel without fail. If you fail to appear the matter will be decided exparte.

By the Order of the Court

Sd/- Chief Ministerial Officer, Senior Civil Judge and JMFC Court, Virajpet

Sd/- M.T. Chinnappa,
Advocate for the Plaintiff,
Virajpet, S. Kodagu
Virajpet, Dt: 26-06-2023

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಜಿಲ್ಲಾಡಳಿತಕ್ಕೆ ಇದೊಂದು ಸಮಸ್ಯೆ ಎಂದು ಅನಿಸುತ್ತಿಲ್ಲವೇ; ಇದಕ್ಕೊಂದು ಪರಿಹಾರ ಕಂಡುಕೊಳ್ಳುವ ವ್ಯವಧಾನವೂ ಇಲ್ಲವೇ?



ಮೈಸೂರಿನ ಬನ್ನಿಮಂಟಪದ ಮಿಲೇನಿಯಂ ವೃತ್ತದಲ್ಲಿ (ಎಲ್‌ಐಸಿ ವೃತ್ತ) ಸೋಮವಾರ ವಾಹನ ದಟ್ಟಣೆ ನಡುವೆ ಬಕ್ರೀದ್ ಹಬ್ಬದ ಪ್ರಯುಕ್ತ ಕುರಿ ಸಂತೆ ನಡೆಯುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

● ಎಂ.ಬಿ.ಪವನ್‌ಮೂರ್ತಿ

ಮೈಸೂರು,ಜೂ.26– ವರ್ಷಕ್ಕೊಮ್ಮೆ ಬರುವ ಈ ಪವಿತ್ರ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಹತ್ತಾರು ದಿನಗಳಷ್ಟೇ ನಡೆಯುವ ಕುರಿ ಸಂತೆಗೆ ಮೈಸೂರು ಜಿಲ್ಲಾಡಳಿತ ಸೂಕ್ತ ಸ್ಥಳದ ವ್ಯವಸ್ಥೆ ಮಾಡಲು ಹಲವು ವರ್ಷಗಳಿಂದ ಸಾಧ್ಯವಾಗಿಲ್ಲದೇ ಇರುವುದು ಅತ್ಯಂತ ವಿಷಾದದ ಸಂಗತಿ.

ಹಾಗಾಗಿ ಮೈಸೂರು ನಗರದ ಪ್ರಮುಖ ವೃತ್ತವೊಂದನ್ನೇ ಸಂತೆಗಾಗಿ ಆಶ್ರಯಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ. ಹತ್ತಾರು ವರ್ಷಗಳಿಂದ ಇದೇ ಪರಿಸ್ಥಿತಿ ಇದೆ. ರಾಜಧಾನಿ ಬೆಂಗಳೂರು ರಸ್ತೆಯಲ್ಲಿ ಇದು ಬರುವುದರಿಂದ ಮುಖ್ಯ ವೃತ್ತವಾಗಿರುವ ಹಿನ್ನೆಲೆಯಲ್ಲಿ ಇಲ್ಲಿ ವಾಹನ ಸಂಚಾರ ವ್ಯಾಪಕವಾಗಿದ್ದು, ಎಚ್ಚರ ತಪ್ಪಿದರೆ ವಾಹನ ಸವಾರರು, ಪಾದಚಾರಿಗಳು ಹಾಗೂ ವ್ಯಾಪಾರದಲ್ಲಿ ಮಗ್ನರಾಗಿರುವ ವ್ಯಾಪಾರಿಗಳು, ಗ್ರಾಹಕರ ಜೀವಕ್ಕೇ ಸಂಚಕಾರ ಎದುರಾಗುವಷ್ಟು ದಟ್ಟಣೆ ಇಲ್ಲಿ ಉಂಟಾಗುತ್ತಿದೆ.

ಹೌದು, ಮೈಸೂರಿನಲ್ಲಿ 'ಮಿಲೇನಿಯಂ ವೃತ್ತ' ಎಂದೇ ಚಿರಪರಿಚಿತವಾಗಿರುವ ಎಲ್‌ಐಸಿ ವಿಭಾಗೀಯ ಕಚೇರಿ ಎದುರಿನ ಸರ್ಕಲ್ ಇದೀಗ ಅಕ್ಷರಶಃ ಸಂತೆಯಾಗಿ ಪರಿವರ್ತನೆಯಾಗಿದೆ. ಇದರಿಂದ ವಾಹನಗಳ ಸುಗಮ ಸಂಚಾರ, ಪಾದಚಾರಿಗಳ ಓಡಾಟಕ್ಕೂ ಕಿರಿಕಿರಿ ಉಂಟಾಗಿದೆ. ಇತ್ತ ಸರ್ಕಲ್‌ನಲ್ಲಿ ತಾತ್ಕಾಲಿಕವಾಗಿ ತಲೆ ಎತ್ತಿರುವ ಸಂತೆಯಲ್ಲಿ ವಹಿವಾಟು ನಡೆಸುವ ವ್ಯಾಪಾರಸ್ಥರು, ಗ್ರಾಹಕರಿಗೂ ಸುರಕ್ಷತೆಯ ಗ್ಯಾರಂಟಿ ಇಲ್ಲ. ನೀರು–ನೆರಳಿಲ್ಲ (ಮೂಲ ಸೌಕರ್ಯ). 'ಟಿ.ಎನ್.ನರಸಿಂಹಮೂರ್ತಿ (ಮಾಜಿ ಸಚಿವರು) ವೃತ್ತ' ಎಂದು ಪಾಲಿಕೆಯಿಂದ ನಾಮಕರಣಗೊಂಡಿರುವ ಈ ವೃತ್ತದಲ್ಲಿ ತಾತ್ಕಾಲಿಕವಾಗಿ ಕುರಿ, ಟಗರುಗಳ ವ್ಯಾಪಾರ ಕಳೆಗಟ್ಟಿದೆ. ದಶಕಕ್ಕೂ ಹೆಚ್ಚು ಕಾಲದಿಂದ ಪ್ರತಿ ವರ್ಷ ಈ ಸ್ಥಳದಲ್ಲಿ ಕುರಿ ಸಂತೆ ನಡೆಯುವುದು ರೂಢಿಯಾಗಿದೆ. ಮೈಸೂರು–ಬೆಂಗಳೂರು ರಸ್ತೆ ಹಾಗೂ ನೆಲ್ಸನ್ ಮಂಡೇಲಾ ರಸ್ತೆಗೆ ಸಂಪರ್ಕ ಹೊಂದಿರುವ ಈ ವೃತ್ತದಲ್ಲಿ ದಿನನಿತ್ಯ ಸಂಚಾರ ದಟ್ಟಣೆ ಸಹಜ. ಜೊತೆಗೆ ಶಾಲಾ–ಕಾಲೇಜುಗಳು ಹಾಗೂ ಎಲ್‌ಐಸಿ ವಿಭಾಗೀಯ ಕಚೇರಿಯೂ ಇರುವ ಹಿನ್ನೆಲೆಯಲ್ಲಿ ವಾಹನ ಸಂಚಾರ, ಪಾದಚಾರಿಗಳ ಓಡಾಟ ಸಾಮಾನ್ಯ. ಇಂತಹ ಸನ್ನಿವೇಶದಲ್ಲಿ ಸಂತೆ ತಲೆ ಎತ್ತಿದರೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸದೇ ಇರಲು ಸಾಧ್ಯವೇ?

ಮುಸಲ್ಮಾನ ಬಾಂಧವರು ಶ್ರದ್ಧಾ ಭಕ್ತಿಯಿಂದ ಆಚರಿಸುವ ಪವಿತ್ರ ಹಬ್ಬ ಬಕ್ರೀದ್. ಇಂತಹ ಮಹತ್ವದ ಹಬ್ಬದ ಹಿನ್ನೆಲೆಯಲ್ಲಿ ನಡೆಯುವ ಸಂತೆಗೆ ಪ್ರತಿ ವರ್ಷವೂ ಸುರಕ್ಷಿತ ಸ್ಥಳ ಕಲ್ಪಿಸಿಕೊಡುವ ಪ್ರಯತ್ನಗಳೇ ನಡೆಯುತ್ತಿಲ್ಲ. ಸ್ಥಳೀಯ ಆಡಳಿತ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಗೋಜಿಗೆ ಹೋಗುತ್ತಿಲ್ಲ ಎಂಬುದು ಸ್ವತಃ ವ್ಯಾಪಾರಿಗಳು ಹಾಗೂ ಪ್ರಜ್ಞಾವಂತ ನಾಗರಿಕರ ಅಸಮಾಧಾನ. ಪರ್ಯಾಯ ವ್ಯವಸ್ಥೆ ಇಲ್ಲದ ಕಾರಣ ವ್ಯಾಪಾರಸ್ಥರು, ಗ್ರಾಹಕರು ವಿಧಿಯಿಲ್ಲದೇ ಇದೇ ವೃತ್ತವನ್ನು ಅವಲಂಬಿಸುವ ಅನಿವಾರ್ಯತೆ ಎದುರಾಗಿದೆ.

ರಸ್ತೆಬದಿಯಲ್ಲೇ ವಾಹನ ನಿಲುಗಡೆ: ವ್ಯಾಪಾರಸ್ಥರು ಹಾಗೂ ಗ್ರಾಹಕರಿಗೆ ಅವರ ವಾಹನ ನಿಲುಗಡೆಗೆ ಸೂಕ್ತ ಸ್ಥಳಾವಕಾಶ ಇಲ್ಲದ ಕಾರಣ ವೃತ್ತದ ರಸ್ತೆಬದಿಯೇ ವಾಹನಗಳನ್ನು ನಿಲ್ಲಿಸಬೇಕಾಗಿದೆ. ಎಲ್‌ಐಸಿ ವಿಭಾಗೀಯ ಕಚೇರಿ ಎದುರು, ಪಂಜಿನ ಕವಾಯತು ಮೈದಾನದ ಕಾಂಪೌಂಡ್ ಪಕ್ಕ ನೆಲ್ಸನ್ ಮಂಡೇಲಾ ರಸ್ತೆಯ ಬದಿಯು ವಾಹನ ನಿಲುಗಡೆಗೆ ಬಳಕೆಯಾಗುತ್ತಿದೆ. ವ್ಯಾಪಾರಸ್ಥರು ಕುರಿಗಳನ್ನು ತಂದಿರುವ ಗೂಡ್ಸ್ ಆಟೋಗಳು, ಗ್ರಾಹಕರ ದ್ವಿಚಕ್ರ ವಾಹನಗಳು ಎಲ್ಲೆಂದರಲ್ಲಿ ಇಲ್ಲಿನ ರಸ್ತೆ ಬದಿಯಲ್ಲಿ ನಿಲ್ಲಿಸಿ ವ್ಯಾಪಾರದಲ್ಲಿ ತೊಡಗುವ ದುಸ್ಥಿತಿ ನಿರ್ಮಾಣವಾಗಿದೆ.

ಸ್ವಚ್ಛತೆಯೂ ಇಲ್ಲ: ಮೂಲಸೌಕರ್ಯ ಇಲ್ಲದ ಹಿನ್ನೆಲೆಯಲ್ಲಿ ಇಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಲಾಗದ ಪರಿಸ್ಥಿತಿ ಇದ್ದು, ಆಹಾರ ತ್ಯಾಜ್ಯ, ಆಹಾರ ಸೇವನೆಗೆ ಬಳಸಿದ ಪೇಪರ್, ಪ್ಲಾಸ್ಟಿಕ್ ತಟ್ಟೆ ಲೋಟಗಳು ಅಲ್ಲಲ್ಲಿ ಬಿದ್ದು ಅನೈರ್ಮಲ್ಯದ ವಾತಾವರಣ ಉಂಟಾಗಿದೆ. ಜೊತೆಗೆ ಕುರಿ–ಟಗರುಗಳಿಗೆ ಮೇವಿಗಾಗಿ ತಂದಿರುವ ಹುಲ್ಲು ಅಲ್ಲಲ್ಲಿ ಮಳೆ ನೀರಲ್ಲಿ ಕೊಳೆಯುತ್ತಿದೆ. ಇಂತಹ ದುಸ್ಥಿತಿಗೆ ಮೈಸೂರು ನಗರಪಾಲಿಕೆ ಸೂಕ್ತ ಸ್ಥಳ ಕಲ್ಪಿಸದೇ ನಿರ್ಲಕ್ಷ್ಯ ವಹಿಸಿರುವುದೇ ಕಾರಣ ಎಂದು ಪ್ರಜ್ಞಾವಂತ ನಾಗರಿಕರು ದೂರುತ್ತಾರೆ.

ಮೈಸೂರು ಜಿಲ್ಲೆಯ ಮೈಸೂರು, ಟಿ.ನರಸೀಪುರ, ಬನ್ನೂರು, ಹುಣಸೂರು, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಕಿರುಗಾವಲು, ಮದ್ದೂರು, ಪಾಂಡವಪುರ ಮೊದಲಾದ ಸ್ಥಳಗಳಿಂದ ಬಂದು ವ್ಯಾಪಾರಸ್ಥರು ಇಲ್ಲಿ ವಹಿವಾಟು ನಡೆಸುತ್ತಿದ್ದಾರೆ. ವ್ಯಾಪಾರಿಗಳು ನಿತ್ಯ ನೂರಾರು ಕುರಿ, ಟಗರು, ಹೋತಗಳನ್ನು ಇಲ್ಲಿಗೆ ತರುತ್ತಿರುವ ಹಿನ್ನೆಲೆಯಲ್ಲಿ ವೃತ್ತವೇ ಕುರಿ ದೊಡ್ಡಿಯಾಗಿ ಪರಿಣಮಿಸಿದೆ. ತರಾವರಿ ತೂಕ ಮತ್ತು ಗಾತ್ರ ಕುರಿ–ಟಗರು ಹಾಗೂ ಹೋತಗಳನ್ನು ಕನಿಷ್ಠ 7 ಸಾವಿರದಿಂದ ಗರಿಷ್ಠ 50 ಸಾವಿರ ರೂ.ವರೆಗೆ ಮಾರಾಟ ಮಾಡಲಾಗುತ್ತಿದೆ. ಈ ಸಂತೆಯಲ್ಲಿ ಕೇವಲ ಕುರಿ ವ್ಯಾಪಾರ ಮಾತ್ರವಲ್ಲ, ತಳ್ಳುವಗಾಡಿಗಳಲ್ಲಿ ತಿಂಡಿ–ತಿನಿಸು, ಕುಡಿಯುವ ನೀರು, ಕಾಫಿ–ಟೀ ವ್ಯಾಪಾರವೂ ಜೋರಾಗಿದೆ. ವೃತ್ತದ ಸೌಂದರ್ಯೀಕರಣಕ್ಕಾಗಿ ಫುಟ್‌ಪಾತ್ ಮಾದರಿ ನಾಲ್ಕು ಕಟ್ಟಡ ವಿನ್ಯಾಸ ಮಾಡಿದ್ದು, ಪ್ರಮುಖವಾಗಿ ಇಲ್ಲೇ ಕುರಿ ಸಂತೆ ನಡೆಯುತ್ತಿದೆ. ಜೊತೆಗೆ ಇಲ್ಲಿನ ರಸ್ತೆ ಬದಿಗಳಲ್ಲೂ ತಳ್ಳುವಗಾಡಿಗಳಲ್ಲಿ ಚಿಲ್ಲರೆ ಅಂಗಡಿಗಳು ತಲೆ ಎತ್ತಿವೆ. ಮಳೆಗಾಲದ ಹಿನ್ನೆಲೆಯಲ್ಲಿ ಆಗಾಗ್ಗೆ ಮಳೆಯೂ ಆಗುತ್ತಿದ್ದು, ಇದರಿಂದ ವ್ಯಾಪಾರಸ್ಥರು ಹಾಗೂ ಗ್ರಾಹಕರು ಮಳೆ ಬಂದಾಗ, ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಟ್ರಿಣ್ ಟ್ರಿಣ್ ನಿಲ್ದಾಣದಲ್ಲೂ ಕುರಿ ವ್ಯಾಪಾರ...

ವೃತ್ತದಲ್ಲಿ ಪಂಜಿನ ಕವಾಯತು ಮೈದಾನದ ಕಾಂಪೌಂಡ್ ಪಕ್ಕದಲ್ಲಿ ಸ್ಥಾಪಿಸಿರುವ ಟ್ರಿಣ್ ಟ್ರಿಣ್ ಸೈಕಲ್ ನಿಲ್ದಾಣವೂ ಕುರಿ ವಹಿವಾಟಿನ ತಾಣವಾಗಿ ಮಾರ್ಪಟ್ಟಿದೆ. ಶೆಲ್ಟರ್ ಮಾದರಿಯಲ್ಲಿ ಈ ನಿಲ್ದಾಣ ಮೇಲ್ಛಾವಣಿ ಹೊಂದಿರುವ ಹಿನ್ನೆಲೆಯಲ್ಲಿ ಮಳೆ ಬಂದರೂ ನೆನೆಯುವುದು ತಪ್ಪಲಿದೆ. ಹಾಗಾಗಿ ವ್ಯಾಪಾರಸ್ಥರಲ್ಲಿ ಕೆಲವರು ತಮ್ಮ ಕುರಿಗಳ ವ್ಯಾಪಾರಕ್ಕೆ ಈ ಜಾಗ ಆಯ್ದುಕೊಂಡಿದ್ದಾರೆ. ಸೂಕ್ತ ಸ್ಥಳ ನಿಗದಿಪಡಿಸಿದ್ದರೆ ಇಂತಹ ಪರಿಸ್ಥಿತಿ ಎದುರಾಗುತ್ತಿರಲಿಲ್ಲ ಎಂಬುದು ಪ್ರಜ್ಞಾವಂತರ ಅಭಿಪ್ರಾಯ.

ವೃತ್ತದ ಸನಿಹದಲ್ಲೇ ಇದೆ ಸೂಕ್ತ ಸ್ಥಳ...

ಪರ್ಯಾಯ ವ್ಯವಸ್ಥೆ ಕಲ್ಪಿಸಲು ಸನಿಹದಲ್ಲೇ ಸ್ಥಳಾವಕಾಶವಿದೆ. ವೃತ್ತದ ಪಕ್ಕದಲ್ಲೇ ಇರುವ ಪಂಜಿನ ಕವಾಯತು ಮೈದಾನದ ವಾಹನ ನಿಲುಗಡೆ ಹಾಗೂ ಗಿಡ ಮರ ಬೆಳೆದಿರುವ ಗಾರ್ಡನ್ ಪ್ರದೇಶದಲ್ಲಿ ಬಕ್ರೀದ್ ಸಂದರ್ಭದಲ್ಲಿ ಕುರಿ ಸಂತೆಗೆ ಅವಕಾಶ ಕಲ್ಪಿಸಬಹುದು. ಅಥವಾ ಬೇರೆ ಯಾವುದಾದರೂ ಸೂಕ್ತ ಸ್ಥಳ ನಿಗದಿಗೊಳಿಸಿ ತಾತ್ಕಾಲಿಕ ಶೌಚಾಲಯ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಲಭ್ಯ ಕಲ್ಪಿಸಲು ಸಾಧ್ಯವಿದೆ. ಕನಿಷ್ಠ ಪ್ರಮಾಣದ ಶುಲ್ಕ ವಿಧಿಸಿ ಮೂಲಸೌಕರ್ಯ ಒದಗಿಸಬಹುದು. ಆದರೆ ಹತ್ತಾರು ವರ್ಷಗಳಿಂದ ಮಿಲೇನಿಯಂ ವೃತ್ತಕ್ಕೆ ಪರ್ಯಾಯವಾಗಿ ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಸ್ಥಳ ನಿಗದಿಪಡಿಸದ ಹಿನ್ನೆಲೆಯಲ್ಲಿ ವ್ಯಾಪಾರಸ್ಥರು ಇದೇ ವೃತ್ತದಲ್ಲಿ ಅನಿವಾರ್ಯವಾಗಿ ಸಂತೆ ನಡೆಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

▶ ಕಳೆದ 10 ವರ್ಷಗಳಿಂದ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಇಲ್ಲಿ ಬಂದು ವ್ಯಾಪಾರ ಮಾಡುತ್ತಿದ್ದೇನೆ. ಈ ಬಾರಿ ಕಳೆದ 10 ದಿನಗಳಿಂದ ಇಲ್ಲಿ ಬಂದು ಕುರಿಗಳ ವ್ಯಾಪಾರ ಮಾಡುತ್ತಿದ್ದೇನೆ. ಶೌಚಾಲಯದ ವ್ಯವಸ್ಥೆ ಇಲ್ಲ. ವಾಹನ ದಟ್ಟಣೆ ಜಾಸ್ತಿ. ಮೂಲಸೌಲಭ್ಯಗಳನ್ನು ಒಳಗೊಂಡಂತೆ ಪರ್ಯಾಯ ಸ್ಥಳದಲ್ಲಿ ಸಂತೆ ಮಾಡಿದರೆ ಒಳ್ಳೆಯದು. ಈಗಿಲ್ಲಿ ರಸ್ತೆ ದಾಟುವುದು, ಕುರಿಗಳನ್ನು ಹಿಡಿದು ತರುವುದು ಕಷ್ಟ. **–ಶಿವಣ್ಣ, ಚಿನಕುರಳಿ, ಪಾಂಡವಪುರ ತಾಲೂಕು.**

▶ ಮೂತ್ರ ವಿಸರ್ಜನೆಗೂ ಸಮೀಪದಲ್ಲಿ ವ್ಯವಸ್ಥೆ ಇಲ್ಲ. ಇಲ್ಲಿ ಕುರಿಗಳನ್ನು ಬಿಟ್ಟು ಅತ್ತಿತ್ತ ಹೋದರೆ ಅವುಗಳ ಕಳ್ಳತನವಾದರೆ ಎಂಬ ಭಯ. ಪಕ್ಕದಲ್ಲೇ ಇರುವ ಪಂಜಿನ ಕವಾಯತು ಮೈದಾನದ ಹೊರಭಾಗದಲ್ಲಿ ಪ್ರತಿವರ್ಷ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಕುರಿ ಸಂತೆಗೆ ಸ್ಥಳಾವಕಾಶ ಕಲ್ಪಿಸಿದರೆ ಉತ್ತಮ. **–ರಾಜಣ್ಣ, ಮಾಲಂಗಿ ಗ್ರಾಮ, ಟಿ.ನರಸೀಪುರ ತಾಲೂಕು, ಮೈಸೂರು ಜಿಲ್ಲೆ.**

ವ್ಯಾಪಾರಿಗಳೋ, ರೈತರೋ ಮೂಲ ಸೌಕರ್ಯಕ್ಕೆ ಅರ್ಜಿ ಕೊಟ್ಟರೆ ಕಲ್ಪಿಸಿಕೊಡ್ತೇನೆ...



ಮೈಸೂರು,ಜೂ.26–ಬಕ್ರೀದ್ ಅಂಗವಾಗಿ ಕುರಿಗಳನ್ನು ಮಾರಲು ಮೈಸೂರಿಗೆ ಬರುವ ವ್ಯಾಪಾರಸ್ಥರು, ರೈತರು ಮೂಲ ಸೌಕರ್ಯಕ್ಕಾಗಿ ಅರ್ಜಿ ನೀಡಿದರೆ ಅವರಿಗೆ ಮೂಲ ಸೌಕರ್ಯ ಸಮೇತ ತಾತ್ಕಾಲಿಕವಾಗಿ ಸ್ಥಳ ಒದಗಿಸುವ ಬಗ್ಗೆ ನಗರಪಾಲಿಕೆಯೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

ಮಿಲೇನಿಯಂ ಸರ್ಕಲ್‌ನಲ್ಲಿ ಕುರಿ ಮಾರಾಟಗಾರರಿಗೆ ಯಾವುದೇ ರೀತಿಯ ಮೂಲಸೌಕರ್ಯವಿಲ್ಲ ಎಂಬುದರ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಬಕ್ರೀದ್ ಅಂಗವಾಗಿ 10ರಿಂದ 15 ದಿನಗಳ ಕಾಲ ಮಿಲೇನಿಯಂ ಸರ್ಕಲ್‌ನಲ್ಲಿ ಕುರಿಗಳ ವ್ಯಾಪಾರ ನಡೆಯುತ್ತಿರುವುದರಿಂದ ಈ ಸಂದರ್ಭದಲ್ಲಿ ಖರೀದಿಗೆ ಬರುವವರು ಸರ್ಕಲ್‌ನಲ್ಲೇ ವಾಹನಗಳನ್ನು ನಿಲ್ಲಿಸಿಕೊಳ್ಳುತ್ತಾರೆ. ಕುರಿಗಳು ಕೂಡ ಕೆಲವೊಮ್ಮೆ ರಸ್ತೆಗೆ ಬಂದುಬಿಡುತ್ತವೆ. ಇದರಿಂದಾಗಿ ಸುಗಮ ಸಂಚಾರಕ್ಕೆ ಅಡ್ಡಿಯುಂಟಾಗುತ್ತದೆ ಎಂಬುದರ ಬಗ್ಗೆ ತಮಗೆ ತಿಳಿದಿದೆ. ಇದರ ಜೊತೆಗೆ ವ್ಯಾಪಾರಸ್ಥರು ಹಾಗೂ ರೈತರಿಗೂ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಸೇರಿದಂತೆ ಯಾವುದೇ ಮೂಲ ಸೌಕರ್ಯ ಈ ಸ್ಥಳದಲ್ಲಿ ಇಲ್ಲ. ಕುರಿಗಳಿಗೆ ಮೇವು ಹಾಗೂ ನೀರು ನೀಡಲು ಕೂಡ ರೈತರು ಪರದಾಡುವಂತಹ ಪರಿಸ್ಥಿತಿ ಇದೆ ಎಂಬುದರ ಅರಿವು ತಮಗಿದೆ ಎಂದರು.

ಇಲ್ಲಿಗೆ ಬರುವ ವ್ಯಾಪಾರಸ್ಥರಾಗಲೀ, ರೈತರಾಗಲೀ ಮೂಲ ಸೌಕರ್ಯಕ್ಕಾಗಿ ತಮಗೆ ಅರ್ಜಿ ನೀಡಿದರೆ ಅವರಿಗೆ ವಿಶಾಲವಾದ ಬೇರೊಂದು ಸ್ಥಳವನ್ನು ನಿಗದಿಪಡಿಸಿ ಮೂಲ ಸೌಕರ್ಯಗಳನ್ನು ತಾತ್ಕಾಲಿಕವಾಗಿ ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಬಹುದು. ಆದರೆ ಈವರೆವಿಗೂ ಯಾರೂ ಕೂಡ ಅರ್ಜಿ ನೀಡಿಲ್ಲ ಅಥವಾ ಮೌಖಿಕವಾಗಿಯೂ ಹೇಳಿಲ್ಲ. ಈ ಸಂಬಂಧ ನಾನಾಗಿಯೇ ಸ್ವಯಂ ನಿರ್ಧಾರ ಕೈಗೊಂಡರೆ ಅದು ವಿವಾದಗಳಿಗೆ ಎಡೆಯಾಗುವ ಸಾಧ್ಯತೆ ಇದೆ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಕುರಿಮಂಡಿಯಲ್ಲಿ ವಿಶಾಲವಾದ ಜಾಗವಿದೆ. ರೈತರು ಹಾಗೂ ವ್ಯಾಪಾರಸ್ಥರು ತಾವು ಮಾರಾಟಕ್ಕೆ ತಂದ ಕುರಿಗಳು ಆ ದಿನ ಮಾರಾಟವಾಗದಿದ್ದಲ್ಲಿ ಅದನ್ನು ಕೂಡಿ ಹಾಕಲು ವ್ಯವಸ್ಥೆಯಿದೆ. ಹುಲ್ಲು ಬೆಳೆಸಲಾಗಿದೆ, ನೀರಿನ ಸೌಕರ್ಯವೂ ಇದೆ. ಆದರೆ, ಕುರಿಮಂಡಿಗೆ ಯಾರೂ ಬರುತ್ತಿಲ್ಲ. ಅಲ್ಲಿಗೇ ಬರಲೇಬೇಕೆಂದು ನಿರ್ಬಂಧಿಸಲು ಕೂಡ ಸಾಧ್ಯವಾಗುತ್ತಿಲ್ಲ ಎಂದರು.

▶ ಬಕ್ರೀದ್ ಹಬ್ಬ ಸಮೀಪವಿರುವ ಹಿನ್ನೆಲೆಯಲ್ಲಿ ಇನ್ನೇನು ಸಂತೆಯೇ ಮುಗಿಯುತ್ತದೆ. ಮುಂದಿನ ವರ್ಷ ಪರ್ಯಾಯ ಸ್ಥಳದಲ್ಲಿ ಅವಕಾಶ ಕಲ್ಪಿಸಬೇಕೆಂಬುದನ್ನು ಪರಿಗಣಿಸಲಾಗುವುದು. ಮುಂಬರುವ ವರ್ಷದಲ್ಲಿ ಸಂತೆ ಆರಂಭಕ್ಕೂ ಪೂರ್ವದಲ್ಲಿ ಎಲ್ಲೆಲ್ಲಿ ಸ್ಥಳಾವಕಾಶವಿದೆ ಎಂಬುದನ್ನು ಪರಿಶೀಲಿಸಿ, ವ್ಯಾಪಾರಸ್ಥರೊಂದಿಗೂ ಚರ್ಚಿಸಿ, ಸೂಕ್ತ ಸ್ಥಳ ಅಂತಿಮಗೊಳಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. **–ಲಕ್ಷ್ಮೀಕಾಂತರೆಡ್ಡಿ, ಆಯುಕ್ತ, ಮೈಸೂರು ನಗರಪಾಲಿಕೆ.**

▶ ವೃತ್ತದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಹಾಗೂ ಸಂಚಾರ ನಿರ್ವಹಣೆಗೆ ನಮ್ಮಿಂದ ಎಲ್ಲಾ ರೀತಿಯ ಕ್ರಮ ವಹಿಸಲಾಗುತ್ತಿದೆ. ಪರ್ಯಾಯ ಸ್ಥಳ ನಿಗದಿಗೆ ನಗರಪಾಲಿಕೆ ಕ್ರಮ ವಹಿಸಬೇಕು. ಮತ್ತೊಂದು ಸೂಕ್ತ ಸ್ಥಳ ಸಜ್ಜುಗೊಳಿಸಲು ಈ ವರ್ಷ ಸಮಯವಕಾಶ ಇಲ್ಲ. ಮುಂದಿನ ವರ್ಷ ಪರ್ಯಾಯ ಸ್ಥಳಕ್ಕೆ ಇಲ್ಲಿ ನಡೆಯುವ ಕುರಿ ಸಂತೆ ಸ್ಥಳಾಂತರಿಸಲು ಪಾಲಿಕೆ ಆಯುಕ್ತರೊಂದಿಗೆ ಮಾತುಕತೆ ನಡೆಸುತ್ತೇನೆ. **–ರಮೇಶ್ ಬಾನೊತ್, ನಗರ ಪೊಲೀಸ್ ಆಯುಕ್ತ**

ಜೂ.29ರಂದು ಬಕ್ರೀದ್: ಮೈಸೂರಲ್ಲಿ ಮುಖಂಡರೊಂದಿಗೆ ಪೊಲೀಸ್ ಅಧಿಕಾರಿಗಳ ಶಾಂತಿ ಸಭೆ



ಮೈಸೂರು, ಜೂ.26(ಆರ್‌ಕೆ)– ಬಕ್ರೀದ್ ಹಬ್ಬ(ಜೂ.29)ದ ಹಿನ್ನೆಲೆಯಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ತಮ್ಮ ಕಚೇರಿ ಸಭಾಂಗಣದಲ್ಲಿ ಹಿಂದೂ–ಮುಸ್ಲಿಂ ಸಮುದಾಯಗಳ ಮುಖಂಡರೊಂದಿಗೆ ಸೋಮವಾರ ಶಾಂತಿ ಸಭೆ ನಡೆಸಿದರು. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಸೌಹಾರ್ದಯುತವಾಗಿ ಶಾಂತಿಯಿಂದ ಹಬ್ಬ ಆಚರಿಸಬೇಕು. ಸಾಮೂಹಿಕ ಪ್ರಾರ್ಥನೆ ವೇಳೆ ಕಾನೂನು–ಸುವ್ಯವಸ್ಥೆಗೆ ಭಂಗವಾಗದಂತೆ ನಡೆದುಕೊಳ್ಳಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ವಿಚಾರಗಳನ್ನು ನಂಬಿ ಸಾಮರಸ್ಯ ಕಳೆದುಕೊಳ್ಳಬಾರದು. ಪ್ರಚೋದಾತ್ಮಕ ಹೇಳಿಕೆಗಳಿಗೆ ಕಿವಿಗೊಡಬಾರದು. ಎಲ್ಲರೂ ಸಂಭ್ರಮದಿಂದ ಹಬ್ಬ ಆಚರಿಸಬೇಕೆಂದು ಸಲಹೆ ನೀಡಿದರು. ಈದ್ಗಾ ಮೈದಾನ, ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯುವಾಗ ಅಗತ್ಯ ಪೊಲೀಸ್ ಬಂದೋಬಸ್ತ್ ಜೊತೆಗೆ ಸುಗಮ ಸಂಚಾರ, ವಾಹನ ನಿಲುಗಡೆಗೆ ಸೂಕ್ತ ವ್ಯವಸ್ಥೆ ಮಾಡಲಾಗುತ್ತದೆ. ಒಂದು ವೇಳೆ ಕಾನೂನು– ಸುವ್ಯವಸ್ಥೆಗೆ ಧಕ್ಕೆಯಾಗುವಂತಹ ಸಂಗತಿಗಳು ಕಂಡು ಬಂದರೆ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಬಿ.ರಮೇಶ್ ಎಚ್ಚರಿಕೆ ನೀಡಿದರು. ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಎಸಿಪಿಗಳಾದ ಶಾಂತಮಲ್ಲಪ್ಪ, ಎಸ್.ಇ. ಮಂಜುನಾಥ್ ಸ್ವಾಮಿ, ಗಜೇಂದ್ರ ಪ್ರಸಾದ್, ಅಶ್ವಥ್‌ನಾರಾಯಣ, ಸಂದೇಶ್ ಕುಮಾರ್, ಪರಶುರಾಮಪ್ಪ, ಹಿಂದೂ–ಮುಸ್ಲಿಂ ಸಮುದಾಯದ ಮುಖಂಡರು, ನಗರಪಾಲಿಕೆ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

ನಾಳೆ ಮಾವಿನ ಸಂತೆ

ಮೈಸೂರು,ಜೂ.26– ಕುವೆಂಪುನಗರದಲ್ಲಿರುವ ರಾಘವೇಂದ್ರಸ್ವಾಮಿ ಮಠದ ಹತ್ತಿರ ಜೂ.28ರಂದು ಬನವಾಸಿ ತೋಟದಲ್ಲಿ ಬೆಳೆದಿರುವ ಮಾವಿನ ಹಣ್ಣುಗಳ ಸಂತೆಯನ್ನು ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 10.30ರಿಂದ ಸಂಜೆ 7 ಗಂಟೆವರೆಗೆ ಸಂತೆ ನಡೆಯಲಿದೆ. ಮಾಹಿತಿಗಾಗಿ ಮೊ.ನಂ.8197856132 ಸಂಪರ್ಕಿಸಿ.

ಜಯದೇವ ಹೃದ್ರೋಗ ಆಸ್ಪತ್ರೆ, ಉದ್ಯಮಿ ನಿತಿನ್ ಕಾಮತ್, ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್‌ಗೆ ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ







ಬೆಂಗಳೂರು, ಜೂ.26(ಕೆಎಂಶಿ)– ಕೆಂಪೇಗೌಡ ಜಯಂತಿ ಅಂಗವಾಗಿ ಪ್ರತಿ ವರ್ಷ ನೀಡುವ ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಜಯದೇವ ಹೃದ್ರೋಗ ಆಸ್ಪತ್ರೆ ಯುವ ಉದ್ಯಮಿ ನಿತೀನ್ ಕಾಮತ್ ಹಾಗೂ ಯುವ ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪ್ರಶಸ್ತಿ ಪುರಸ್ಕೃತರ ಆಯ್ಕೆಗೆ ಬಿ.ಎಲ್.ಶಂಕರ್ ನೇತೃತ್ವದ ಸಮಿತಿ ರಚನೆ ಮಾಡಲಾಗಿತ್ತು ಈ ಸಮಿತಿ ಚರ್ಚೆ ಮಾಡಿ ಮೂವರು ಸಾಧಕರ ಆಯ್ಕೆ ಮಾಡಿದೆ. ಈ ಪ್ರಶಸ್ತಿ ಜೊತೆಗೆ 5 ಲಕ್ಷ ರೂ. ನೀಡುವ ಪದ್ಧತಿ ನಡೆದುಕೊಂಡು ಬಂದಿದೆ. ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರಿಂದ ಹಿಡಿದು ಕಸಗುಡಿಸುವ ಕೆಲಸಗಾರರವರೆಗೂ ಎಲ್ಲರೂ ಸೇವೆ ಸಲ್ಲಿಸಿದ್ದು, ಹೀಗಾಗಿ ಈ ಸಂಸ್ಥೆಗೆ ಪ್ರಶಸ್ತಿ ನೀಡಲು ತೀರ್ಮಾನಿಸಲಾಗಿದೆ. 1600 ಬೆಡ್ ಸೌಲಭ್ಯ ಹೊಂದಿರುವ ಆಸ್ಪತ್ರೆಯು ಬಹಳ ಕಡಿಮೆ ದರದಲ್ಲಿ ಎಲ್ಲಾ ವರ್ಗದ ಜನರಿಗೆ ಆರೋಗ್ಯ ಸೇವೆ ನೀಡುತ್ತಾ ಬಂದಿದೆ. ಇನ್ನು ಕಿರಿಯ ವಯಸ್ಸಿನಲ್ಲೇ ಜೇರೋಧ ಎಂಬ ನವೋದ್ಯಮ ಆರಂಭಿಸಿ ಯಶಸ್ವಿ ಉದ್ಯಮಿಯಾಗಿ ಬೆಳೆದಿರುವ ನಿತಿನ್ ಕಾಮತ್ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದು, ನವೋದ್ಯಮ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿದ್ದಾರೆ. ಈ ಸಂಸ್ಥೆಯಿಂದ ಬರುವ ಶೇ.25ರಷ್ಟು ದುಡಿಮೆ ಹಣವನ್ನು ಸಾಮಾಜಿಕ ಸೇವೆಗೆ ಮುಡಿಪಿಟ್ಟಿದ್ದಾರೆ.

ಇನ್ನು ಬೆಂಗಳೂರಿನ ಯುವ ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್ ಅವರನ್ನು ಕೂಡ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಅದಿತಿ ಅಶೋಕ್ ಟೋಕಿಯೋ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ನಾಲ್ಕನೇ ಸ್ಥಾನ ಪಡೆದು ದೇಶಕ್ಕೆ ಕೀರ್ತಿ ತಂದಿದ್ದರು. ವಿಶ್ವ ಗಾಲ್ಫ್ ಕ್ರೀಡೆಯಲ್ಲಿ ಎತ್ತರದ ಸಾಧನೆ ಮಾಡಿರುವ ಆಟಗಾರ್ತಿ ಅದಿತಿ ಅಶೋಕ್ ಆಗಿದ್ದಾರೆ.

ಈ ಬಾರಿ ಆರೋಗ್ಯ, ಉದ್ದಿಮೆ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಈ ಮೂವರು ವ್ಯಕ್ತಿಗಳನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಸಾಧಕರಿಗೆ ನಾಳೆ ವಿಧಾನಸೌಧದಲ್ಲಿ ನಡೆಯಲಿರುವ 514ನೇ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಕಳೆದ ಸರ್ಕಾರ ಹಾಸನದಲ್ಲಿ ಕಾರ್ಯಕ್ರಮ ನಡೆಸಲು ತೀರ್ಮಾನಿಸಿತ್ತು ಅದನ್ನು ಅಡ್ಡಿಪಡಿಸಲು ನಾವು ಇಚ್ಛಿಸುವುದಿಲ್ಲ. ಬೆಂಗಳೂರಿನ ಕಾರ್ಯಕ್ರಮ ಮುಗಿಸಿ ನಂತರ ಹಾಸನ ಕಾರ್ಯಕ್ರಮಕ್ಕೆ ತೆರಳುವುದಾಗಿ ಅವರು ತಿಳಿಸಿದರು.

ಬರೀ ಕಾಗದದ ಮೇಲಲ್ಲ ಕಾರ್ಯರೂಪದಲ್ಲಿ ಪ್ರಗತಿ ತೋರಿಸಿ

ವಿಭಾಗ ಮಟ್ಟದ ಸಭೆಯಲ್ಲಿ ಸಣ್ಣ ನೀರಾವರಿ ಸಚಿವ ಬೋಸ್‌ರಾಜು ಅಧಿಕಾರಿಗಳಿಗೆ ಎಚ್ಚರಿಕೆ



ಮಧ್ಯವರ್ತಿಗಳ ಮೂಲಕ ವರ್ಗಾವಣೆಗೆ ಪ್ರಯತ್ನಿಸಬೇಡಿ

ಮೈಸೂರು: ವರ್ಗಾವಣೆ ಸಂಬಂಧ ಅಧಿಕಾರಿಗಳಿಗೆ ಸಣ್ಣ ನೀರಾವರಿ ಸಚಿವ ಬೋಸ್ ರಾಜು, ವಿಶೇಷ ಕಿವಿಮಾತು ಹೇಳಿದ್ದಾರೆ. ಮೈಸೂರಿನಲ್ಲಿ ವಿಭಾಗಮಟ್ಟದ ಪ್ರಗತಿ ಪರಿಶೀಲನೆ ನಡೆಸಿದ ಅವರು, ನಾನಾ ಕಾರಣಗಳಿಂದ ಅಧಿಕಾರಿಗಳು ವರ್ಗಾವಣೆ ಬಯಸುತ್ತಾರೆ. ಕಾರಣ ಸೂಕ್ತವಾಗಿದ್ದು, ವರ್ಗಾವಣೆ ಅನಿವಾರ್ಯ ವಾಗಿದ್ದರೆ ಅನುಕೂಲ ಮಾಡಿಕೊಡೋಣ. ಅಂತಹವರು ನೇರವಾಗಿ ನನ್ನ ಬಳಿ ಬನ್ನಿ, ಆದರೆ ಮಧ್ಯವರ್ತಿಗಳ ಮೂಲಕ ಪ್ರಯತ್ನ ಮಾಡಬೇಡಿ. ಯಾವುದೇ ಸಮಸ್ಯೆಗಳಿದ್ದರೂ ನೇರವಾಗಿ ಭೇಟಿಯಾಗಿ ಎಂದು ಇಲಾಖೆ ಇಂಜಿನಿಯರ್‌ಗಳಿಗೆ ತಿಳಿಸಿದರು.

ಮೈಸೂರು,ಜೂ.26(ಎಸ್‌ಬಿಡಿ)– ಕಾಗದದ ಮೇಲಿನ ಪ್ರಗತಿಯನ್ನು ಒಪ್ಪುವುದಿಲ್ಲ, ಅದು ಕಾರ್ಯರೂಪದಲ್ಲಿರಬೇಕು. ತಪ್ಪಿದರೆ ಸಂಬಂಧಪಟ್ಟ ಅಧಿಕಾರಿಗಳೇ ಜವಾಬ್ದಾರಿ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸ್ ರಾಜು ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಸೋಮವಾರ ವಿಭಾಗ ಮಟ್ಟದ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಚಿವರು, ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಂಡು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು. ಬರೀ ಕಾಗದದ ಮೇಲೆ ಪ್ರಗತಿ ತೋರಿಸಿದರೆ ಒಪ್ಪಲು ಸಾಧ್ಯವಿಲ್ಲ. ವಾಸ್ತವದ ನೆಲೆಯಲ್ಲಿ ಪ್ರಗತಿ ಸಾಧಿಸಬೇಕು ಎಂದು ಸೂಚನೆ ನೀಡಿದರು.

ಇಲಾಖೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು. ಜೊತೆಗೆ ಗುಣಮಟ್ಟ ಕಾಯ್ದುಕೊಳ್ಳುವುದು ಬಹಳ ಮುಖ್ಯ. ಇಲಾಖೆ ಇಂಜಿನಿಯರ್‌ಗಳು ನಿರಂತರವಾಗಿ ಸ್ಥಳ ಪರಿಶೀಲನೆ ನಡೆಸಿದರೆ ವಾಸ್ತವದ ಸ್ಥಿತಿಗತಿ ಅರಿವಾಗುತ್ತದೆ. ಇದರಿಂದ ಪರಿಹಾರ ಕ್ರಮ ಕೈಗೊಳ್ಳುವುದು ಸುಲಭವಾಗುತ್ತದೆ. ವಾಸ್ತವವಾಗಿ ಪ್ರಗತಿ ಸಾಧಿಸದಿದ್ದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದರು.

ರೈತರ ಹಿತ ಕಾಯಿರಿ: ಮುಂಗಾರು ಆರಂಭವಾಗಿದ್ದು, ಹಲವೆಡೆ ಮಳೆಯಾಗುತ್ತಿದೆ. ಕೆರೆಗಳ ದುರಸ್ತಿ ಕಾರ್ಯ ತ್ವರಿತವಾಗಿ ಆಗಬೇಕು. ಏರಿ ಒಡೆದರೆ ರೈತರಿಗೆ ತೀವ್ರ ತೊಂದರೆಯಾಗುತ್ತದೆ. ಕೆರೆಕಟ್ಟೆಗಳು ಹಾಗೂ ಏತ ನೀರಾವರಿ ಮೂಲಕ ಬೆಳೆಗಳಿಗೆ ಸಮರ್ಪಕವಾಗಿ ನೀರು ಒದಗಿಸಬೇಕು. ವಿಶೇಷ ಘಟಕ ಯೋಜನೆಯಡಿ ಅಂತರ್ಜಲ ಅಭಿವೃದ್ಧಿ ಮತ್ತು ಏತ ನೀರಾವರಿ ಯೋಜನೆಗಳ ಪುನರುಜ್ಜೀವನಕ್ಕೆ ಅಗತ್ಯ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕು. ವಿಳಂಬವಾಗದಂತೆ ಇಂಜಿನಿಯರ್‌ಗಳು ನಿಗಾ ವಹಿಸಬೇಕು. ಸರ್ಕಾರ ಮತ್ತು ಇಲಾಖೆ ನಡುವೆ ಸಮನ್ವಯತೆಯಿದ್ದರೆ ಯೋಜನೆಗಳನ್ನು ಪರಿಣಾಮಕಾರಿಯಾಗಿ, ಸುಲಭವಾಗಿ ಅನುಷ್ಠಾನಗೊಳಿಸಲು ಸಾಧ್ಯ. ಹಿಂದೆ ತಪ್ಪುಗಳಾಗಿದ್ದರೆ ಸರಿಪಡಿಸಿಕೊಂಡು ನಿಷ್ಠೆಯಿಂದ ಕೆಲಸ ಮಾಡಿ. ನೀವು ನೀಡುವ ಮಾಹಿತಿ ವಾಸ್ತವತೆಯಿಂದ ಕೂಡಿರಬೇಕೇ ಹೊರತು ಕಾಗದದ ಮೇಲಿನ ಅಂಕಿ ಅಂಶಗಳನ್ನು ನಂಬುವುದಿಲ್ಲ, ಪುನರ್ ಪರಿಶೀಲನೆ ನಡೆಸುತ್ತೇನೆ ಎಂದು ಎಚ್ಚರಿಕೆ ನೀಡಿದರು.

ಪಾರದರ್ಶಕ ಬಿಲ್ ಪಾವತಿ: ಇಲಾಖೆಯ ವಿವಿಧ ಯೋಜನೆಯಡಿ ಸಾವಿರಾರು ಕೋಟಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ನಡುವೆ ಹೊಸ ಯೋಜನೆಗಳನ್ನೂ ಆರಂಭಿಸಬೇಕಿದೆ. ಹಾಗಾಗಿ ಗುತ್ತಿಗೆದಾರರಿಗೆ ಜೇಷ್ಠತೆ ಆಧಾರದಲ್ಲಿ ವ್ಯವಸ್ಥಿತವಾಗಿ ಬಾಕಿ ಬಿಲ್ ನೀಡಬೇಕು. ಇದರಲ್ಲಿ ಯಾವುದೇ ರೀತಿಯ ಗೊಂದಲವಾಗದಂತೆ ಕ್ರಮ ವಹಿಸಬೇಕು. ವಸ್ತುಸ್ಥಿತಿ ಆಧರಿಸಿ ಸಮರ್ಪಕ ವರದಿ ನೀಡುವುದು ಇಂಜಿನಿಯರ್‌ಗಳ ಜವಾಬ್ದಾರಿ. ಸಮಸ್ಯೆ ಕಠಿಣವೆನಿಸಿದರೆ ಮೇಲಧಿಕಾರಿಗಳ ಗಮನಕ್ಕೆ ತಂದು ಅವರ ಸಹಕಾರ ಪಡೆಯಿರಿ. ಕಾಮಗಾರಿಗಳ ಬಿಲ್ ಪಾವತಿ ಪಾರದರ್ಶಕವಾಗಿರಬೇಕು. ಜನರ ನಿರೀಕ್ಷೆಯಂತೆ ತಳಮಟ್ಟದ ಸಮಸ್ಯೆ ಅರಿತು ಕಾರ್ಯ ನಿರ್ವಹಿಸಬೇಕೆಂಬುದು ನಮ್ಮ ಸರ್ಕಾರದ ಆಶಯ. ಅದರಂತೆ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಸಣ್ಣ ನೀರಾವರಿ ಇಲಾಖೆ ಮುಖ್ಯ ಇಂಜಿನಿಯರ್ ರಾಘವನ್, ಅಧೀಕ್ಷಕ ಇಂಜಿನಿಯರ್ ಕಿಶೋರ್ ಮತ್ತು ಮಂಗಳೂರು, ಹಾಸನ, ಮೈಸೂರು, ಚಿಕ್ಕಮಗಳೂರು, ಚಾಮರಾಜನಗರ, ಕೊಡಗು ಹಾಗೂ ಮಂಡ್ಯ ಜಿಲ್ಲೆಗಳ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಮತ್ತು ಅಧಿಕಾರಿಗಳು ಭಾಗವಹಿಸಿದ್ದರು.

ಬಳಕೆಯಾಗದ ಅನುದಾನ ಹಿಂಪಡೆಯಲು ಸೂಚನೆ



ವಿಭಾಗ ಮಟ್ಟದ ಪ್ರಗತಿ ಪರಿಶೀಲನಾ ಸಭೆ ಬಳಿಕ ಸಚಿವ ಬೋಸ್‌ರಾಜು ಮೈಸೂರು ವಿವಿ ವಿಜ್ಞಾನ ವಿಭಾಗಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರು, ಜೂ.26– ಉದ್ದೇಶಿತ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳದ ಅನುದಾನವನ್ನು ಹಿಂಪಡೆಯುವಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸ್ ರಾಜು ಅಧಿಕಾರಿಗಳು ಸೂಚನೆ ನೀಡಿದರು.

ಮೈಸೂರು, ಹಾಸನ, ಚಿಕ್ಕಮಗಳೂರು, ಉಡುಪಿ, ಮಡಿಕೇರಿಯಲ್ಲಿ ವಿಜ್ಞಾನ ಕೇಂದ್ರ ಹಾಗೂ ತಾರಾಲಯ (ಪ್ಲ್ಯಾನಿಟೇರಿಯಂ) ನಿರ್ಮಾಣಕ್ಕೆ ಅನುದಾನ ನೀಡಿದರೂ ಏಕೆ ಖರ್ಚು ಮಾಡಿಲ್ಲ ಎಂದು ಪ್ರಶ್ನೆ ಮಾಡಿದ ಸಚಿವರು, ಸ್ಥಳಾವಕಾಶವಿಲ್ಲ ಎಂದು 10–15 ವರ್ಷಗಳಿಂದ ಹಣ ಖರ್ಚು ಮಾಡದಿರುವ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಿಂದ ಅನುದಾನ ವಾಪಸ್ ಪಡೆಯುವಂತೆ ವಿಜ್ಞಾನ, ತಂತ್ರಜ್ಞಾನ ಇಲಾಖೆ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದರು.

ವಿವಿಧ ಜಿಲ್ಲೆಗಳಲ್ಲಿ ವಿಜ್ಞಾನ ಕೇಂದ್ರಗಳಿಗೆ ನೀಡಿರುವ ಭೂಮಿಯನ್ನು ಇಲಾಖೆ ಹೆಸರಿಗೆ ಪಡೆದು, ಸಂಬಂಧಿಸಿದ ದಾಖಲೆ ಇಡಬೇಕು. ವಿಜ್ಞಾನ ಕೇಂದ್ರ ಮತ್ತು ಪ್ಲ್ಯಾನಿಟೋರಿಯಂ ಕೇಂದ್ರಗಳನ್ನು ವಿದ್ಯಾರ್ಥಿಗಳಿಗೆ ಉಪಯೋಗವಾಗುವ ರೀತಿಯಲ್ಲಿ ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಮಂಗಳೂರಿನಲ್ಲಿ 356 ಎಕರೆ ಪ್ರದೇಶದಲ್ಲಿರುವ ಪಿಲಿಕುಳ ಪಕ್ಷಿಧಾಮ, ಖಾಸಗಿ ಸಂಸ್ಥೆಗಳ ನಿರ್ವಹಣೆಯಲ್ಲಿದ್ದರೂ ಅದನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಹೆಸರಲ್ಲಿ ನೋಂದಾಯಿಸಿ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ಕೇಂದ್ರ ಸ್ಥಾಪನೆ ಸಂಬಂಧ ಸರ್ಕಾರಕ್ಕೆ ಪತ್ರ ಬರೆದು ಅನುಮತಿ ಪಡೆದು ಕಾಮಗಾರಿ ಆರಂಭಿಸುವಂತೆ ಸೂಚನೆ ನೀಡಿದರು.

ವಿವಿಗೆ ಭೇಟಿ: ಸಭೆ ಬಳಿಕ ಸಚಿವರು ಮೈಸೂರು ವಿವಿ ವಿಜ್ಞಾನ ವಿಭಾಗಕ್ಕೆ ಭೇಟಿ ನೀಡಿ, ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನ ವಾಹನವನ್ನು ವೀಕ್ಷಿಸಿದರು. ವಿಜ್ಞಾನ ತಂತ್ರಜ್ಞಾನ ಇಲಾಖೆ ನಿರ್ದೇಶಕ ಬಸವರಾಜು, ವಿವಿ ಕುಲಸಚಿವೆ ವಿ.ಆರ್. ಶೈಲಜಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಜನಬಲದ ಮುಂದೆ ಹಣ ಬಲ ನಡೆಯಲ್ಲ ಎಂದು ನಿರೂಪಿಸಿದ

ಮೈಸೂರಿನ ಏಕೈಕ ಬಿಪಿಎಲ್ ಶಾಸಕ ಅನಿಲ್ ಚಿಕ್ಕಮಾದು

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಣ್ಣನೆ



ಹೆಚ್.ಡಿ.ಕೋಟೆ, ಜೂ.26– ಚುನಾವಣೆಯಲ್ಲಿ ಜನಬಲದ ಮುಂದೆ ಹಣ ಬಲ ನಡೆಯಲ್ಲ ಎಂದು ನಿರೂಪಿಸಿದ ಮೈಸೂರು ಜಿಲ್ಲೆಯ ಏಕೈಕ ಬಿಪಿಎಲ್ ಶಾಸಕ ಅನಿಲ್ ಚಿಕ್ಕಮಾದು ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಬಣ್ಣಿಸಿದರು.

ಪಟ್ಟಣದ ಕನಕ ಭವನದ ಆವರಣದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆಯಲ್ಲಿ ನಡೆದ ಕ್ಷೇತ್ರದ ಮತದಾರರ ಕೃತಜ್ಞತಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನಂಜುಂಡಪ್ಪ ವರದಿಯಲ್ಲಿ ಹೆಚ್.ಡಿ. ಕೋಟೆ ಹಿಂದುಳಿದ ತಾಲೂಕು ಎಂದು ನಮೂದಾಗಿದೆ. ತಾಲೂಕಿನಲ್ಲಿ ಹೆಚ್ಚಾಗಿ ಬಡ ಜನತೆ ಇರುವ ಕಾರಣ ಕ್ಷೇತ್ರದಲ್ಲಿ ನಾನು ಬಿಪಿಎಲ್ ಶಾಸಕನಾಗಿ ಉಳಿಯಬೇಕು ಎಂಬ ಮನೋಭಾವ ಶಾಸಕ ಅನಿಲ್ ಚಿಕ್ಕಮಾದು ಅವರಲ್ಲಿದೆ ಎಂದರು.

ತಾಲೂಕಿನ ಶಕ್ತಿದೇವತೆ ಚಿಕ್ಕದೇವಮ್ಮನವರ ಆಶೀರ್ವಾದ, ಕ್ಷೇತ್ರದ ಜನರೊಂದಿಗೆ ಉತ್ತಮ ಬಾಂಧವ್ಯ ಹಾಗೂ ತಮ್ಮ ಅಭಿವೃದ್ಧಿ ಕಾರ್ಯಗಳಿಂದ ಶಾಸಕ ಅನಿಲ್ ಚಿಕ್ಕಮಾದು 2ನೇ ಬಾರಿಗೆ ಜಯಗಳಿಸಿ ಇತಿಹಾಸ ಸೃಷ್ಟಿಸಿದ್ದಾರೆ. ಬೇರೆ ತಾಲೂಕುಗಳಂತೆ ಕೋಟೆ ಹಾಗೂ ಸರಗೂರು ತಾಲೂಕುಗಳು ಅಭಿವೃದ್ಧಿಯಲ್ಲಿ ಮುಖ್ಯವಾಹಿನಿಗೆ ಬರಲು ನಾವೆಲ್ಲರೂ ಕೈಜೋಡಿಸಬೇಕು ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ನಾನು ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಜನತೆ ಹೆಚ್ಚಿನ ಮತ ನೀಡಿ ನನ್ನನ್ನು 2ನೇ ಬಾರಿಗೆ ಶಾಸಕನನ್ನಾಗಿ ಆಯ್ಕೆ ಮಾಡಿದ್ದಾರೆ. ನನ್ನ ಬೆಳವಣಿಗೆಗೆ ನನ್ನ ರಾಜಕೀಯ ಗುರು, ಮಾರ್ಗದರ್ಶಕರಾದ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರೇ ಕಾರಣ ಎಂದ ಅವರು, ನಾನು ಮತ್ತೊಮ್ಮೆ ಶಾಸಕನಾಗಿ ಆಯ್ಕೆಯಾಗಿ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಬೇಕೆಂಬುದು ಧ್ರುವನಾರಾಯಣ್ ಅವರ ಆಸೆಯಾಗಿತ್ತು ಆದರೆ ದುರ್ವಿಧಿ ಅವರನ್ನು ನಾವು ಕಳೆದುಕೊಂಡಿದ್ದೇವೆ. ಅವರ ನಿಧನದ ಬಳಿಕ ನನಗೆ ರಾಜಕೀಯ ಬೇಡ ಎಂದೆನಿಸಿತ್ತು. ಆದರೆ ಕ್ಷೇತ್ರದ ಜನತೆಯ ಒತ್ತಾಯ ಹಾಗೂ ತಾಲೂಕಿನಲ್ಲಿ ಧ್ರುವನಾರಾಯಣ್ ಹೆಸರನ್ನು ಉಳಿಸಬೇಕು ಮತ್ತು ಈ ಬಾರಿಯ ಚುನಾವಣೆಯಲ್ಲಿ ಗೆದ್ದು ಮತ್ತೊಮ್ಮೆ ಶಾಸಕನಾಗಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಎಂದು ತೀರ್ಮಾನಿಸಿ ಚುನಾವಣೆಯಲ್ಲಿ ಸ್ಪರ್ಧಿಸಿದೆ. ಅದರಂತೆ ತಾಲೂಕಿನ ಜನತೆ ನನಗೆ ಬಹುಮತ ನೀಡಿ ಶಾಸಕನನ್ನಾಗಿ ಆಯ್ಕೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ನಿಮ್ಮ ಋಣ ತೀರಿಸಲು ಮುಂದಾಗುತ್ತೇನೆ ಎಂದರು.

ಈ ವೇಳೆ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ವಿಧಾನಸಭಾ ಉಪಾಧ್ಯಕ್ಷ ಪುಟ್ಟರಂಗಶೆಟ್ಟಿ, ತಮಿಳುನಾಡು ಶಾಸಕ ರಾಜಕುಮಾರ್, ಶಾಸಕರಾದ ರವಿಶಂಕರ್, ಗಣೇಶ್‌ಪ್ರಸಾದ್, ಕೆ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪ ಅಮರನಾಥ್, ತಾಲೂಕು ಕಾಂಗ್ರೆಸ್ ಉಸ್ತುವಾರಿ ಕಾವೇರಪ್ಪ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಏಜಾಜ್ ಪಾಷ, ಮಾದಪ್ಪ ಯೂತ್ ಕಾಂಗ್ರೆಸ್ ಅಧ್ಯಕ್ಷ ನಯಾಜ್, ಜಿಪಂ ಮಾಜಿ ಸದಸ್ಯರಾದ ನಂದಿನಿ, ಭಾಗ್ಯಲಕ್ಷ್ಮಿ, ಹೆಚ್.ಸಿ.ಮಂಜುನಾಥ್, ಚಿಕ್ಕವೀರ ನಾಯಕ, ರವಿ, ಮೈಮುಲ್ ನಿರ್ದೇಶಕ ಈರೇಗೌಡ, ಪುರಸಭಾ ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ಮಧು, ಆಸಿಫ್, ಪ್ರೇಮ್ ಸಾಗರ್, ರಾಜು, ಸರಗೂರು ಪಪಂ ಅಧ್ಯಕ್ಷೆ ಜ್ಯೋತಿ, ಸದಸ್ಯ ಶ್ರೀನಿವಾಸ್, ಜಯ ಕರ್ನಾಟಕ ಸಂಘಟನೆ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಆನಂದ್, ಮುಖಂಡರಾದ ಸುಂದರ ದಾಸ್, ಜಿ.ವಿ.ಸೀತಾರಾಮ್, ಪ್ರದೀಪ್, ಸೋಮೇಶ್, ಗಣೇಶ್ ಆಚಾರ್, ಜಯರಾಮ್, ಬಸಪ್ಪ, ಶಂಭುಲಿಂಗ ನಾಯಕ, ನಾಗರಾಜ್, ರಾಜನಾಯಕ, ಹೇಮಂತ, ಸಿದ್ದರಾಮ ಸೇರಿದಂತೆ ಸಾವಿರಾರು ಕಾರ್ಯಕರ್ತರು, ಮುಖಂಡರು ಭಾಗವಹಿಸಿದ್ದರು. ಈ ವೇಳೆ ಎಲ್ಲರಿಗೂ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

> ಕ್ಷೇತ್ರದಲ್ಲಿ ಒಂದು ಬಾರಿ ಗೆದ್ದವರು 2ನೇ ಬಾರಿ ಗೆಲ್ಲುವುದಿಲ್ಲ ಎಂಬ ಮಾತುಗಳು ಕೇಳಿ ಬರುತ್ತಿದ್ದವು. ಅವುಗಳನ್ನು ಸುಳ್ಳು ಮಾಡಿ ಭಾರೀ ಬಹುಮತ ನೀಡುವ ಮೂಲಕ 2ನೇ ಬಾರಿಗೆ ಶಾಸಕನನ್ನಾಗಿ ಆಯ್ಕೆ ಮಾಡಿದ ಕ್ಷೇತ್ರದ ಜನತೆಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ. ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳು ಆಗಬೇಕಿದ್ದು, ಅವುಗಳ ಅನುಷ್ಠಾನಕ್ಕೆ ಶಕ್ತಿ ಮೀರಿ ಶ್ರಮಿಸುತ್ತೇನೆ. ಹೀಗಾಗಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಅಗತ್ಯ ಅನುದಾನ ನೀಡಬೇಕು.
> –ಅನಿಲ್ ಚಿಕ್ಕಮಾದು, ಶಾಸಕ.

ಡಾ.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಅಗತ್ಯ ನೆರವು



> ಬಿಜೆಪಿ ಸರ್ಕಾರದ ನಿರ್ಲಕ್ಷ್ಯದಿಂದಾಗಿ ವರುಣ ಕ್ಷೇತ್ರದ ಟೌನ್ ವ್ಯಾಪ್ತಿಯಲ್ಲಿ ಕೋಟ್ಯಾಂತರ ರೂ.ಗಳ ಹಲವು ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಈಗಿನ ಸರ್ಕಾರದ ಮೊದಲ ವರ್ಷದಲ್ಲೇ ಅವುಗಳನ್ನು ಪೂರ್ಣಗೊಳಿಸಲು ಇರುವ ಅಡೆತಡೆ ನಿವಾರಿಸಬೇಕು. ಕುಡಿಯುವ ನೀರಿನ ಯೋಜನೆ ಶೀಘ್ರ ಅನುಷ್ಠಾನಗೊಳಿಸಬೇಕು. ಪಟ್ಟಣದಲ್ಲಿ ಮುಂದುವರೆದ ಅಭಿವೃದ್ಧಿ ಕಾಮಗಾರಿಗಳಿಗಾಗಿ ಹೆಚ್ಚಿನ ಅನುದಾನ ಕಲ್ಪಿಸಬೇಕು.
> –ಸಿ.ಪ್ರಕಾಶ್, ಪುರಸಭಾ ಸದಸ್ಯ

ತಿ.ನರಸೀಪುರ ಜೂ.26– ಈ ಬಾರಿಯ ಚುನಾವಣೆಯಲ್ಲಿ ವರುಣ ಕ್ಷೇತ್ರದ ಜನತೆ ಬಿಜೆಪಿ ತಿರಸ್ಕರಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಿರುವುದರಿಂದ ಅಲ್ಲಿನ ಜನರ ಅಹವಾಲುಗಳಿಗೆ ಮೊದಲ ಆದ್ಯತೆ ನೀಡುತ್ತೇನೆ. ಅಲ್ಲದೇ ಪಟ್ಟಣದ ತ್ರಿವೇಣಿ ನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಅಗತ್ಯ ನೆರವು ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಭರವಸೆ ನೀಡಿದರು.

ಮೈಸೂರು ಮುಖ್ಯರಸ್ತೆಯ ಎಡದೊರೆ ಬಳಿ ಪಟ್ಟಣದ ತ್ರಿವೇಣಿ ನಗರದ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದಿಂದ ಭವನ ನಿರ್ಮಾಣ ಸಂಬಂಧ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಭವನ ನಿರ್ಮಾಣಕ್ಕೆ ಅಗತ್ಯ ನಿವೇಶನ ಇದ್ದರೆ ಸಿಎಂ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು ಅಗತ್ಯ ಅನುದಾನ ಕಲ್ಪಿಸಲಾಗುವುದು ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಹಾಗೂ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎನ್.ಮಹೇಶ್ ಮಾತನಾಡಿ, ಬಹುತೇಕ ದಲಿತ ಕುಟುಂಬಗಳೇ ಹೆಚ್ಚಿನ ಸಂಖ್ಯೆಯಲ್ಲಿರುವ ತ್ರಿವೇಣಿ ನಗರದಲ್ಲಿ ಸಮುದಾಯಕ್ಕೆ ಭವನದ ಅಗತ್ಯವಿದೆ. ಭವನಕ್ಕಾಗಿ ನಿವೇಶನವೊಂದನ್ನು ಕಾಯ್ದಿರಿಸಲಾಗಿದ್ದು, ಅಲ್ಲಿ ಭವನ ನಿರ್ಮಿಸಲು ಸಿಎಂ ಹಾಗೂ ಸಚಿವರು ಹೆಚ್ಚಿನ ಅನುದಾನ ನೀಡಬೇಕೆಂದು ಮನವಿ ಮಾಡಿದರು.

ಈ ವೇಳೆ ಕಾರ್ಯದರ್ಶಿ ಕೆಂಚಪ್ಪ, ಖಜಾಂಚಿ ಶ್ರೀಧರ್, ಮಾಜಿ ಪ್ರಧಾನ ಡಿ.ಆರ್.ಮೂರ್ತಿ, ನಿರ್ದೇಶಕರಾದ ಪುಟ್ಟರಾಜು, ರಂಗಸ್ವಾಮಿ, ಸಿದ್ದರಾಜು, ಮಹದೇವಸ್ವಾಮಿ, ಮಲ್ಲರಾಜ್ ಮತ್ತಿತರರಿದ್ದರು.

ಆಟೋ ಮಗುಚಿ ಬಿದ್ದು 10 ಮಕ್ಕಳಿಗೆ ಗಾಯ



ತಿ.ನರಸೀಪುರ, ಜೂ.26– ಆಟೋ ಮಗುಚಿ ಬಿದ್ದ ಪರಿಣಾಮ 10 ಮಕ್ಕಳು ಗಾಯಗೊಂಡಿರುವ ಘಟನೆ ಕೊಳ್ಳೇಗಾಲ ಮುಖ್ಯರಸ್ತೆಯ ಆಲಗೋಡು ಸಮೀಪದ ಪಟ್ಟಲದಮ್ಮ ದೇವಾಲಯದ ಬಳಿ ಸೋಮವಾರ ಬೆಳಗ್ಗೆ ನಡೆದಿದೆ.

ತಾಲೂಕಿನ ಕರೋಹಟ್ಟಿ, ಕೇತಹಳ್ಳಿ ಗ್ರಾಮಗಳಿಂದ ಪಟ್ಟಣದ ಶಾಲೆಗಳಿಗೆ ನಿತ್ಯ ಮಕ್ಕಳು ಆಟೋದಲ್ಲಿ ಬರುತ್ತಿದ್ದರು. ಸೋಮವಾರವೂ ಮಕ್ಕಳು ಆಟೋದಲ್ಲಿ ಶಾಲೆಗೆ ಬರುವ ವೇಳೆ ಚಾಲಕನ ನಿಯಂತ್ರಣ ಕಳೆದುಕೊಂಡ ಆಟೋ ಪಟ್ಟಲದಮ್ಮ ದೇವಾಲಯದ ಬಳಿ ಮಗುಚಿ ಬಿದ್ದಿದೆ. ಪರಿಣಾಮ ಆಟೋದಲ್ಲಿದ್ದ ವಿದ್ಯಾರ್ಥಿಗಳಾದ ರಾಘವೇಂದ್ರ, ಹೇಮಾವತಿ ಸೇರಿದಂತೆ 10 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ತಕ್ಷಣ ಮಕ್ಕಳನ್ನು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಚಿಕಿತ್ಸೆ ಕೊಡಿಸಲಾಗಿದ್ದು, ಈ ಸಂಬಂಧ ಆಟೋ ಚಾಲಕನ ವಿರುದ್ಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ
ಸ್ಕ್ರೀನ್ 2	ಡೇರ್‌ಡೆವಿಲ್ ಮುಸ್ತಫಾ (ಕ): ಬೆ.10.05ಕ್ಕೆ, ಸಂ.6.50ಕ್ಕೆ, ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಮ.1.10ಕ್ಕೆ, ಜೆರ್ಸಿ ನಂಬರ್ 10 (ಕ): ಸಂ.4.05ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.10ಕ್ಕೆ.
ಸ್ಕ್ರೀನ್ 3	ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, ಪಿಚ್ಚೈಕಾರನ್2 (ತ): ಮ.1.20ಕ್ಕೆ, ಸಂ.4.25ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.7.30ಕ್ಕೆ, ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ): ಸಂ.9.55ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, ಪಿಚ್ಚೈಕಾರನ್ 2(ತ): ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ತಲೈ ನಾಗರಾಮ್ –2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆದಿಪುರುಷ (ಕ) ಆದಿಪುರುಷ (ಹಿ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಡಾರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಗ್ರಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಧೂಮಮ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪಾಯಮ್ ಓಲಿ ನೀ ಎನಕ್ಕು (ತ)	4 ಪ್ರದರ್ಶನಗಳು
ಸಂಗಂ	
ಆದಿಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಅಗ್ರಸೇನಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಾರಿಸು (ತ)	4 ಪ್ರದರ್ಶನಗಳು
ಪ್ರಭಾ	
ಜೈಲಲಿತ (ಕ)	4 ಪ್ರದರ್ಶನಗಳು

ಹಗಿನವಾಳು: ಶಾಲೆ ಬೀಗ ಮುರಿದು ಕಳ್ಳತನ

20 ಸಾವಿರ ರೂ., ಅಡುಗೆ ಪದಾರ್ಥ, ಡಿವಿಆರ್ ಕಳವು

ನಂಜನಗೂಡು, ಜೂ.26– ಶಾಲೆ ಬೀಗ ಮುರಿದು ನಗದು ಸೇರಿದಂತೆ ಸಾವಿರಾರು ಮೌಲ್ಯದ ವಸ್ತುಗಳನ್ನು ಕಳವು ಮಾಡಿರುವ ಘಟನೆ ತಾಲೂಕಿನ ಹಗಿನವಾಳು ಗ್ರಾಮದ ಗುರುಮಲ್ಲೇಶ್ವರ ಹೈಸ್ಕೂಲ್ ನಡೆದಿದೆ.

ಶನಿವಾರ ಶಾಲೆ ಮುಗಿದ ಬಳಿಕ ಶಿಕ್ಷಕರು ಶಾಲೆಗೆ ಬೀಗ ಹಾಕಿ ತೆರಳಿದ್ದರು. ಆದರೆ ಸೋಮವಾರ ಬೆಳಗ್ಗೆ ಶಾಲೆಗೆ ಬಂದಾಗ ಕಳವು ಪ್ರಕರಣ ಬೆಳಕಿಗೆ ಬಂದಿದೆ. ಶಾಲೆ ಬೀಗ ಮುರಿದು ಒಳನುಗ್ಗಿರುವ ದುಷ್ಕರ್ಮಿಗಳು 20 ಸಾವಿರ ರೂ, ಒಂದು ಡಿವಿಆರ್ ಹಾಗೂ ಅಡುಗೆ ಪದಾರ್ಥಗಳನ್ನು ಕಳವು ಮಾಡಿ ಪರಾರಿಯಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೆರಳಚ್ಚು, ಶ್ವಾನದಳ ಸಿಬ್ಬಂದಿ ಪರಿಶೀಲನೆ ನಡೆಸಿದರು. ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಣಸೂರಲ್ಲಿ ಅದ್ಧೂರಿ ಬಸವ ಜಯಂತಿ



ಹುಣಸೂರು, ಜೂ.26– ಹುಣಸೂರಲ್ಲಿ ಸೋಮವಾರ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಬಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಬಸವ ಜಯಂತಿ ಕಾರ್ಯಕ್ರಮ ಅದ್ಧೂರಿಯಾಗಿ ನಡೆಯಿತು.

ಮೊದಲಿಗೆ ಮೈಸೂರು ರಸ್ತೆಯ ಆಂಜನೇಯಸ್ವಾಮಿ ದೇವಾಲಯದ ಬಳಿ ನಂದಿಕಂಬಕ್ಕೆ ಪೂಜೆ ಸಲ್ಲಿಸಿದ ನಂತರ ವಾದ್ಯಮೇಳ ಹಾಗೂ ವಿವಿಧ ಕಲಾ ತಂಡಗಳೊಂದಿಗೆ ಮುನೇಶ್ವರ ಕಾವಲ್ ಮೈದಾನಕ್ಕೆ ಮೆರವಣಿಗೆ ತಲುಪಿತು.

ಇಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು, ಪಕ್ಷಾತೀತವಾಗಿ ರಾಜಕೀಯ ಮುಖಂಡರು ಹಾಗೂ ಜನಪ್ರತಿನಿಧಿಗಳು ಭಾಗವಹಿಸಿದ್ದರು. ತುಮಕೂರು ಸಿದ್ಧಗಂಗಾ ಶ್ರೀಗಳಾದ ಸಿದ್ಧಲಿಂಗ ಸ್ವಾಮೀಜಿ ಮಾತನಾಡಿ, ಧಾರ್ಮಿಕ ಮತ್ತು ಸಾಮಾಜಿಕ ಸಮಾನತೆ ಜೀವನದ ಉತ್ತಮ ಮೌಲ್ಯಗಳು. ಇವು ಪ್ರತಿಯೊಬ್ಬರಿಗೂ ಸಿಗಲೆಂಬ ಆಶಯದೊಂದಿಗೆ 12ನೇ ಶತಮಾನದಲ್ಲೇ ಪುರುಷರು ಮತ್ತು ಮಹಿಳೆಯರ ಸಮಾನತೆಯ ಬಗ್ಗೆ ಜಾಗೃತಿ ಮೂಡಿಸುವ ಅನುಭವ ಮಂಟಪ ಕಟ್ಟಿ ಎಲ್ಲಾ ಚಿಂತಕರನ್ನು ಒಟ್ಟು ಸೇರಿಸಿ ಮಾನವೀಯ ಮೌಲ್ಯಗಳನ್ನು ಮನದಟ್ಟು ಮಾಡಿಕೊಡುವ ಮೂಲಕ ಬಸವಣ್ಣನವರು ನೀಡಿದ ವಚನಗಳು ಮತ್ತು ತತ್ವಗಳು ಇಂದು ನಮ್ಮ ಬದುಕಿಗೆ ಹಾಸು ಹೊಕ್ಕಾಗಿವೆ ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, 12ನೇ ಶತಮಾನದಲ್ಲೇ ಮಹಿಳೆಯರಿಗೆ ಸಮಾನತೆ, ದೇವಾಲಯಗಳ ಪ್ರವೇಶದ ಬಗ್ಗೆ ತಮ್ಮ ವಚನಗಳ ಮೂಲಕ ಸಮಾಜಕ್ಕೆ ಸಾರಿದ ಮಹಾನ್ ವ್ಯಕ್ತಿ ಬಸವಣ್ಣ ಎಂದರು.

ಸಂಸದ ಪ್ರತಾಪ್ ಸಿಂಹ ಮಾತನಾಡಿ, ಬಸವಾದಿ ಮಠ ಮಾನ್ಯಗಳು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಇಂದಿಗೂ ಸಾಕಷ್ಟು ಕೆಲಸ ಮಾಡುತ್ತಿವೆ. ಜೊತೆಗೆ ಅನ್ನ ದಾಸೋಹ ನಡೆಸುವ ಮೂಲಕ ಹಸಿವನ್ನು ನೀಗಿಸುತ್ತಿವೆ. ಇಂತಹ ಸಮಾಜಮುಖಿ ಕೆಲಸಗಳನ್ನು ಎಲ್ಲಾ ಸಮಾಜಗಳು ಅನುಕರಣೆ ಮಾಡಬೇಕು ಎಂದರು.

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿ, ಬಸವಣ್ಣನವರ ತತ್ವ ಸಿದ್ಧಾಂತಗಳು ಸಮ ಸಮಾಜದ ಬಗ್ಗೆ ಚಿಂತನೆ ಮೂಡಿಸುವ, ಸಾಮಾಜಿಕ ಮತ್ತು ಧಾರ್ಮಿಕ ಚಿಂತನೆಗಳ ವಿಚಾರಗಳು ಪ್ರತಿಯೊಬ್ಬರಿಗೂ ಪ್ರೇರಣೆಯಾಗಬೇಕು ಎಂದರು.

ಉದ್ಘಾಟನಾ ಭಾಷಣ ಮಾಡಿದ ಶಾಸಕ ಗಣೇಶ್‌ಪ್ರಸಾದ್, ವೀರಶೈವ ಲಿಂಗಾಯತ ಸಮಾಜವು ಬಸವಣ್ಣನವರ ತತ್ವಾದರ್ಶಗಳನ್ನು ರೂಢಿಸಿಕೊಂಡು ಶೈಕ್ಷಣಿಕವಾಗಿ ರಾಜ್ಯದೆಲ್ಲೆಡೆ ಶಿಕ್ಷಣ ನೀಡುತ್ತಿದ್ದು, ಜೊತೆಗೆ ಅನ್ನ ದಾಸೋಹ ಮಾಡುವ ಮೂಲಕ ರಾಷ್ಟ್ರಕ್ಕೆ ಮಾದರಿಯಾಗಿವೆ ಎಂದರು.

ಮಹದೇಶ್ವರ ಬೆಟ್ಟದ ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿದರು. ಅಂತಿಮವಾಗಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮಾದಳ್ಳಿ ಮಠದ ಸಾಂಬ ಸದಾಶಿವ ಸ್ವಾಮೀಜಿ, ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ನಟರಾಜ ಸ್ವಾಮೀಜಿ, ಕನಕಪುರ ದೇಗುಲ ಮಠದ ಚನ್ನಬಸವ ಸ್ವಾಮೀಜಿ, ವೀರಶೈವ ಮಹಾಸಭಾ ಅಧ್ಯಕ್ಷ ಯು.ಎಸ್.ಬಸವರಾಜು, ಬಸವ ಬಳಗದ ಅಧ್ಯಕ್ಷ ಬಿ.ಕೆ.ಕೂಸಪ್ಪ, ಮಾಜಿ ಜಿಪಂ ಸದಸ್ಯೆ ಗೌರಮ್ಮ, ರಮೇಶ್‌ಕುಮಾರ್, ಸೋಮಶೇಖರ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

> ಯಾರಿಗಾದರೂ ಏನಾದರೂ ಮಾಡುವಾಗ ಒಳ್ಳೆಯ ಹೃದಯದಿಂದ, ಒಳ್ಳೆಯ ಮನಸಿನಿಂದ ಮಾಡಿದರೆ ಒಳ್ಳೆಯ ಪ್ರತಿಫಲ ಸಿಕ್ಕೇ ಸಿಗುತ್ತದೆ. ನಮ್ಮ ಮನಸ್ಸಿನಲ್ಲಿ ಸಾಕಷ್ಟು ಕಲ್ಮಶ ತುಂಬಿಕೊಂಡು ಒಲ್ಲದ ಮನಸ್ಸಿನಲ್ಲಿ ಮಾಡಿದರೆ ಫಲ ಸಿಗುವುದೆಲ್ಲಿಂದ? ನಾವೇ ಸರಿ ಇಲ್ಲದೆ ಲೋಕದ ಡೊಂಕನ್ನು ಸರಿಪಡಿಸಲು ಸಾಧ್ಯವೇ? – ಜಿ.ಡಿ.ಹರೀಶ್‌ಗೌಡ, ಶಾಸಕ.

> ಕ್ಷೇತ್ರದಲ್ಲಿ ಕಳೆದ 15 ವರ್ಷಗಳಿಂದ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದರೂ, ನನ್ನಿಂದ ಸಾಕಷ್ಟು ಪ್ರಯೋಜನಗಳನ್ನು ಪಡೆದರೂ ಕೂಡ ಜನರು ನನ್ನನ್ನು ಸೋಲಿಸಿದರು. ಊರ ಶೃಂಗಾರ ಮಾಡಿದರೇನು ಫಲ ಹಾಗೆ ಸತ್ತ ಹೆಣಕ್ಕೆ ಶೃಂಗಾರ ಮಾಡಿದರೇನು ಫಲ ಎರಡು ಒಂದೇ. ನನ್ನ ರೀತಿ ನೀವು ದಡ್ಡರಾಗಬೇಡಿ. –ಹೆಚ್.ಪಿ.ಮಂಜುನಾಥ್, ಮಾಜಿ ಶಾಸಕ.


ಯುವ ನಾಯಕ ಜನಾನುರಾಗಿ
ಸಂಘಟನಾ ಚತುರ ವರುಣಾ ಕ್ಷೇತ್ರದ
ಜನಪ್ರಿಯ ನಿಕಟಪೂರ್ವ ಶಾಸಕರಾದ
ಶ್ರೀ ಯತೀಂದ್ರ ಸಿದ್ದರಾಮಯ್ಯ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಎನ್.ಅನಿಲ್ ಕುಮಾರ್
ಎ.ಪಿ.ಎಂ.ಸಿ. ಮಾಜಿ ಅಧ್ಯಕ್ಷರು, ಟಿ.ನರಸೀಪುರ
ಎನ್. ಸೋಮು
ಮಾಜಿ ಅಧ್ಯಕ್ಷರು ಪುರಸಭಾ, ಹಾಲಿ ಸದಸ್ಯರು, ಟಿ.ನರಸೀಪುರ
ರವಿ ಎನ್ ಗೌಡ
ಕಾಂಗ್ರೇಸ್ ಮುಖಂಡರು, ಮೆಲ್ಲಹಳ್ಳಿ, ವರುಣಾ ವಿಧಾನ ಸಭಾ ಕ್ಷೇತ್ರ
ಅನು ಕುಮಾರ್ ಗೌಡ
ಜಿಲ್ಲಾ ಯುವ ಕಾಂಗ್ರೇಸ್ ಪ್ರಧಾನ ಕಾರ್ಯದರ್ಶಿ ಹಾಗೂ ಗುತ್ತಿಗೆದಾರರು
VISMAYA
8050302424